UNIVERSAL LIBRARY
OU_200752
UNIVERSAL LIBRARY

|| ಶ್ರೀ ಹರಿಃ ಓಂ ||

ಧ್ರುವರಾಜರಂಶದಿಂದ ಬ್ರಹ್ಮಾವಿಷ್ಟರಾಗಿ ಅವತರಿಸಿದ

ಶ್ರೀ ಶ್ರೀಪಾದರಾಜಯತೀಶ್ವರ ವಿರಚಿತ

# ಶ್ರೀ ಮಧ್ವನಾಮ

(ಟೀಕಾ ತಾತ್ಪರ್ಯ ಸಹಿತ)


ಲೇಖಕರು :

ಶ್ರೀ. ಬೆಳ್ಳೀಕಲಮದಾನಿ ನಾರಾಯಣರಾಯರು

ಧಾರವಾಡ



೧೯೪೦

ಬೆಲೆ ಎಂಟು ಆಣೆ

# ಇದೇ ಗ್ರಂಥಕರ್ತರ ಬೇರೆ ಗ್ರಂಥಗಳು

1 Haridasas of Karnatak 1—8—0
೨ ಶ್ರೀ ಜಗನ್ನಾಥರಾಯರ ಚರಿತ್ರೆ ೦—೪—೦
೩ ಏಕಾದಶೀ ಮಹಾತ್ಮೆ ೦—೪—೦

CHECKED. 1951

## ಬರಲಿರುವ ಗ್ರಂಥಗಳು

೧ ಶ್ರೀಮದ್ಭಾಗವತ ಸಾರೋದ್ಧಾರ
(ಕನ್ನಡ ಅನುವಾದ)
೨ ಪಂಚಭೇದ ತಾರತಮ್ಯ
೩ ದ್ವೈತಸಿದ್ಧಾಂತ ರಹಸ್ಯ
೪ ಶ್ರೀಮದ್ಧರಿಕಥಾಮೃತಸಾರಾರ್ಥಸಂಗ್ರಹ
೫ ಕರ್ನಾಟಕದ ಹರಿದಾಸರು (೬ ಸಂಪುಟ)

CHECKED 1956
Checked 1962
Checked 1969

೧೯೪೦

ಸರ್ವಾಧಿಕಾರವು ಲೇಖಕರದು

ಪ್ರಕಾಶಕರು :
ಶ್ರೀ ನಾ. ಭೀ. ಬೆಳ್ಳೀಕಲಮದಾನಿ
ರಿ. ರೇಲ್ವೆ ಎಂಜಿನಿಯರ
ಕಿಲ್ಲೆ, ಧಾರವಾಡ

ಮುದ್ರಕರು :
ನಾ. ಅ. ಹೊಸಕೇರಿ
ವಿಜಯ ಮುದ್ರಾಲಯ
ಧಾರವಾಡ

# ಅಧಿಕಾರಿಗಳಲ್ಲಿ ಅರಿಕೆ

ಕರ್ಮಜದೇವತೆಗಳಲ್ಲಿ ಮೊದಲಿನವರೆನಿಸಿದ ಶ್ರೀಧ್ರುವರಾಜರಂಶದಿಂದ ಬ್ರಹ್ಮಾವಿಷ್ಟರಾಗಿ ಅವತರಿಸಿದ ಶ್ರೀ ಶ್ರೀಪಾದರಾಜಯತೀಶ್ವರರು ವಿರಚಿಸಿದ ಸುರಗುರುಗಳಾದ ಶ್ರೀ ಪ್ರಧಾನ ವಾಯುದೇವರ ಪೂರ್ಣವರ್ಣನೆಯ ದಿವ್ಯ ನಾಮಕ್ಕೆ, ಟೀಕಾತಾತ್ಪರ್ಯವನ್ನು ಅಜ್ಞಾನಿಯಾದ ನನ್ನಿಂದ ಪ್ರಧಾನತತ್ವೇಶರು ಬರೆಸಿರುವದು, ಭಗವಾನ್ ಶ್ರೀಮದ್ವೇದವ್ಯಾಸದೇವರು ಅತಿ ಕ್ಷುದ್ರ ಕ್ರಿಮಿಯೊಂದರಿಂದ ಮಹಾಸಾಮ್ರಾಜ್ಯವನ್ನು ಅನುಗ್ರಹಿಸಿ ಆಳಿಸಿದಂತೆಯೇ ಆಗಿರುವದು. " **ಅರಸುಮೆಚ್ಚಲು ದಾಸಿ ರಂಭೆಯೆನಿಸುವಳು । ಪರಶು ಮುಟ್ಟಲು ಲೋಹ ಸ್ವರ್ಣ ಗೋವಿಂದ** " ಎಂಬ ಇದೇ ಶ್ರೀಪಾದರಾಜರ ಅಮೃತವಾಣಿಯುತ ಪದದಂತೆ, ಯದ್ಯಪಿ ನಾನು ಅಲ್ಪಜ್ಞನಾದಾಗ್ಯೂ, ನನ್ನಲ್ಲಿ ನಿಂತ ಶ್ರೀಪಾದರಾಜರಂತರ್ಗತ ವಿಜ್ಞಾನ ಮೂರುತಿಯಾದ ಪ್ರಧಾನವಾಯು ದೇವರು ಮಹಾ ಸಮರ್ಥರಾಗಿದ್ದು, ತನು ಮನಗಳನ್ನು ತಮ್ಮ ಕಥಾರೂಪದ ಸೇವೆಯಲ್ಲಿ ಎರಗಿಸಿ ಕಾರ್ಯಕೈಕೊಳ್ಳಬೇಕೆಂಬುವಾಗ್ಗೆ " **ಭವತಿ ಯದನು ಭಾವಾದೇಡ ಮೂಕೋಽಪಿ ವಾಗ್ಮೀ । ಜಡಮತಿರಪಿ ಜಂತುರ್ಜಾಯತೇ ಪ್ರಾಜ್ಞಮೌಲೀ; ॥** " ಎಂಬ ಸತ್ಯವಚನದಂತೆ ಅಘಟಿತವಾದ ಕಾರ್ಯವೂ ಕೂಡ ಘಟನವಾಗುವದರಲ್ಲಿ ಸಂದೇಹವಿಲ್ಲ.

ಶಾಸ್ತ್ರ ವಿಚಾರದ ಗ್ರಂಥಗಳನ್ನು ಬರೆಯುವದು ಆ ಶಾಸ್ತ್ರಮರ್ಯಾದೆಯನ್ನು ಬಲ್ಲ ಅಧಿಕಾರಿಗಳಿಗೆ ಸಲ್ಲುವ ಕಾರ್ಯವು. ಯಾಕಂದರೆ, ಅತೀಂದ್ರಿಯವಾದ (ಆಧ್ಯಾತ್ಮಿಕ) ವಿಷಯವನ್ನು ಕುರಿತು ಬರೆಯುವದು ಸುಲಭವಲ್ಲ. ಮತ್ತು ಆ ವಿಷಯವನ್ನು ಎಷ್ಟೆಷ್ಟು ಬರೆದಾಗ್ಯೂ ಸಾಲದೆ, ಮಳಲ ಹಗೆಯನ್ನು ತೋಡಿದಂತೆಯೇ ಇರುವದು. ಆದುದರಿಂದ, ನ್ಯೂನಾದಿ ಛಿದ್ರಾನ್ವೇಷಣದಲ್ಲಿಯೇ ಲಕ್ಷ್ಯವನ್ನಿಡದ ಮಹನೀಯರು, ಈ ಗ್ರಂಥದಲ್ಲಿ ಗುಣವಿದ್ದದ್ದನ್ನು ಮಾತ್ರ ಸ್ವೀಕರಿಸಿ ಮಿಕ್ಕದ್ದನ್ನು ಅಲ್ಲಿಯೇ ಬಿಟ್ಟು ಬಿಡುವರೆಂದು ನಂಬಿರುವೆನು. ಈ ಗ್ರಂಥಬರಹದಲ್ಲಿ ನಿರ್ದೋಷವಾದದ್ದೆಲ್ಲ ತತ್ವೇಶರಿಗೆ ಸಂದಿದ್ದು. ದೋಷಯುತವಾದುದೆಲ್ಲ ನನ್ನ ಅಜ್ಞಾನ ದೋಷಕ್ಕೆ ಸಂಬಂಧಿಸಿದ್ದು.

ವಾಯುದೇವರ ಮೂಲ ಹಾಗೂ ಅವತಾರಗಳ ಕಥಾರೂಪದ ಈ ಮಧ್ವನಾಮವು " **ಬಳಿತ್ಥಾಸೂಕ್ತ, ಪವಮಾನಸೂಕ್ತ, ಮನ್ಯುಸೂಕ್ತ,**

**ವಾಯುಸ್ತುತಿ**" ಗಳಿಗೆ ಸಮಾನವಾಗಿದ್ದು, ಇಂಥಾದ್ದನ್ನು ಶ್ರೀಪಾದರಾಯರು "**ವಾಯುಸ್ತುತಿ,**" ಎಂಬ ಮೂಲರೂಪದ ಹೆಸರಿಟ್ಟು ಕರೆಯದೆ ಕೊನೆಯ ಅವತಾರದ '**ಮಧ್ವನಾಮ**' ವೆಂದು ಕರೆದದ್ದನ್ನು ಊಹಿಸುವದು ಸುಸಾಧ್ಯ ವಿಲ್ಲ. ಆದಾಗ್ಯೂ, ಈಗಿನ ಅವತಾರರೂಪದ ನಾಮವೆಂದಾಗಲಿ ಅಥವಾ ಪದ್ಯದ ಪಲ್ಲವಿಯಲ್ಲಿ ಹೇಳಿದ ನಾಮವೆಂದಾಗಲಿ, ಅಥವಾ ಸಿದ್ಧಾಂತರೂಪದ ಸಚ್ಛಾಸ್ತ್ರವನ್ನು ರಚಿಸಿ ಸಜ್ಜನರನ್ನುದ್ಧಾರಗೈದ ರೂಪವೆಂದಾಗಲಿ. ಆ ನಾಮ ದಿಂದ ಕರೆದಿರಬಹುದು. ಆದುದರಿಂದ, ದೇವತೆಗಳ ದೇವವಾಣಿಯ ಈ ಪದವನ್ನು ಪ್ರಾಕೃತ **ಪವಮಾನಸೂಕ್ತ, ವಾಯುಸ್ತುತಿ** ಎಂದೇ ವಾಯು ಭಕ್ತರು ಗ್ರಹಿಸಿ ಇದನ್ನು ನಿತ್ಯದಲ್ಲೂ ಪಠಿಸುವರೆಂಬುದರಲ್ಲಿ ಸಂದೇಹವಿಲ್ಲ.

ಶ್ರೀಪಾದರಾಜರಿಂದ ಈ ಪದವು ೨೯ ನುಡಿಗಳಾಗಿ ರಚಿಸಲ್ಪಟ್ಟಿದ್ದು, ಇದನ್ನು ಸಲ್ಲಕ್ಷಣಸೂಚಕವಾದ ೩೨, ಈ ಸಂಖ್ಯೆಯಿಂದ ಪರಿಪೂರ್ಣಗೊಳಿಸ ಲಿಕ್ಕೆಂದೇ ಶ್ರೀಮಜ್ಜಗನ್ನಾಥದಾಸರು ಮೂಲಪದಕ್ಕೆ ತಮ್ಮ ೩ ನುಡಿಗಳನ್ನು ಫಲಶ್ರುತಿರೂಪವಾಗಿ ಸೇರಿಸಿರಬಹುದು. ೩೨ ಎಂಬುದು ಶುಭಸಂಖ್ಯೆಯು. ಇದು ಪೂರ್ಣಗುಣವು. ಬ್ರಹ್ಮ, ವಾಯು, ವಾಣಿ, ಭಾರತಿದೇವಿಯರು ೩೨ ಸಲ್ಲ ಕ್ಷಣಗಳುಳ್ಳವರು. ಈ ೩೨ ಸಲ್ಲಕ್ಷಣಪೂರ್ಣರಾದ ವಾಯುದೇವರ ವರ್ಣನಾತ್ಮಕ ಪದವಾದರೂ ಮೂವತ್ತೆರಡೇ ನುಡಿಗಳಿಂದ ಪೂರ್ಣವಾಗಿರತಕ್ಕದ್ದೆಂದು ಜಗ ನ್ನಾಥದಾಸರು ಮೂರೇನುಡಿಗಳಿಂದ ತಮ್ಮ ಫಲಶ್ರುತಿಯನ್ನು ಮುಗಿಸಿರ ಬೇಕೆಂದು ತೋರುತ್ತದೆ. ಈ ಬರಹವನ್ನು ಪೂರೈಸುವ ಪೂರ್ವದಲ್ಲಿ ಈ ಕವನ ಕರ್ತರ ಕಥನವನ್ನು ಯಥೋಚಿತಮಾಡುವದು ಶ್ರೇಯಸ್ಕರವಾದದ್ದು. ಈ ಮಹಾತ್ಮರು ಸ್ವರೂಪತಃ ಯಾರೆಂಬುದನ್ನು ಹಿಂದೆಯೇ ಹೇಳಿದೆ ಈ ಪಾಪ ಮಯವಾದ ಕಲಿಯುಗದಲ್ಲಿ ಭಗವದ್ಭಕ್ತರಾದ ಸಜ್ಜನರ ಉದ್ಧಾರಾರ್ಥವಾಗಿ ಭಗವಾನ್ ಶ್ರೀ ಪ್ರಧಾನ ವಾಯುದೇವರೇ ಆದಿಯಾಗಿ ಎಲ್ಲ ದೇವತೆಗಳೂ ಈ ಭರತಖಂಡದಲ್ಲಿ ಅವತರಿಸುವಂತೆ, ಈ ಗ್ರಂಥಕರ್ತರೂ ಕಾವೇರಿತೀರದಲ್ಲಿರುವ ಮಹಾಕ್ಷೇತ್ರವಾದ ಶ್ರೀರಂಗದಲ್ಲಿ ಸುಮಾರು ಕ್ರಿ. ಶ. ೧೪೫೦-೬೦ರ ಮಧ್ಯದಲ್ಲಿ ಅವತರಿಸಿದರು. ಇವರು ೭-೮ ವಯಸ್ಸಿನವರಿರುವಾಗಲೇ ಸನ್ಯಾಸವು ಇವರಿಗೆ ಆದಂತೆ ತಿಳಿಯುತ್ತದೆ. ಶ್ರೀಮದಾಚಾರ್ಯರ ಪ್ರತ್ಯಕ್ಷ ಶಿಷ್ಯರಾದ ಶ್ರೀಪದ್ಮ ನಾಭತೀರ್ಥರ ಮಠವಾದ ಮುಳಬಾಗಿಲ ಪೀಠದ ೭ನೇಯ ಯತಿಗಳಾದ ಶ್ರೀ

ಸ್ವರ್ಣವರ್ಣತೀರ್ಥರಿಂದ ಇವರು ಸನ್ಯಾಸವನ್ನು ಗ್ರಹಿಸಿದರು. ಶ್ರೀಲಕ್ಷ್ಮೀ ನಾರಾಯಣಯೋಗಿ (ಮುನಿ) ಎಂಬುದೇ ಇವರ ಸನ್ಯಾಸದ ಹೆಸರು. ಇವರ ಅದ್ಭುತವಾದ ಮಹಾಮಹಿಮೆಗಳು ಅನೇಕವಾಗಿದ್ದು, ಕೆಲವನ್ನು ಮಾತ್ರ ಇವರ ವಿದ್ಯಾಶಿಷ್ಯರಾದ ಶ್ರೀಮದ್ವ್ಯಾಸರಾಜಯತಿಚಕ್ರವರ್ತಿಗಳು "**ಮಹಿಮೆ ಸಾಲದೇ ಇಷ್ಟೇ ಮಹಿಮೆಸಾಲದೇ** ॥" ಎಂಬ ಪದದಲ್ಲಿ ವರ್ಣಿಸಿದ್ದಾರೆ. ಇವರ ವೃಂದಾವನವು ಮೈಸೂರ ಇಲಾಖಾ ಮುಳಬಾಗಿಲಲ್ಲಿದ್ದು ಪ್ರತಿ ವರ್ಷವೂ ಬಹು ವಿಜೃಂಭಣೆಯಿಂದ ಆರಾಧನೆಗೊಳ್ಳುತ್ತಿರುವರು.

ಶ್ರೀಮದಾಚಾರ್ಯರ ಕಾಲದಿಂದಲೂ, ವೇದಾದಿ ಸಚ್ಛಾಸ್ತ್ರ ಗ್ರಂಥಗಳೆಲ್ಲ ಗೀರ್ವಾಣಭಾಷೆಯಲ್ಲಿಯೇ ಇದ್ದು, ಆ ಭಾಷೆಯನ್ನರಿಯದಿದ್ದ ಸುಜೀವರಾದ ಸ್ತ್ರೀ ಪುರುಷರು, ಸುಜ್ಞಾನಾರ್ಜನೆಗಾಗಿ ಬಹು ಸಂಕಟಪಡುತ್ತಿರುವದನ್ನು ನೋಡಿ, ಸಮಸ್ತ ಸಜ್ಜನರೋದ್ಧಾರಾರ್ಥವಾಗಿಯೇ ಅವತರಿಸಿ ಸುಹೃದ್ಬಂಧು ಗಳಾದ ರಾಜರು ಬಹುಕಾಲದಿಂದ ನಡೆದು ಬಂದಿದ್ದ ಭಾಷಾ ವೈಷಮ್ಯವುಳ್ಳ ವೈದಿಕರ ಅಂಧಶ್ರದ್ಧೆಯ ಹಟವನ್ನು ಬಲಾತ್ಕಾರದಿಂದ ಹೋಗಲಾಡಿಸಲು, ಶ್ರೀಮದಾಚಾರ್ಯರ ಮತಸಿದ್ಧಾಂತದ ಸಾರವನ್ನು ಪ್ರಾಕೃತ ಪದ, ಸುಳಾದಿ, ಉಗಾಭೋಗಾದಿಗಳ ರೂಪವಾಗಿ ರಚಿಸಿ, ಕನ್ನಡಕ್ಕಿದ್ದ ಅಮನ್ನಣೆಯ ತಿರಸ್ಕಾರ ವನ್ನು ನಿವಾರಿಸಿ ಸಜ್ಜನರಿಗೆ ಮರೆಯದ ಮಹದುಪಕಾರವನ್ನು ಮಾಡಿದರು. ಈ ಉದಾರತ್ವವನ್ನು ಕಂಡು ಅವರಲ್ಲಿ ಮಹಾಭಕ್ತಿ, ಆದರ, ವಿಶ್ವಾಸಗಳು ಉತ್ಪನ್ನವಾಗಿ ಶ್ರೀಜಗನ್ನಾಥದಾಸರು ತಮ್ಮ ಪೂರ್ವಪಾಂಡಿತ್ಯದ ಅಭಿಮಾನ ವನ್ನು ಪೂರ್ಣಬಿಟ್ಟು, ಪ್ರಾಕೃತದಲ್ಲಿ ಶ್ರೀಮದ್ಧರಿಕಥಾಮೃತಸಾರಾಖ್ಯ ಗ್ರಂಥ ವನ್ನೂ ಸಹಸ್ರಾರು ಪದ ಸುಳಾದಿಗಳನ್ನೂ ರಚಿಸಿದರಷ್ಟೇ ಅಲ್ಲದೆ, ತಮ್ಮ ಸೇವೆ ಯನ್ನರ್ಪಿಸಲು ಶ್ರೀಪಾದರಾಜರ ಮಧ್ವನಾಮಕ್ಕೆ ಫಲಶ್ರುತಿಯನ್ನೂ ಬರೆದರು.

ಸಂಸ್ಕೃತದ ತರುವಾಯ ಪ್ರಾಕೃತವೆನಿಸುವ ಕನ್ನಡ ಭಾಷಾಕ್ಕೇನೆ ಹೆಚ್ಚಿನ ಪ್ರಾಶಸ್ತ್ಯವಿರುವದು. ಯಾಕಂದರೆ, ಸಂಸ್ಕೃತದಂತೆ ಕನ್ನಡವೂ ಅನ್ಯ ಭಾಷೆಯ ಸಹಾಯವಿಲ್ಲದೆ ಕೇವಲ ಸ್ವತಂತ್ರವಾದ ಭಾಷೆಯಾಗಿರುವದು ಈ ಮಾತಿನ ನಿಜತ್ವಕ್ಕಾಗಿ ಪುರಾತನದ ಹಳೆಗನ್ನಡ ಗ್ರಂಥಗಳನ್ನು ವಿಮರ್ಶಿಸ ಬಹುದು. ಕಾಲಮಾನದಿಂದ ವಿಚಾರ ಮಾಡಿದರೂ ಕನ್ನಡವು ಬಹು ಪುರಾ ತನದ ಭಾಷೆಯಾಗಿದ್ದು, ತ್ರೇತಾಯುಗದ ಕಪಿವೀರರೂ ಇದೇ ಭಾಷೆಯನ್ನಾಡು

ತ್ತಿದ್ದರೆಂದು ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ತಿಳಿಯುತ್ತದೆ. ಈ ಪಾವಿತ್ರ್ಯದ ಗೌರವವಿಶಿಷ್ಟವಾದುದರಿಂದಲೇ, ಸರ್ವಜ್ಞರಾದ ಶ್ರೀಸೋದೆಯ ಗುರುರಾಜರೂ ಕೂಡ ತಮ್ಮ ಪರಮಗುರುಗಳಾದ (ಗುರುಗಳಾದ ವ್ಯಾಸರಾಯರ ಗುರುಗಳಾದ) ಶ್ರೀಪಾದರಾಯರ ಅನುಕರಣವನ್ನೇ ಮಾಡಿ ಶುದ್ಧವಾದ ಕನ್ನಡದಲ್ಲಿಯೇ ಶ್ರೀಮದ್ಭಾರತತಾತ್ಪರ್ಯನಿರ್ಣಯಾದಿ ಬೃಹದ್ಗ್ರಂಥಗಳನ್ನೂ ಅನೇಕ ಸಾವಿರ ಪದ್ಯ, ಗದ್ಯಗಳನ್ನೂ ರಚಿಸಿದರು. ಹೀಗೆ ತಾವಷ್ಟೇ ಕನ್ನಡಭಾಷೆಯನ್ನು ಉದ್ಧರಿಸಿ ಮೆರೆಸದೆ, ಸ್ವಪ್ನದಲ್ಲಿ ಶ್ರೀಜಗನ್ನಾಥದಾಸರಿಗೂ ಆಜ್ಞೆಯನ್ನಿತ್ತು ದ್ವೈತಸಿದ್ಧಾಂತಸಾರರೂಪವಾದ ಶ್ರೀಮದ್ಧರಿಕಥಾಮೃತಸಾರವೆಂಬ ಮಹಾಪ್ರಮೇಯಪುಂಜವಾದ ಗ್ರಂಥವನ್ನು ಕನ್ನಡದಲ್ಲಿ ರಚಿಸಲು ಅಜ್ಞಾಪಿಸಿತ್ತರು. ಈ ವಿಧವಾಗಿ ಪ್ರಾಕೃತವೆನಿಸುವ ಕನ್ನಡಭಾಷೆಗೆ ಸಲ್ಲುವ ಪ್ರಾಶಸ್ತ್ಯ ಗೌರವಗಳನ್ನು ಕೊಟ್ಟು, ಭಗವಂತನಾದ ಶ್ರೀಹರಿಯನ್ನೂ ಆತನ ಭಕ್ತಶ್ರೇಷ್ಠರಾದ ದೇವತೆಗಳನ್ನೂ ವರ್ಣಿಸುವ ಪ್ರಾಕೃತವೂ ಸಹ ಸಂಸ್ಕೃತವೆಂದೇ ಸಮರ್ಥನಗೈದು, ಭಾಷಾ ದುರಭಿಮಾನವನ್ನು ನಿವಾರಿಸಿ, ವಿಷಯಕ್ಕೇನೆ ಪ್ರಾಶಸ್ತ್ಯ, ಭಾಷಾಕ್ಕಲ್ಲವೆಂಬ ತತ್ವವನ್ನು ಸ್ಥಾಪಿಸಿದ ಶ್ರೀ ಶ್ರೀಪಾದರಾಜರ ಪಾದಪದ್ಮಗಳಿಗೆ ದಂಡ ಪ್ರಣಾಮಗೈದು ನನ್ನ ಈ ಲೇಖವನ್ನು ಮುಗಿಸುತ್ತೇನೆ.

ಈ ಗ್ರಂಥಕ್ಕೆ ಪೀಠಪ್ರಾಯವಾಗಿ ಪದದ ಸಂಕ್ಷಿಪ್ತಾರ್ಥವನ್ನು ಬರೆದು ಕೊಟ್ಟ, ನನ್ನ ಅಣ್ಣಂದಿರಾದ ಶ್ರೀ. ಲಕ್ಷ್ಮಣರಾವ ಬೆಳ್ಳೀಕಲಮುದಾನಿ, ವಕೀಲ ಹಾವೇರಿ ಇವರಿಗೆ ನನ್ನ ವಂದನೆಗಳನ್ನರ್ಪಿಸಿ, ನನಗೆ ಗ್ರಂಥ ಸಹಾಯ ಮಾಡಿದ ಮಿತ್ರವರ್ಯ ಶ್ರೀ. ಸವಣೂರ ಗೋವಿಂದರಾಯರಿಗೂ ವೇ. ಚಿಮ್ಮಲಿಗಿ ಕೃಷ್ಣಾಚಾರ್ಯರಿಗೂ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ವಿಜಯ ಪ್ರೆಸ್ಸಿನ ಶ್ರೀ. ನಾ. ಅ. ಹೊಸಕೇರಿಯವರಿಗೂ ಬಹು ಋಣಿಯಾಗಿರುವೆನು.

ಧಾರವಾಡ
ಗಣೇಶ ಚತುರ್ಥಿ;
ಗುರುವಾರ
ತಾ. ೫–೯–೧೯೪೦

ಇತಿ
ಶ್ರೀಮದ್ಧರಿವಾಯುಗುರುಭಕ್ತರ
ಭಕ್ತ
ಬೆಳ್ಳೀಕಲಮುದಾನಿ ನಾರಾಯಣರಾಯ

# ಅರ್ಪಣ

ಮಾತಾಪಿತೃಗಳಂತರ್ಗತ
ಶ್ರೀಮದ್ರಾಘವೇಂದ್ರಗುರ್ವಂತರ್ಯಾಮಿ
ಶ್ರೀ ಶ್ರೀಪಾದರಾಜಯತಿಪ್ರಿಯ
ಭಾರತೀರಮಣ
ಹನುಮದ್ಭೀಮಮಧ್ವಾವತಾರಯುತ
ಶ್ರೀ ಪ್ರಧಾನವಾಯುದೇವರಿಗೆ

# ಅನುಕ್ರಮಣಿಕಾ


| ವಿಷಯ | ಪುಟ |
|---|---|
| ೧. ಮಧ್ವನಾಮ | ೧ |
| ೨ ವಾಯುದೇವರ ಮೂಲರೂಪ ವರ್ಣನ | ೮ |
| ೩ ಪ್ರಥಮಾವತಾರ ವರ್ಣನ | ೧೬ |
| ೪ ದ್ವಿತಿಯಾವತಾರ ವರ್ಣನ | ೨೬ |
| ೫ ತೃತಿಯಾವತಾರ ವರ್ಣನ | ೩೯ |
| ೬ ಫಲಶ್ರುತಿ | ೪೯ |
| ೨. ಪರಿಶಿಷ್ಟ:— | |
| ೧ ವಾಯುದೇವರ ಪ್ರಸಿದ್ಧ ರೂಪ, ನಾಮಗಳು | ೫೪ |
| ೨ ಜೀವಕೋಟಿಯಲ್ಲಿ ವಾಯುದೇವರ ಶ್ರೇಷ್ಠತ್ವ | ೫೮ |
| ೩ ಶ್ರೀಹರಿ ವಾಯುಗಳ ಕ್ರಿಯಾಸಾಮ್ಯತ್ವ | ೬೩ |
| ೪ ಶ್ರೀಮದಾಚಾರ್ಯರು ವಿರಚಿಸಿದ ಗ್ರಂಥಗಳು | ೬೫ |
| ಅವುಗಳ ಸಂಕ್ಷೇಪ ವಿಷಯನಿರೂಪಣ | ೬೬ |
| ೫ ವಾಯುದೇವರ ಮಹಿಮೆಗಳು (ಹ. ಕ. ಸಾರ) | ೭೬ |
| ೬ ವಾಯುದೇವರ ಮಹಿಮಾತ್ಮಕ ದಾಸರ ಪದಗಳು | ೭೯ |
| ೭ ಮಂಗಲ | ೮೨ |

—: ಓಂ ಶ್ರೀ ಹರಿ : ಓಂ :—

ಅಸ್ಮದ್ಗುರುವರ ಶ್ರೀ ರಾಘವೇಂದ್ರಾಂತರ್ಗತ
ಶ್ರೀಮದ್ಹನುಮ ಭೀಮ ಮಧ್ವಾಂತರ್ಯಾಮಿ ಶ್ರೀ ರಾಮ ಕೃಷ್ಣ ವೇದವ್ಯಾಸಾತ್ಮಕ
ಶಿರಿವಿಠ್ಠಲಾಯ ನಮೋನಮಃ



# ಮಧ್ವನಾಮ

## ಶ್ರೀಮದ್ವಾಯುದೇವರ ಸಂಗ್ರಹ ವರ್ಣನ

ಪದ. ರಾಗ— ಸಾವೇರಿ. ತಾಳ—ಝಂಪೆ.

**ಜಯ ಜಯ ಜಗತ್ರಾಣ । ಜಗದೊಳಗೆ ಸ (ಸು) ತ್ರಾಣ ।**
**ಅಖಿಲಗುಣ ಸದ್ಧಾಮ । ಮಧ್ವನಾಮಾ ॥ ಪಲ್ಲ ॥**

**ಟೀಕಾ ತಾತ್ಪರ್ಯ** :–ಪದದ ಮೊದಲಿರುವ ಪಲ್ಲವಿಯು, ಸುಳಾದಿಯ ಕೊನೆಯಲಿರುವ ಜತೆಯು ಆಯಾ ಪದ, ಸುಳಾದಿಗಳ ಗರ್ಭಿತ ಭಾವಗಳನ್ನು ಸಂಕ್ಷೇಪವಾಗಿ ನಿರೂಪಿಸುವಂತೆ, ಈ ನಾಲ್ಕು ಚರಣಗಳ ಪಲ್ಲವಿಯು ವಾಯುದೇವರ ಮೂಲರೂಪ, ಅವತಾರತ್ರಯಗಳ ಮಹಾಮಹಿಮೆಗಳನ್ನು ಸೂತ್ರಗಳಂತೆ ಅತಿಸಂಕ್ಷೇಪವಾಗಿ ನಿರೂಪಿಸುವದು. ಈ ನಾಲ್ಕು ವಿಶೇಷಣಗಳು ಯಾರಲ್ಲಿ ಪೂರ್ಣ ಲಕ್ಷಣಗಳಾಗಿ ಸಮನ್ವಯವಾಗುವವೋ ಅವರೇ ದೇವೋತ್ತಮರಾದ ವಾಯುದೇವರು. ಅನ್ಯರಲ್ಲಿ ಈ ವಿಶೇಷಣಗಳು ಸರಿಹೋಗಲಾರವು. ಪ್ರಾಕೃತನುಡಿಯ ಈ ವಾಯುಸ್ತುತಿಯು '**ಜಯಜಯ**' ಪದದಿಂದ ಪ್ರಾರಂಭವಾಗಿ ಈ ಪ್ರಪಂಚದೊಳಗೆ ಚೇಷ್ಟಾರೂಪದಿಂದ ವ್ಯಾಪಿಸಿರ

ತಕ್ಕ ವಾಯುದೇವರ ಅನಂತ ವ್ಯಾಪಾರಗಳ ದಿಗ್ವಿಜಯುವನ್ನು ಸೂಚಿಸುತ್ತದೆ. **'ಜಯ'**ಪದದ ದ್ವಿರುಕ್ತಿಯಿಂದ ವಾಯುದೇವರಿಗೆ ಜ್ಞಾನ, ಭಕ್ತಿ, ವೈರಾಗ್ಯ, ಬಲ, ವೀರ್ಯಾದಿ ಮಹದ್ಗುಣಗಳಿಂದ ಸಮರಾದವರು ಈ ಜೀವಕೋಟಿಯಲ್ಲಿ ಯಾರೂ ಇಲ್ಲೇ ಇಲ್ಲವೆಂದು ಅಭಿಪ್ರಾಯವು. ಈ **'ಜಯ'** ಪದವು ಅವರ ಭಾವೀಬ್ರಹ್ಮಪದಪ್ರಾಪ್ತಿ ದರ್ಶಕವೂ ಆಗಿದೆ. **'ಜಗತ್ಪ್ರಾಣ'** ಎಂಬುದರಿಂದ ಅವರು ಬಾಹ್ಯದಲ್ಲಿದ್ದು ಈ ಬ್ರಹ್ಮಾಂಡವು ಸ್ಥಿರವಾಗಿ ನಿಲ್ಲುವಂತೆ ಅದಕ್ಕೆ ಆಧಾರಭೂತರಾಗಿಹರೆಂದು ಅಭಿಪ್ರಾಯವು. ಇದರಿಂದ ಅವರ ಅಗಾಧ ಶಕ್ತಿಯೂ ಜೀವರಲ್ಲಿ ತೋರುವ ಅಸಾಧಾರಣ ದಯೆಯೂ ಸ್ಪಷ್ಟವಾಗುವವು. **'ಜಗದೊಳಗೆ ಸತ್ಪ್ರಾಣ'** ಅಂದರೆ, ಈ ಬ್ರಹ್ಮಾಂಡದೊಳಗೆ ಸರ್ವತ್ರದಲ್ಲೂ ವ್ಯಾಪ್ತರಾಗಿ ಅಲ್ಲಿರತಕ್ಕ ವಿಶಿಷ್ಟ ಪ್ರಾಣಿಗಳನ್ನು ಸರ್ವದಾ ಸಂರಕ್ಷಿಸುವರೆಂಬ ಅಭಿಪ್ರಾಯವು. **'ಅಖಿಲಗುಣ ಸದ್ಧಾಮ'** ಎಂಬುದರಿಂದ ವಾಯುದೇವರು ರುದ್ರಾದಿ ಶ್ರೇಷ್ಠ ಸುರರಿಗೂ ಸಹ ಸಾಮಾನ್ಯವಾಗಿ ತಿಳಿಯಲಸಾಧ್ಯವಾದಂಥ ವಿಜ್ಞಾನ, ಭಕ್ತಿ, ವೈರಾಗ್ಯಾದಿ ಸದ್ಗುಣ ಸಮೂಹ ಸಂಪತ್ತುಳ್ಳವರೆಂಬ ಭಾವವು. **'ಮಧ್ವನಾಮಾ'** ಎಂಬ ಪದವು ವಾಯುದೇವರ ತೃತಿಯಾವತಾರದ ಪ್ರಸಿದ್ಧ ಅಭಿಧಾನವು. **'ಮಧ್ವ'** ಪದದ ವರ್ಣಗಳಿಂದ ವಾಯುದೇವರು ನಿರ್ದುಷ್ಟ ಸುಖ, ಸಕಲ ಸದ್ಗುಣ, ಶಾಶ್ವತ ಸೌಭಾಗ್ಯಗಳ ಮೂರ್ತಿಯೆಂದೂ ಅಥವಾ ಸ್ಥಿರವಾದ ಸುಖ, ಸೌಭಾಗ್ಯಪ್ರದವಾದ ಮೋಕ್ಷಶಾಸ್ತ್ರಕರ್ತರೆಂದೂ ಹಾಗೆಯೇ ಮೋಕ್ಷಾಧಿಕಾರ ವಿದ್ಯಾ (ಜ್ಞಾನ) ಪ್ರದರು ಎಂದೂ ಅರ್ಥವಾಗುವದು. ಹೀಗೆ ಅಸಾಧಾರಣವಾದ ಈ ನಾಲ್ಕು ವಿಶೇಷಪದಗಳಿಂದ ದೇವತಾಶ್ರೇಷ್ಠರಾದ ವಾಯುದೇವರನ್ನು ಕವಿಕೋವಿದರೂ ದೇವತೆಗಳೂ ಆಗಿದ್ದ ಶ್ರೀ ಶ್ರೀಪಾದರಾಜರು ಸಂಕ್ಷೇಪವಾಗಿ ವರ್ಣಿಸಿದ್ದಾರೆ.

ಪ್ರಾರಂಭದಲ್ಲಿ ನಿರೂಪಿಸಿದಂತೆ ಮೇಲಿನ ಪಲ್ಲವಿಯ ನಾಲ್ಕು ವಿಶೇಷಣಗಳಲ್ಲಿ ಮೊದಲಿನದು ಮೂಲ ವಾಯುದೇವರನ್ನೂ ೨ನೇದು ಮುಖ್ಯ ಪ್ರಾಣಾಖ್ಯ ಹನುಮಂತದೇವರನ್ನೂ ೩ನೇದು ಶ್ರೀ ಹರಿಯ ಕೇವಲಾಂತರ್ಯ ಭಕ್ತಾಗ್ರೇಸರರಾದ ಭೀಮಸೇನದೇವರನ್ನೂ ಕೊನೆಯ ೪ನೇದು ಸಾಕ್ಷಾಚ್ಛ್ರೀಮದಾಚಾರ್ಯರನ್ನೂ ಪ್ರತಿಪಾದಿಸುವವೆಂಬುದು ಮೇಲೆ ವಿಸ್ತರಿಸಿದ ವಿಷಯ ನಿರೂಪಣೆಯಿಂದ ಸ್ಫುಟವಾಗುವದು.

ವಾಯುದೇವರು ಶ್ರೀಹರಿಯ ಸಾಕ್ಷಾತ್ ಪ್ರತಿಬಿಂಬರಾದುದರಿಂದ ಸಕಲ ಸದ್ಗುಣಗಳ ಸದನರಾಗಿ ಜೀವಕೋಟಿಗೆಲ್ಲ ಶ್ರೇಷ್ಠರೂ, ಪ್ರೇಷ್ಠರೂ ಆಗಿಹರು. ಇವರ ಅಗಾಧ ಮಹಿಮೆಗಳನ್ನು ಭಗವದಪರೋಕ್ಷಿಗಳೂ ಸರ್ವವಿದ್ಯಾ ಪ್ರವೀಣರೂ ಆಗಿದ್ದ ಶ್ರೀಮದ್ರಾಘವೇಂದ್ರ ಯತಿಚಕ್ರವರ್ತಿಗಳು "**ಪ್ರಾತಃ ಸಂಕಲ್ಪಗದ್ಯ**" ಎಂಬ ತಮ್ಮದೊಂದು ಸದ್ಗ್ರಂಥದಲ್ಲಿ ಬಹು ಪರಿಷ್ಕಾರವಾಗಿ ವರ್ಣಿಸಿದ್ದಾರೆ. ಅಂಥ ಅವರ ಮಹಾಮಹಿಮೆಗಳನ್ನು ಇಲ್ಲಿ ಅತಿ ಸಂಕ್ಷೇಪವಾಗಿ ನಿರೂಪಿಸಲಾಗಿದೆ. ಆ ವಿವರ :—

ವಾಯುದೇವರು ಭಗವದ್ಭಕ್ತ್ಯಾದ್ಯನಂತಸದ್ಗುಣಪೂರ್ಣರು. ಅನಂತ ವೇದಪ್ರತಿಪಾದ್ಯರು. ಈ ಬ್ರಹ್ಮಾಂಡದೊಳಗೆ ಅನಂತರೂಪಧಾರಕರು. ಸದಾ ಭಗವತ್ಕಾರ್ಯ ಸಾಧಕರು–ನಿರ್ವಾಹಕರು. ಸ್ವಕೀಯರಾದ ಸಜ್ಜನರಲ್ಲಿ ಪರಮಾನುಗ್ರಹವನ್ನು ಮಾಡಿ ಉದ್ಧರಿಸುವ ಇಚ್ಛೆಯಿಂದ ಪುಣ್ಯಭೂಮಿಯಾದ ಈ ಭರತಖಂಡದಲ್ಲಿ ಶ್ರೀಮದ್ಧನುಮ ಭೀಮ ಮಧ್ವ ಎಂಬ ಈ ಅವತಾರ ತ್ರಯಗಳನ್ನು ಮಾಡಿದವರು. ಸಕಲ ಸಚ್ಛಾಸ್ತ್ರಸಾಧಕರು. ತದ್ದ್ವಾರಮೋಕ್ಷಯೋಗ್ಯಜೀವರ ಬುದ್ಧಿಶೋಧಕರು. ಸಮಸ್ತ ದುರ್ಮತಬಾಧಕರು. ಅನಾದಿ ಕಾಲದಿಂದಲೂ ಸತ್ಯವಾಗಿದ್ದ ಪಂಚಭೇದ ತಾರತಮ್ಯಬೋಧಕ ದ್ವೈತ ಸಿದ್ಧಾಂತವನ್ನು ಅವತಾರತ್ರಯಗಳಲ್ಲೂ ಪೂರ್ಣ ಪ್ರತಿಪಾದಿಸಿ ಸಂಸ್ಥಾಪಿಸಿದ ಜಗದ್ಗುರುವರ್ಯರು. ಅತಏವ ಭಗವದನುಗ್ರಹಕ್ಕೆ ಪೂರ್ಣಪಾತ್ರರು. ಸರ್ವದೇಶ, ಸರ್ವಕಾಲ, ಸರ್ವಸ್ಥಿತಿಗಳಲ್ಲಿ ಎಷ್ಟೆಸ್ಟೂ ವ್ಯತ್ಯಾಸವಿಲ್ಲದೆ ಶ್ರೀಹರಿಯಾಜ್ಞೆಯಿಂದ ಆತನ ಅತಿ ಸಮೀಪದ ಸನ್ನಿಧಾನದಲ್ಲಿಯೇ ಸೇವೆಗೈಯುತ್ತಿದ್ದು, ರುದ್ರಾದ್ಯನ್ಯ ದೇವತೆಗಳಿಂದ ಸದಾ ಸೇವ್ಯರಾಗಿಹರು ಬ್ರಹ್ಮದೇವರಂತೆ (೩೨) ದ್ವಾತ್ರಿಂಶತ್ಸಲ್ಲಕ್ಷಣ ಪೂರ್ಣವಾದ ಶರೀರವುಳ್ಳವರು. ಈ ಬ್ರಹ್ಮಾಂಡದ ಅಶೇಷ ವಿಶೇಷ ಜ್ಞಾನಸಂಪನ್ನರು. ಅತಏವ ಸರ್ವಜ್ಞಪದವಾಚ್ಯರು. ಸ್ವೇಚ್ಛೆಯಿಂದ ಬೇಕಾದಾಗ್ಗೆ ಬೇಕಾದ ಕಾರ್ಯವನ್ನು ನಿರ್ವಹಿಸಬಲ್ಲ ರೂಪವನ್ನು ತಾಳತಕ್ಕವರು. ಅತಏವ ಅಣೋರಣೀಯಾನ್ ಮಹತೋಮಹೀಯಾನ್ ರೂಪ ಧಾರಕರೆಂದು ವರ್ಣಿತರಾದವರು. ಸರ್ವದೋಷದೂರರು. ತ್ರಿವಿಧ ಜೀವರ ತ್ರಿವಿಧ ಸಾಧನಕಾರ್ಯಗಳಿಗೆ ಅಧಿಕಾರಿಗಳು. ಭಗವದ್ಭಕ್ತರ ಭವವಿಮೋಚಕರು, ದುರ್ಜೀವರಿಗೆ ಭವಬಂಧಕರು. ಅನಿಷ್ಟಸೂಚಕ ಸ್ವಪ್ನಾರಬ್ಧಕರ್ಮ

ವಿನಷ್ಟರು–ವಿದೂರರು. ಇದರ ಹಿಂದಿನ ಕಲ್ಪದಲ್ಲಿ ಆಗಿನ ಬ್ರಹ್ಮದೇವರೊಡನೆ ವೈಕುಂಠಕ್ಕೀಚೆಯಲ್ಲಿರುವ, ಸುಜೀವರ ಅಜ್ಞಾನಸ್ವರೂಪದ ಅನಾದಿ ಲಿಂಗ ದೇಹವನ್ನು ಭಂಗಿಸುವ ಕ್ಷೀರಮಾತ್ಮಕ ವಿರಜಾ ನದಿಯಲ್ಲಿ ಸ್ನಾನಮಾಡಿ ಸ್ವಲಿಂಗದ ವಿಶಿಷ್ಟವಾದ ಅಜ್ಞಾನವಿರಹಿತರಾದವರು. ಆದರಿಂದ ಉಳಿದಿದ್ದ ಯತ್ಕಿಂಚಿತ್ ಪ್ರಾರಬ್ಧವೂ ಕೂಡ ವಿನಾಶವಾದವರು. ಯಾವತ್ತೂ ಸಾತ್ವಿಕ ಜೀವರಿಗೆ ಮೋಕ್ಷಪ್ರಾಪ್ತಿಯ ಪೂರ್ವದಲ್ಲಿ ಅವರ ಲಿಂಗವು ಭಂಗವಾಗಿ ಪ್ರಾರಬ್ಧವು ಬತ್ತಿಹೋಗಲು ವಿರಜಾ ನದಿಯ ಸ್ನಾನವು ಒಮ್ಮೆ ಲಭಿಸುತ್ತಿದ್ದರೆ, ಜೀವಕೋಟಿಗೆಲ್ಲ ಮಿಗಿಲಾದ ಋಜುಗಣದ ಜೀವರಿಗೆ ಮಾತ್ರ ಆ ನದಿಯ ಸ್ನಾನವು ತ್ರಿವಾರ ಲಭಿಸುವದರಿಂದ, ಅವರ ಸೌಭಾಗ್ಯದ ಪ್ರಾರಬ್ಧಕ್ಕೆ ಎಣೆಯೇ ಇಲ್ಲ. ಆ ತ್ರಿಕಾಲಸ್ನಾನಗಳು ಹೇಗೆ ಲಭಿಸುವವೆಂದರೆ :— ಪ್ರತಿಯೊಬ್ಬ ಋಜುಜೀವನು ೧೯೭ ಬ್ರಹ್ಮಕಲ್ಪಗಳಲ್ಲಿ ಶ್ರೀಹರಿಯನ್ನು ಕುರಿತು ಘೋರ ತಪಸ್ಸನ್ನು ಮಾಡಿ, ೧೯೮ನೇ ಕಲ್ಪದಲ್ಲಿ ಲಾತವ್ಯನೆನಿಸಿ ಅಲ್ಲಿಯ ಸಾಧನವನ್ನೂ ಪೂರೈಸಿಕೊಂಡು ತದನಂತರ ಆ ಬ್ರಹ್ಮದೇವರೊಡನೆ ವಿರಜಾ ನದಿಯಲ್ಲಿ ಮೊದಲುಸಲ ಸ್ನಾನಗೈಯ್ವರು. ಅಲ್ಲಿಂದ ಮುಂದಿನ ೧೯೯ನೇ ಕಲ್ಪದಲ್ಲಿ ಪ್ರಧಾನವಾಯುದೇವರ ಪದವನ್ನು ಸ್ವೀಕರಿಸುವರು. ಹಿಂದಿನ ಕಲ್ಪದಲ್ಲಿ ವಿರಜಾಸ್ನಾನಗೈದು ತಮ್ಮ ಅಜ್ಞಾನಾತ್ಮಕ ಲಿಂಗದ ದೋಷ ನಿಶ್ಶೇಷರಾಗಿರುವದರಿಂದಲೇ ಪ್ರಕೃತದ ವಾಯುಪದದಲ್ಲಿ ಸದ್ಗುಣಪೂರ್ಣರೂ ಸರ್ವಜ್ಞರೂ ಆಗಿರುವರು. ವಿರಜಾ ಸ್ನಾನದಿಂದ ದಗ್ಧಪಟದಂತಾಗಿರುವ ಇವರ ಲಿಂಗ ದೇಹವು ನಿರ್ಜೀವ, ನಿಷ್ಕ್ರಿಯವಾಗಿ ನಿಮಿತ್ತಮಾತ್ರಕ್ಕೆ ಅವರ ಸ್ವರೂಪಕ್ಕೆ ಹತ್ತಿಕೊಂಡಿರುವದು. ಇದನ್ನು ಹೇಳದಿರಲು ಮುಕ್ತಜೀವರಿಗೂ ಅಮುಕ್ತ ಜೀವರಿಗೂ ಸಾಮ್ಯತ್ವವನ್ನು ಸಾಧಿಸಿದ ವೈಷಮ್ಯದೋಷ ಬರುವದು ಆದುದರಿಂದ ವಾಯುದೇವರಲ್ಲಿ ನಿರ್ವಾಹವಿಲ್ಲದಕ್ಕೆ ಇಷ್ಟು ಒಪ್ಪಲೇಬೇಕಾದ್ದು. ಹೀಗೆ ಅವರ ಲಿಂಗವು ತನ್ನ ಕರ್ತೃತ್ವವನ್ನೆಲ್ಲ ಕಳಕೊಂಡು ನಿಷ್ಕ್ರಿಯವಾದುದರಿಂದೇ ತನ್ಮೂಲಕವಾಗಿರತಕ್ಕ ಅಜ್ಞಾನ, ಅಹಂಕಾರ, ಭಯ, ಮೋಹ, ಮರವು, ದುಃಖಾದಿ ಬಂಧನಗಳಿಗೆ ಎಷ್ಟೆಷ್ಟೂ ಆಸ್ಪದವಿರದೆ ವಾಯುದೇವರು ಆನಂದಮಾತ್ರ ( ಮಯ ) ವಪುಷ (ದೇಹ) ರಾಗಿಹರು. ಅಂತೆಯೇ ಬ್ರಹ್ಮಾಂಡಗತ ತ್ರಿವಿಧ ಜೀವರ ಚತುರ್ವಿಧ ಶರೀರಗಳಲ್ಲಿದ್ದು ಅವರವರ ಸಾಧ

ನಗಳನ್ನು ಮಾಡಿಸುತ್ತಿದ್ದಾಗ್ಯೂ ಜೀವರ ಸುಖ, ದುಃಖಗಳಿಂದ ಬದ್ಧರಾಗದೆ ಪೂರ್ಣ ನಿರ್ಲಿಪ್ತರಾಗಿರುವರು. ಅವರು ಆನಂದವಪುಷರೆಂಬದು ಅವರ ತೃತಿಯಾವತಾರದ '**ಆನಂದತೀರ್ಥರು ಅರ್ಥಾತ್ ಮೋಕ್ಷಶಾಸ್ತ್ರಕಾರರು**' ಎಂಬ ಪ್ರಸಿದ್ಧವಾದ ಅನ್ವರ್ಥಕ ನಾಮದಿಂದ ದ್ಯೋತಕವಾಗುವದು. ಈ ತ್ರಿವಿಧಜೀವರ ಸಾಧನಗಳನ್ನು ಅವರಲ್ಲಿದ್ದು ಮಾಡಿಸುವದರಿಂದ ವಾಯುನಾಮಕ-ಸತ್ತಾಪ್ರದರೆಂದೂ, ಆಯಾ ಜೀವರ ಚಲನ ವಲನಾದಿ ವಿಶಿಷ್ಟ ವ್ಯಾಪಾರಗಳನ್ನು ಮಾಡಿಸುವದರಿಂದ ಪ್ರಾಣನಾಮಕ-ಚೇಷ್ಟಾಪ್ರದರೆಂದೂ, ಅವರ ಚತುರ್ವಿಧ ಶರೀರಗಳಲ್ಲಿದ್ದು ಸಂರಕ್ಷಿಸುವದರಿಂದ ಧರ್ಮನಾಮಕ-ಧಾರಣಪ್ರದರೆಂದೂ, ತಮ್ಮ ಪ್ರಭುತ್ವವನ್ನಾಶ್ರಯಿಸಿದ್ದ ಜೀವರಿಗೆಲ್ಲ ಕೊನೆಗೆ ಅವರವರ ಸ್ವರೂಪ ಯೋಗ್ಯ ಗತಿಗಳನ್ನು ಕೊಡುವದರಿಂದ ಭಕ್ತಿ (ಮುಕ್ತಿ) ನಾಮಕ-ಮುಕ್ತಿಪ್ರದರೆಂದೂ ಕರೆಸುವರು. ಈ ರೂಪ ಚತುಷ್ಟಯಗಳಿಂದ ಕರೆಸುವ ದೇವೋತ್ತಮರಾದ ವಾಯುದೇವರು ಸ್ವನಾಮಕ ಭಗವಂತನ ತಥಾ ಸ್ವಭಕ್ತರ ಪಾಪ ಮನ್ನಿಸುವಲ್ಲಿ ಕ್ಷಮಾಸಮುದ್ರರೂ, ಅವರಿಗೆ ಪುಣ್ಯಪ್ರದಾನಮಾಡುವ ಕಾರ್ಯದಲ್ಲಿ ಪರಮ ದಯಾಳುಗಳೂ, ಆರ್ತಜನರಿಗೆ ದಯದೋರುವ ಸಮಯದಲ್ಲಿ ಕೃಪಾನಿಧಿಗಳೂ, ಸಜ್ಜನರ ದೋಷವಿಚಾರದಲ್ಲಿ ಮಹಾಸಹಿಷ್ಣುಗಳೂ ಆಗಿಹರು. ಸಾತ್ವಿಕ ಶಿಖಾಮಣಿಗಳಾದ ಇವರು ಸಕಲ ತಾತ್ವಿಕ ದೇವತಾರಂಜಕರು—ಆಹ್ಲಾದಕರು, ದಾನವಭಂಜಕರು—ಸಂಹಾರಕರ್ತರು ಅತಏವ '**ಪ್ರಭಂಜನ**' ಪದವಾಚ್ಯರು. ಹೀಗೆ, ಅನ್ಯ ಜೀವರಲ್ಲಿ ಸರ್ವಥಾ ಕಾಣದಿರುವ ಅಸಾಧಾರಣವಾದ ಗುಣ, ಕ್ರಿಯಾ ವಿಶೇಷಗಳಿಂದ ವೇದಪ್ರತಿಪಾದ್ಯರಾದುದರಿಂದಲೇ ಮಹಂತರಾದ ವಾಯುದೇವರನ್ನು '**ಅಖಿಲಗುಣಸದ್ಧಾಮ**' ರೆಂದು ಪಲ್ಲವಿಯಲ್ಲಿ ಹೇಳಿದ್ದು. ಸರ್ವ ಜೀವರಂತರ್ಯಾಮಿಯಾಗಿದ್ದು ಅವರವರ ಸಾಧನಗಳನ್ನು ಪೂರ್ತಿಗೈಸಿ ಕೊನೆಗೆ ಅವರ ನಿಜಗತಿಪ್ರದರಾದ ವಾಯುದೇವರನ್ನು ಉಳಿದ ಜೀವರಂತೆ ಸರ್ವಥಾ ಎಣಿಸಕೂಡದು. ಯಾಕಂದರೆ—ಇವರು ಜೀವರಷ್ಟೇ ಆಗಿರದೆ ಇಡೀ ಜಗತ್ತಿನ '**ಸಂಜೀವ**'ರಾಗಿಹರು. "**ಸರ್ವೇಷಾಂಚ ಪ್ರಾಣಿನಾಂ ಪ್ರಾಣಭೂತಃ**" ಅಂದರೆ—ಈ ಜಗತ್ತಿನ ಜೀವರಿಗೆಲ್ಲ ಜೀವನ—ಪ್ರಾಣರಾಗಿರುವರು. ಅಂತೆಯೇ ಪ್ರಾಣರೆಂದು ಕರೆಸುವರು. ಮತ್ತು ಸರ್ವತ್ರ ಸರ್ವದಾ

ಭಗವದ್ದ್ರಷ್ಟೃಗಳಾಗಿಹರು. ಇವರ ವ್ಯಾಪ್ತಿಯು ಬ್ರಹ್ಮದೇವರಾರಭ್ಯವಾಗಿ ತೃಣಜೀವ ಪರ್ಯಂತವಾಗಿಹುದು. ಆಯಾ ಸ್ಥಳಗಳಲ್ಲಿದ್ದು ಆಯಾ ಜೀವರ ತಕ್ಕ ವ್ಯಾಪಾರಗಳನ್ನು ಮಾಡುವರು. ಅಂತೆಯೇ '**ಪೂರ್ಣ ಪ್ರಜ್ಞ**' ರೆನಿಸಿ ರುವರು. ಇವರು ಈ ಪ್ರಕಾರವಾಗಿ ಬ್ರಹ್ಮಾಂಡದಲ್ಲಿ ವಿಶಿಷ್ಟ ಚೇಷ್ಟಾದಿಗಳನ್ನು ಮಾಡುತ್ತ "**ತದರ್ಥಾ**" ಅಂದರೆ '**ಅರ್ಧ ನಾರಾಯಣ**' ರೆನಿಸುವರು. '**ಓಂ ತತ್ಸತ್**' ಎಂಬ ಶ್ರುತಿಯ '**ತತ್**' ಪದವು '**ನಾರಾಯಣಾತ್ಮಕ**' ವಾದಂತೆ '**ತದರ್ಥಾ**' ದಲ್ಲಿಯ '**ತತ್**' ಪದವೂ '**ನಾರಾಯಣ**' ಪರ ವಾಚ್ಯವಾದದ್ದು. ಸಾರಾಂಶ "**ಆತ್ಮಾವೈಪುತ್ರನಾಮಾಸಿ**" ಎಂಬ ಶಾಸ್ತ್ರ ವಚನಾನುಸಾರ ತನ್ನಿಂದ ಜನಿಸಿದ ವಾಯುದೇವರಲ್ಲಿ ಶ್ರೀ ವಾಸುದೇವನು ತಾನೇ ಅಷ್ಟಾಂಶಗಳಿಂದ ಸ್ಥಿರಸ್ಥಾಯಿಯಾಗಿದ್ದು ಅವರಿಂದ ಅಷ್ಟು ಕಾರ್ಯ ಗಳನ್ನು ಮಾಡಿಸುತ್ತಿರುವದರಿಂದೇ ವಾಯುದೇವರಿಗೂ "**ವಾಸುದೇವ**" ನೆಂದೇ ಪ್ರಸಿದ್ಧನಾಮವು ಪ್ರಾಪ್ತವಾಯಿತು. ಇವರು ಶ್ರೀ ವಾಸುದೇವ ಮೂರ್ತಿಯ ಸಾಕ್ಷಾತ್ಪ್ರತಿಬಿಂಬರಾಗಿರುವದೂ ಕೂಡ ಮೇಲೆ ಹೇಳಿದ ಮಾತನ್ನೇ ಬಲಪಡಿಸುವದು.

ಇಂಥ ವಾಯುದೇವರನ್ನು ಶ್ರೀ ಹರಿಯು ಇಂದಿರಾದೇವಿಯಲ್ಲಿ ಬಹು ಪ್ರೇಮದಿಂದ ಪಡೆದು ತನ್ನ ಬಲತೊಡೆಯ ಮೇಲೆ ಕುಳ್ಳಿರಿಸಿಕೊಂಡು ನಿತ್ಯ ದಲ್ಲೂ ತನ್ನ ಸಹಭೋಜನವನ್ನೀಯುವನು. ಈ ಸಹಭೋಜನವು ಭಾವೀ ಬ್ರಹ್ಮಪದ ಪ್ರಾಪ್ತಿಯ ಹಾಗೂ ಮೋಕ್ಷದಲ್ಲಿ ಶ್ರೀ ಹರಿಯ ಸರ್ವಾಂಗ ಸಾಯುಜ್ಯ ಭೋಗದ ಸೂಚಕವಾಗಿಹುದು. ವಾಯುದೇವರು ಶ್ರೀ ಜಯಾ ಪತಿ ವಾಸುದೇವ ಸಂಭೂತರಾದುದರಿಂದ ಜನಕನಂತೆಯೇ ಅಸಾಧಾರಣ ಸೌಂದರ್ಯ ಶರೀರವುಳ್ಳವರಾಗಿಹರು. ಬಿಂಬದ ಸೌಂದರ್ಯ ಸೊಬಗುಗಳೆಲ್ಲ ಪ್ರತಿ ಬಿಂಬದಲ್ಲಿಯೂ ಪ್ರಕಾಶಮಾನವಾಗಿ ಕಂಗೊಳಿಸುವದು ಸಹಜವಾದದ್ದು. ಆದರಿಂದೇ, ಭಗವದಪರೋಕ್ಷಿಗಳಾಗಿ ಶ್ರೀಮನ್ಮಧ್ವಮತೋದ್ಧಾರಕರಾದ ಶ್ರೀ ವ್ಯಾಸರಾಜ ಗುರುಸಾರ್ವಭೌಮರು ತಮ್ಮ ದೇವವಾಣಿಯಿಂದ ಪಾಡಿರುವ "**ಧೀರನ ನೋಡಿರೈ**" ಎಂಬ ಪದದಲ್ಲಿ "**ಪೂರ್ಣಚಂದ್ರವದನ, ಸೌಂದರ್ಯ ಸಮುದಯ ಸದನ**" ಇತ್ಯಾದಿಯಾಗಿ ವರ್ಣಿಸಿರುವರು.

ಮತ್ತು ಶ್ರೀಮನ್ನಾರಾಯಣ ಪಂಡಿತಾಚಾರ್ಯರು **"ಸಂಪೂರ್ಣಲಕ್ಷಣಚಣಂ"** ಇತ್ಯಾದಿಯಾಗಿ " **ಶ್ರೀ ಸುಮಧ್ವ ವಿಜಯ** " ದಲ್ಲಿ ವರ್ಣಿಸಿದ್ದಾರೆ.

ಮುಮುಕ್ಷುಗಳಾದವರು ಮೋಕ್ಷಸಾಮ್ರಾಜ್ಯದ ನಿರ್ದುಷ್ಟವಾದ ಆನಂದ ಸುಖವನ್ನು ಪಡೆಯಲು ವಾಯುದೇವರ ಧ್ಯಾನಾರಾಧನೆಗಳನ್ನು ಸರ್ವದಾ ಮಾಡಬೇಕಾದ್ದು ಅತ್ಯಗತ್ಯವಾದದ್ದು. ಅತಏವ ಅವರ ಧ್ಯಾನಶ್ಲೋಕವನ್ನು ಸದ್ಗುರುಗಳ ದ್ವಾರ ಉಪದೇಶಗೊಂಡು ಅಪೇಕ್ಷಿತವಾದ ಪರಮಪುರುಷಾರ್ಥ ವನ್ನು ಪಡೆಯುತಕ್ಕದ್ದೆಂದು ತಿಳಿಸುವ ಅಭಿಪ್ರಾಯದಿಂದ ಆ ಮಹಾಮಂತ್ರ ವನ್ನು ಇಲ್ಲಿ ಕೊಟ್ಟಿರುವದು.

**ಶ್ಲೋಕ :—**

**ಬಳಾದ್ಯಂ ಭೃಗುಣಾಂ ದೃಷ್ಟಂ ಪ್ರಾಣಾಗ್ನೇಃ ಸೂಕ್ತಮುಚ್ಯತೇ ।**
**ಪ್ರಾಣಾಭ್ಯೈಃ ಪಂಚಭಿಸ್ತಸ್ಯಾಪ್ಯಂಗಾನ್ಯುಕ್ತಾನಿಸೂರಿಭಿಃ ॥**

( ಶ್ಲೋ. ೭೧–ಅ. ೪ ತಂತ್ರಸಾರ ).

**ಅರ್ಥ** :— ಈ ಮಂತ್ರದ ಪ್ರಥಮ ಪದವು ' **ಬಳ** ' ಎಂದಿದ್ದು, ಅದ ರಿಂದ ವೇದೋಕ್ತ ' **ಬಳಿತ್ಥಾ ಸೂಕ್ತ** 'ವು ಸೂಚಿಸಲ್ಪಟ್ಟಿತು. ಇದು ಮೊದಲು ಭೃಗುಮಹರ್ಷಿಗಳಿಗೆ ಉಪದಿಷ್ಟವಾಯಿತು. ' **ಪ್ರಾಣ** ' ಅಂದರೆ ಜಗಜ್ಜೀ ವನಗಳಿಗೆ ಮುಖ್ಯ ಕಾರಣನು. ' **ಅಗ್ನಿ** ' ಅಂದರೆ ಸ್ವತಃ ಚಲಿಸಲು ಅಸ ಮರ್ಥವಾದ ' **ಅಗ** ' ಶಬ್ದವಾಚ್ಯ ಜಗತ್ತಿಗೆ ನೇತ್ರವು. ಹೀಗೆ ಇದು ' **ಪ್ರಾಣ** ' ಮತ್ತು ' **ಅಗ್ನಿ** ' ಪದ ವಾಚ್ಯರಾದ ಮುಖ್ಯ ಪ್ರಾಣದೇವರ ಮಂತ್ರವಾಗಿದೆ. ಈ ಮಂತ್ರದಲ್ಲಿ ಮುಖ್ಯವಾಯುವೆಂದು ಹೇಳದೆ '**ಪ್ರಾಣಾಗ್ನಿ**' ಎಂದು ಹೇಳಿದ್ದರಿಂದ, ' **ಬಳಿತ್ಥಾ ಸೂಕ್ತ** 'ವು ' **ಅಗ್ನಿಸೂಕ್ತ** ' ವೆಂದೂ ಪ್ರಸಿದ್ಧವಾಯಿತು. ವಾಯುದೇವರು ' **ಪ್ರಾಣಾಗ್ನಿ** ' ಶಬ್ದವಾಚ್ಯರೆಂದು ಷಟ್ಪ್ರಶ್ನೋಪನಿಷತ್ತಿನಲ್ಲಿ ಹೇಳಿದೆ.

**—: ಶ್ರೀ ಗುರುಮಧ್ವೇಶಾರ್ಪಣಮಸ್ತು :—**

# ವಾಯುದೇವರ ಮೂಲರೂಪ ವರ್ಣನ

**ಪದ :— ಆವ ಕಚ್ಛಪ ರೂಪದಿಂದಲ್ಯಂಡೋದಕದಿ ।**
**ಓವಿ ಧರಿಸಿಹ ಶೇಷಮೂರುತಿಯನು ॥**
**ಆವಾವನ ಬಳಿವಿಡಿದು ಹರಿಯ ಸುರರೈದುವರು ।**
**ಆ ವಾಯು ನಮ್ಮ ಕುಲ ಗುರುರಾಯನು ॥ ೧ ॥**

**ಟೀ. ತಾ :—** ಬ್ರಹ್ಮಾಂಡದ ಹೊರಗಿರುವ ಘನೋದಕದಲ್ಲಿ ಈ ಬ್ರಹ್ಮಾಂಡವು ಮುಳುಗಬಾರದೆಂಬ ಶ್ರೀ ಹರಿಯಿಚ್ಛೆಯಂತೆ, ಅದನ್ನು ತಮ್ಮ ಶಿರಸ್ಸಿನ ಮೇಲೆ ಹೊತ್ತಿರುವ ಮಹಾಶೇಷದೇವರ ಕ್ಷೇಮಾರ್ಥವಾಗಿ, ವಾಯುದೇವರು ಕೂರ್ಮರೂಪವನ್ನು ತಾಳಿ ಬ್ರಹ್ಮಾಂಡ ಸಹಿತರಾದ ಆ ಶೇಷರನ್ನು ತಮ್ಮ ಬೆನ್ನಿನ ಮೇಲೆ ಸಾಸುವೆಯನ್ನು ಧರಿಸಿದಂತೆ ನಿರಾಯಾಸದಿಂದ ವಹಿಸಿರುವರು. ಇಂಥ ಅಸಾಧಾರಣ ಶಕ್ತಿಯುತರ ಆರಾಧನೆಮಾಡಿ ಅನುಗ್ರಹ ಸಂಪಾದಿಸಿ ಮಹರುದ್ರಾದಿ ಸಮಸ್ತ ದೇವತೆಗಳು ತಂತಮ್ಮ ಗತಿಪ್ರದನಾದ ಶ್ರೀ ವಾಸುದೇವನ ಪಾದಸನ್ನಿಧಾನವನ್ನು–ಮುಕ್ತಿಯನ್ನು ಹೊಂದುವರು. ಇಂಥ ಮುಖ್ಯ ಪ್ರಾಣ–ವಾಯುದೇವರೇ ನಮ್ಮದಾದ ಮೋಕ್ಷಯೋಗ್ಯ ಜೀವ ವರ್ಗದ ಶ್ರೇಷ್ಠ ಗುರುಗಳು. ಅವರು ನಮ್ಮ ಗುರುಗಳಷ್ಟೇ ಅಂತಲ್ಲ. ನಮ್ಮ ಪೋಷಕರೂ ಆಗಿರುವರು ' **ಗುರು** ' ಪದದಿಂದ **ಜ್ಞಾನದಾಯಕರೆಂದೂ** ' **ರಾಯ** ' ಪದದಿಂದ **ರಕ್ಷಕ, ನಿಯಾಮಕರೆಂದೂ** ಅರ್ಥವು. ಅದರಿಂದ, ವಾಯುದೇವರು ದೇವತಾದಿ ಸಕಲ ಜೀವಗಣಗಳ ಗುರುಗಳೂ ಅಹುದು; ಯಜಮಾನರೂ ಅಹುದು ಪದ್ಯದಲ್ಲಿ ಅವರಿಗೆ ' **ರಾಯನು** ' ಎಂದು ಏಕ ವಚನ ಪ್ರಯೋಗ ಮಾಡಿರುವದು ಕೇವಲ ವಾತ್ಸಲ್ಯ ಭಾವದಿಂದೇ ಅಹುದು. ಕವನದಲ್ಲಿ ಏಕವಚನಪ್ರಯೋಗವು ಬಹುವಚನಕ್ಕೆ ಬದಲಾಗಿ ಪ್ರಸಂಗಾನುಸಾರವಾಗಿ ಉಪಯೋಗವಾಗುವದುಂಟು ॥ ೧ ॥

**ಪದ :— ಆವಾವನು ದೇಹದಿರೆ ಹರಿಯು ತಾ ನೆಲೆಸಿರುವ ।**
**ಆವಾವನು ತೊಲಗೆ ಹರಿ ತಾ ತೊಲಗುವ ॥**
**ಆವಾವನು ದೇಹದೊಳಹೊರಗೆ ನಿಯಾಮಕನು ।**
**ಆ ವಾಯು ನಮ್ಮ ಕುಲ ಗುರುರಾಯನು ॥ ೨ ॥**

**ಟೀ. ತಾ.**:—ವಾಯುದೇವರು ಜೀವರ ಸ್ಥೂಲ ಶರೀರಗಳಲ್ಲಿರುವವರೆಗೆ ಶ್ರೀ ಹರಿಯೂ ಅಲ್ಲಿ ವಾಸವಾಗಿರುವನೆಂಬುದು "**ದೇಹೇಽಪಿ ಯತ್ರ ಪವನೋಽತ್ರ ಹರಿರ್ಯತೋಽಸೌ । ತತ್ರೈವ ವಾಯುರಿತಿ ವೇದ ವಚ ಪ್ರಸಿದ್ಧಂ ॥**" ಮತ್ತು "**ವಾಯುಂ ವಿನಾ ನೈವ ಸ್ಥಿತಿರ್ಹರೇಸ್ಸದಾ**" ಎಂಬ ನಿರ್ಣಯ ಹಾಗೂ ವಿಷ್ಣು ಪುರಾಣಗಳ ವಚನಗಳಿಂದ ಸ್ಪಷ್ಟವಾಗುವದು. ಯಾವ ಕ್ಷಣದಲ್ಲಿ ವಾಯುದೇವರು ಈ ಶರೀರವನ್ನು ತ್ಯಜಿಸಿ ಹೋಗುವರೋ ಆದೇ ಕ್ಷಣಕ್ಕೆ ಶ್ರೀ ಹರಿಯೂ ಕೂಡ ಅಲ್ಲಿಂದ ವಾಯು ವಾಹನನಾಗಿಯೇ ಹಾರಿ ಹೋಗುವನು. ಹೀಗೆ ಶ್ರೀ ಹರಿ ವಾಯುದೇವರು ಯಾವಾಗಲೂ ಅವಿನಾಭಾವದಿಂದ ಈ ಬ್ರಹ್ಮಾಂಡದೊಳಗೆ ಸರ್ವತ್ರದಲ್ಲಿಯೂ ಸಂಮಿಳಿತರಾಗಿಯೇ ಇರುತ್ತಾರೆ. ಒಬ್ಬರನ್ನು ಬಿಟ್ಟು ಇನ್ನೊಬ್ಬರು ಸರ್ವಥಾ ಇರುವದಿಲ್ಲ. ಇದು ಸತ್ಯಸಂಕಲ್ಪವು. ಈ ಮಾತು "**ಪರಿಸರ ನೀನಿರೆ ಹರಿ ತಾ ನಿರುತಿಹ ಇರದಿರೆ ತಾನಿರನು ॥**" ಎಂದು ಪಾಡಿದ ಶ್ರೀಮಜ್ಜಗನ್ನಾಥದಾಸ ರುಕ್ತಿಯಿಂದ ಸ್ಪಷ್ಟವಾಗುವದು. ಈ ಬ್ರಹ್ಮಾಂಡದಲ್ಲೆಲ್ಲ ಶ್ರೀ ಹರಿಯ ವಾಸಕ್ಕೆ ವಾಯುದೇವರು ಪೀಠಪ್ರಾಯರಾಗಿದ್ದು ಪ್ರಾಣಿಗಳ ಶರೀರಗಳಲ್ಲಿ ಬಿಂಬನಾಗಿ ರುವ ಆತನಿಗೆ ವಾಹನರಾಗಿರುವರು. ಇಂಥ ಅಗಾಧ ಮಹಿಮಾ ವಿಶೇಷದ ವಾಯುದೇವರೇ ನಮ್ಮದಾದ ದೇವತಾ ಸಮೂಹಕ್ಕೆ ಪರಮಗುರುಗಳು. ದೇವ, ಋಷಿ, ಪಿತೃ-ರಾಜ, ಗಂಧರ್ವ, ನರೋತ್ತಮರೆಂಬ ಪಂಚವಿಧ ಸಾತ್ವಿಕ ಗುಣದ ಮುಕ್ತಿ ಯೋಗ್ಯ ಜೀವರಿಗೆ ಮಹರುದ್ರದೇವರು ಗುರುಗಳು, ವಾಯು ದೇವರು ಪರಮಗುರುಗಳು, ಶ್ರೀ ರಮಾನಾರಾಯಣರು ಪರಾತ್ಪರ ಗುರುಗಳು. "**ಆ ವಾಯು ನಮ್ಮ ಕುಲ ಗುರುರಾಯನು**" ಎಂಬ ಪ್ರಯೋಗವು ಈ ಪದ್ಯದ ೧, ೨ ಹಾಗೂ ೧೨ ಈ ನುಡಿಗಳಲ್ಲಿ ಮೂರು ಆವರ್ತಿ ಬಂದಿರು ವದರಿಂದ, ಈ ಉಕ್ತಿಯನ್ನು "**ಸತ್ಯಂ ಸತ್ಯಂ ಪುನಸ್ಸತ್ಯಂ**" ಎಂದು ಪ್ರಮಾಣಪೂರ್ವಕವಾಗಿ ಹೇಳಿದಂತಾಯಿತು. ಮತ್ತು "**ನಮ್ಮ ಕುಲ ಗುರುರಾಯನು**" ಎಂಬ ವಚನದಿಂದ, ವಾಯುದೇವರ ಶಾಶ್ವತ ಗುರು ತ್ವವನ್ನು ಸಾರುವ ವ್ಯಾಜದಿಂದ ಅಂಥವರ ಶಿಷ್ಯರಾದ ತಮ್ಮ-ಮುಮುಕ್ಷು ಜೀವರ ಧನ್ಯತೆ, ಸಾರ್ಥಕ್ಯಗಳನ್ನೂ ಶ್ಲಾಘನವಮಾಡಿದಂತಾಯಿತು. ॥ ೨ ॥

**ಪದ:— ಕರಣಾಭಿಮಾನಿ ದಿವಿಜರು ದೇಹವನು ಬಿಡಲು।**
**ಕುರುಡ ಕಿವುಡನು ಮೂಕನೆಂದೆನಿಸುವ ॥**
**ಪರಮ ಮುಖ್ಯ ಪ್ರಾಣ ತೊಲಗಲಾದೇಹವನು।**
**ಅರಿತು ಹೆಣನೆಂದು ಪೇಳ್ವರು ಬುಧಜನಾ ॥**

**ಟೀ. ತಾ:—** ಜೀವರ ಸ್ವರೂಪ, ಲಿಂಗ ದೇಹಗಳ ಬಾಹ್ಯದಲ್ಲಿರತಕ್ಕ ಅನಿರುದ್ಧ, ಸ್ಥೂಲ ಶರೀರಗಳಲ್ಲಿ ವಾಸಿಸಿರುವ ಇಂದ್ರಿಯಗಳಭಿಮಾನಿಗಳಾದ ಇಂದ್ರ, ಚಂದ್ರ, ಸೂರ್ಯ, ಅಗ್ನ್ಯಾದಿ ತಾತ್ವಿಕ ದೇವತೆಗಳು ತಮ್ಮ ತತ್ವ ಕ್ರಿಯಾ ವಿಮುಖರಾಗಲು ಆ ದೇಹಿಯನ್ನು ಕಣ್ಣು ಕಾಣದವ, ಕಿವಿಕೇಳದವ, ಮೂಕನಾದವ ಇತ್ಯಾದಿಯಾಗಿ ಜನರು ಕರೆಯುವರು. ಜಗತ್ತಿನಲ್ಲಿ ಯಾವನಾದರೂ ಯಾವತ್ತೂ ಇಂದ್ರಿಯಗಳಿಂದ ನ್ಯೂನವಾಗಿದ್ದರೂ ಕೂಡ ಬದುಕಿ ಇರುವನು. ಆದರೆ, ಈ ಸಕಲ ತತ್ವೇಶರಿಗೆ ಮುಖ್ಯ ನಿಯಾಮಕರಾದ ಪ್ರಾಣದೇವರು ಮಾತ್ರ ಆ ದೇಹವನ್ನು ತ್ಯಜಿಸಿ ಹೋದಪಕ್ಷದಲ್ಲಿ, ಮಹಾ ವಿಕಾರಹೊಂದಿದ ಆ ಶರೀರವನ್ನು ನೋಡಿ ಮತಿವಂತರು ಉಪಚರಿಸದೆ ಹೆಣವೆಂದು ಹೇಳುತ್ತ ಅದರ ಹತ್ತರ ಹಾಯಲಿಕ್ಕೂ ಹಿಂಜರಿವರು. ಇದೇ ಅಭಿಪ್ರಾಯದ ಮಾತನ್ನು ದಾಸರಾಯರು "**ತನು ಸಮಂಧಿಗರಾದ ಬಂಧು ಬಾಂಧವರೆಲ್ಲ। ಅನುಕೂಲವಿದ್ದಾಗ ಹಿತದವರು ॥ ಹನುಮ ನೀ ತೊಲಗಲು ಹಡದವ್ವ ಸತಿ ಸುತ। ರ್ಧಿಣನೆಂದು ಮುಟ್ಟಲಂಜುವರಯ್ಯೋ ದೇವಾ ॥೧॥**" ಎಂದು ಬಹು ಸತ್ಯಸ್ಥಿತಿ ಹೇಳಿದ್ದಾರೆ. ಆದುದರಿಂದ, ವಾಯುದೇವರೇ ಸಕಲ ತಾತ್ವಿಕ ದೇವತಾ ಸಮೂಹದಲ್ಲಿ ಬಹು ಶ್ರೇಷ್ಠರಾದವರೆಂಬುದು ಅವರ ಚತುರ್ವಿಂಶತಿ ತತ್ವಗಳ ನಿಯಾಮಕತ್ವದಿಂದೇ ಸಿದ್ಧವಾಗುವದು. ಮತ್ತು ಅವರು ಈ ದೇವ, ದೈತ್ಯ ತಾತ್ವೀಕರಿಗೆಲ್ಲ ಯಜಮಾನರಾಗಿ ಅವರವರ ಯೋಗ್ಯತೆಗೆ ತಕ್ಕ ತತ್ವಕಾರ್ಯಗಳನ್ನು ಆಯಾ ಕಾಲಗಳಲ್ಲಿ ಅವರವರಿಂದ ಮಾಡಿಸುತ್ತ, ಸೂತ್ರಧಾರನು ಗೊಂಬೆಗಳನ್ನು ಕುಣಿಸುವಂತೆ, ಈ ಸಂಸಾರಾಖ್ಯ ನಾಟಕದಲ್ಲಿ ಜಗದ ಜೀವರನ್ನೆಲ್ಲ ಶ್ರೀ ಹರಿಯ ಆಜ್ಞೆಯಿಂದ ಕುಣಿಸ್ಯಾಡುತ್ತ, ಅವರ ಕೊನೆಯ ಕ್ಲಪ್ತಕಾಲವು ಪ್ರಾಪ್ತವಾದೊಡನೆಯೇ ಆಯಾ ದೇಹದಲ್ಲಿದ್ದ ಜೀವರನ್ನು ಕೈಯಲ್ಲಿ ಹಿಡದುಕೊಂಡು, ಶ್ರೀ ಹರಿಯನ್ನು ಹೆಗಲಮೇಲಿರಿಸಿಕೊಂಡು ಹಾರಿಹೋಗುವರು. ಅದರಿಂದಲೇ

ಈ ದೇಹವು ದೇವರಿಲ್ಲದ ದೇಗುಲದಂತೆ ಬಹು ಅಮಂಗಲ, ಅಪವಿತ್ರ ಹಾಗೂ ಭಯಂಕರವಾಗಿ ತೋರಲನುವಾಗುವದು. ವಾಯು ದೇವರು ದೇಹದಲ್ಲಿರುವ ತನಕ ಅದನ್ನು ಬಹು ಗೌರವಿಸುವರು, ಆದರಿಸುವರು, ಸಂರಕ್ಷಿಸುವರು, ಅಕ್ಕರದಿಂದ ಆಲಿಂಗಿಸುವರು. ಅದೇ ಶರೀರದಿಂದ ವಾಯುದೇವರು ಹಾರಿಹೋದ ಬಳಿಕ, ಅದನ್ನು ಮನುಷ್ಯನೆಂದು ಹೇಳದೆ ಹೆಣವೆಂದು ಕರೆಯುತ್ತ ಒಡನೆಯೇ ಮಸಣಕ್ಕೆ ಸಾಗಿಸುವರು. ಈ ಅರ್ಥದಿಂದೇ ಶ್ರೀ ಮದ್ಧರಿಕಥಾಮೃತಸಾರದಲ್ಲಿ ದಾಸರಾಯರು :— '**ವಾಯು ಕಾಯುವ ಬಿಟ್ಟು ಪೋಗಲು । ರಾಯ ಅದಕೆಂಬರೆ ಪ್ರಭುತ್ವ ಪ । ಲಾಯನವನೈದಿತು ಸಮೀಪದಲಿದ್ದರದು ತೋರು** "- ಎಂದು ಅಂದಿರುವರು. ಇವರು ಈ ಶರೀರವನ್ನು ತ್ಯಜಿಸಿ ಪೋಗುವದರಿಂದ ಅದು ಯಾತಕ್ಕೂ ಬಾರದೆ ಕೇವಲ ಅಗ್ರಾಹ್ಯವಾಗಿ ಹೋಗುವದು ಈ ಮಾತನ್ನು ಶ್ರೀಪ್ರಸನ್ವೇಂಕಟದಾಸರಾಯರು :—'**ಸುಟ್ಟರೆ ಉರಿಹಿಟ್ಟು, ಬಿಟ್ಟರೆ ಕ್ರಿಮಿಕೀಟ । ಇಟ್ಟರಿರದು ವಾಯುವಿರದೆ ॥** " ಎಂದು ಅಪ್ಪಣೆ ಕೊಡಿಸಿರುವರು. ವಾಯುದೇವರು "**ಸರ್ವೇಷಾಂಚ ಪ್ರಾಣಿನಾಂ ಪ್ರಾಣಭೂತಃ। ಅನಾವೃತ್ತಿರ್ದೇಹಿನಾಂ ದೇಹಪಾತೇ ತಸ್ಮಾದ್ವಾಯುರ್ದೇವದೇವೋ ವಿಶಿಷ್ಟಃ ॥** " ಅಂದರೆ—ಈ ಬ್ರಹ್ಮಾಂಡದಲ್ಲಿ ಸೃಷ್ಟರಾದ ಯಾವತ್ತೂ ಪ್ರಾಣಿಗಳಲ್ಲಿ ಪ್ರಾಣರೂಪರಾಗಿರುವ ವಾಯುದೇವರು ಅಲ್ಲಿಂದ ಹೊರಡುವ ಮೂಲಕ ಸತ್ತು ಬೀಳುವ ಆ ದೇಹಿಗಳ ಶರೀರಗಳು ಪುನಃ ಬದುಕುವದೇ ಇಲ್ಲ. ಅದರಿಂದೇ, ವಾಯುದೇವರು ಸಮಸ್ತತತ್ತ್ವೇಶರಿಗೂ ಉತ್ತಮರಾಗಿಹರೆಂಬುದು. ಮೋಕ್ಷಪ್ರದಾತೃತ್ವವು ಶ್ರೀ ಹರಿಯೊಬ್ಬನ ವಶವ್ದೇ ಅನ್ಯರದಲ್ಲ. ಆದರೆ, ಆತನ ಪರಮಾನುಗ್ರಹಕ್ಕೆ ಪಾತ್ರರಾದ ವಾಯುದೇವರಿಗೂ ಆ ದಾತೃತ್ವವು ಪ್ರಾಪ್ತವಾಗಿರುವದು ಈ ಮಾತಿಗೆ "**ವಿಷ್ಣುರೇವ ಹಿ ಮೋಕ್ಷಸ್ಯದಾತಾ । ವಾಯುಶ್ಚ ತದನುಜ್ಞಯಾ ॥** " ಎಂಬ ಸಚ್ಛಾಸ್ತ್ರವಚನವು ಪ್ರಮಾಣವಾಗಿದೆ. ಇವರನ್ನು—"**ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ॥ ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ॥** " ಇತ್ಯಾದಿಯಾಗಿ ತೈತ್ತಿರೀಯಾರಂಭದಲ್ಲಿ ಭೃಗುಋಷಿಗಳು ಸ್ತೋತ್ರಗೈದಿದ್ದಾರೆ. ಈ ದೇವಶ್ರೇಷ್ಠರ ಮಹಾಮಹಿಮೆಗಳು **ಛಾಂದೋಗ್ಯ, ತಳವಕಾರ, ಬೃಹದಾರಣ್ಯಕೋಪನಿಷತ್ತು**ಗಳಲ್ಲಿಯೂ ವಿಶೇಷ ಪ್ರತಿಪಾದಿಸಲ್ಪಟ್ಟರು

ವವು. ಆದರಿಂದೇ ಶ್ರೀಮದ್ಧರಿಕಥಾಮೃತಸಾರದಲ್ಲಿ ಜಗನ್ನಾಥದಾಸರಾಯರು- **"ಕಮಲಸಂಭವ ಪವನರೀರ್ವರು। ಸಮರು ಸಮವರ್ತಿಗಳು ರುದ್ರಾ। ದ್ಯಮರ ಗಣ ಸಂಶೇವಿತ ಪರಬ್ರಹ್ಮ ನಾಮಕರು ॥"** ಮತ್ತು **"ಏಸು ಧನ್ಯರೋ ಬ್ರಹ್ಮ ಗುರು ಪವ। ಮಾನರೀರ್ವರು ಈ ಜಗದಿ॥"** ಎಂಬ ಪದ್ಯಗಳಿಂದ ಬಹು ಸ್ತುತಿಸಿರುಹರು. ವಾಯುದೇವರನ್ನು ಸಾಕಲ್ಯೀನ ದೇವತೆಗಳೂ ಕೂಡ ತಿಳಿಯಲಾರರು. ಅಂದ ಬಳಿಕ, ನರರ ಪಾಡೇನು? ಶ್ರೀಹರಿಯು ಸಕಲ ಜೀವರಂತರ್ಯಾಮಿಯಾಗಿದ್ದಾಗ್ಯೂ ಆತನು ಅವರಿಗೆ ಕಾಣಿಸುವದಿಲ್ಲ. ಯಾಕಂದರೆ:- ಜೀವರಿಗೆ ಭಗವಂತನನ್ನು ನೋಡತಕ್ಕ ಪರಿಪಕ್ವ ದಶೆಯು ಪ್ರಾಪ್ತವಾಗದ ವಿನಾ ಆತನ ಸಂದರುಶನವಾಗುವದಿಲ್ಲ. ಅವರ ಕರ್ಮ ಮೂಲಕವಾಗಿ ಮೊದಲು ಆಗದಿರುವದು ಆ ಜೀವರ ಮೇಲಿನ ಅನುಗ್ರಹಾರ್ಥವಾಗಿಯೇ ಎಂದು ತಿಳಿಯಬಹುದು. ಕಾರಣವೇನೆಂದರೆ-ವಸ್ತುವಿನ ಮಾಹಾತ್ಮ್ಯಜ್ಞಾನವಾಗದೆ ಅದರಲ್ಲಿ ಯೋಗ್ಯ ಆದರವು ಉಂಟಾಗುವದಿಲ್ಲ. ಮಹದ್ವಸ್ತುವಿನ ಅನಾದರಣೆಯಿಂದ ಮಹಾನರ್ಥಕ್ಕೆ ಕಾರಣವಾಗುವದು ನಿಶ್ಚಯವು. ಅಂತೆಯೇ, ಬಿಂಬರೂಪದ ಭಗವಂತನು ಜೀವರ ಅಕಾಲ ಅಪಕ್ವದಶಾದಲ್ಲಿ ಕಾಣಿಸದೆ ಹೃದಯದಲ್ಲಿ ಗುಪ್ತನಾಗಿರುವದು. ಆದುದರಿಂದ, ಆತನ ಸಂದರುಶನವಾಗಲು ಮೊದಲು ಸದ್ಗುರುಗಳಿಂದ ಪರಿಶುದ್ಧವಾದ ಶ್ರೀಮನ್ಮಧ್ವಶಾಸ್ತ್ರದುಪದೇಶಗೊಂಡು ಅದನ್ನು ಚನ್ನಾಗಿ ಅಭ್ಯಾಸಗೈಯತಕ್ಕದ್ದು. ಆದರಿಂದ, ಶ್ರೀ ಹರಿಯ ಮಾಹಾತ್ಮ್ಯಜ್ಞಾನ ಲಭಿಸಿ, ತನ್ಮೂಲಕ ಆತನಲ್ಲಿ ಭಕ್ತಿಯು ಬಲಿದು ದೃಢವಾಗುವದು. ಆ ಮೇಲೆ ಆ ಜೀವನ ಪರಿಪಕ್ವದಶೆಯು ಪ್ರಾಪ್ತವಾಗಿ ಭಗವದಪರೋಕ್ಷ-ಸಂದರುಶನವಾಗುವದು. ಅಪರೋಕ್ಷದಿಂದ ಹಿಂದಿನ ಅನಂತ ಜನ್ಮಗಳ ಸಂಚಿತ ಕರ್ಮವೆಲ್ಲ ದಗ್ಧವಾಗಿ ಹೋಗುವದು. ಆಗಾಮಿಯ ಸಂಬಂಧವಾಗುವದಿಲ್ಲ. ಪ್ರಾರಬ್ಧವು ಆಕುಂಚಿತವಾಗಿ ತದ್ಭೋಗಾನಂತರದಲ್ಲಿ ಬ್ರಹ್ಮದೇವರ ಉಪದೇಶದದ್ವಾರಾ ಭಗವತ್ಪ್ರಸಾದವಾಗಿ ವಿರಜ್ಯಾನದಿಯಲ್ಲಿ ಲಿಂಗ ಭಂಗವಾದ ಬಳಿಕ ಶ್ರೀ ವಾಸುದೇವಮೂರ್ತಿಯ ಶಾಶ್ವತವಾಸದ ವೈಕುಂಠವು ಪ್ರಾಪ್ತಿಯಾಗುವದು. ಇದೇ ಮೋಕ್ಷವೆಂಬುದು.

ಹೀಗೆ ಪರಬ್ರಹ್ಮನಾದ ಶ್ರೀ ಹರಿಯು ಜೀವರಿಗೆ ಅಪ್ರತ್ಯಕ್ಷನಾಗಿರುವದರಿಂದ, ಬಿಂಬಕ್ಕೆ ಸದೃಶವಾಗಿ ಪ್ರತಿಬಿಂಬವೂ, ಮೂಲವಿಗ್ರಹಕ್ಕೆ ಸಮಾನವಾಗಿ

ಉತ್ಸವ ಪ್ರತಿಮೆಯೂ ಇರುವಂತೆ ಇರುವ ಅಪರಬ್ರಹ್ಮನಾಮಕರಾದ ಈ ವಾಯುದೇವರನ್ನೇ ಪ್ರತ್ಯಕ್ಷನಾದ ಬ್ರಹ್ಮನೆಂದು ದೇವತೆಗಳು ಸ್ತುತಿಸಿದರು. ಶ್ರೀ ಹರಿಯು ವಾಯುದೇವರನ್ನು ಮುಂದುಮಾಡಿ ಅವರ ದ್ವಾರದಿಂದ ಉಳಿದ ಜೀವರಲ್ಲಿ ಅನುಗ್ರಹ ಮಾಡುವನು. ಇದು ಆತನ ಸಂಕಲ್ಪವು. ಈ ಮಾತಿಗೆ ಶ್ರೀ ರಾಮಕೃಷ್ಣಾವತಾರಗಳ ಕಾಲಗಳಲ್ಲಿ ಅನೇಕ ದೃಷ್ಟಾಂತಗಳು ಕಂಡಿವೆ. "**ಹನುಮನಮತವೇ ಹರಿಮತವು। ಶ್ರೀ। ಹರಿಮತವೇ ಹನುಮಗೆ ಹಿತವು॥**" ಎಂವೂ "**ಕರಣ ನಿಯಾಮಕ ಸುರರ ಗುರುವೆ ನೀ। ಕರುಣಿಸೆ (ಹರಿಯು) ಕರುಣಿಸುವ॥**" ಎಂದೂ ಶ್ರೀ ದಾಸರಾಯರು ಪಾಡಿದ್ದಾರೆ.

ಜೀವಕೋಟಿಯೊಳಗೆ ವಾಯುದೇವರಿಗೆ ಸರಿ ಮಿಗಿಲಾದವರು ಯಾರೂ ಇಲ್ಲವೆಂಬುದು ಈ ಜಗತ್ತಿನ ನಿದರ್ಶನಕ್ಕೆ ಎರಡುಸಲ ಬಂದಿದ್ದು, ಅವರನ್ನು ಅಜ್ಞಾನದಿಂದ ಸರಿಗಟ್ಟಿಕೊಂಡ ರುದ್ರಾದಿ ದೇವತಾ ಶ್ರೇಷ್ಠರು ಅವರಿಗೆ ತ್ರಾಹಿ ತ್ರಾಹಿ ಅಂದದ್ದು ಪುರಾಣಪ್ರಸಿದ್ಧವು. ಆದಿಯಲ್ಲಿ ತಾತ್ವಿಕದೇವತೆಗಳು ವಾಯುದೇವರ ಅಗಾಧ ಮಹಿಮೆಯನ್ನರಿಯದೆ ತಾವು ಅವರಿಗೆ ಸಮಾನರೆಂದು ಗ್ರಹಿಸಿಕೊಂಡಿರಲು, ಅವರ ಅಜ್ಞಾನ, ಅಹಂಕಾರಗಳ ನಿವಾರಣಾರ್ಥವಾಗಿ ಶ್ರೀ ಹರಿಯು ಒಂದು ನಾಟಕವನ್ನೇ ರಚಿಸಿದನು. ಹೇಗೆಂದರ :— ಭಗವಂತನು ತನ್ನ ವಿರಾಡ್ದೇಹಗತರಾದ ಯಾವತ್ತೂ ತತ್ವೇಶರಿಗೆ ಅದನ್ನು ಬಿಟ್ಟುಹೋಗಲು ಹೇಳಿದನು. ಅದರಂತೆ ಅವರೆಲ್ಲರೂ ತಂತಮ್ಮ ಸ್ಥಾನಗಳನ್ನು ತ್ಯಜಿಸಿ ಹೋದಾಗ್ಯೂ, ಅಲ್ಲಿ ವಾಯುದೇವರೊಬ್ಬರು ಇದ್ದ ಮಾತ್ರದಿಂದ ಆ ವಿರಾಟ್‌ಶರೀರವು ಪತನವಾಗದೆ ಜೀವಿತವಾಗಿತ್ತು. ಆ ಮೇಲೆ ಅವರಿಗೂ ಅಲ್ಲಿಂದ ತೆರಳಿ ಪೋಗುವಂತೆ ಆಜ್ಞಾಪಿಸಲು ಆ ಶರೀರವು ಒಡನೆಯೇ ಮೃತಪ್ರಾಯವಾಗಿ ಪತನವಾಯಿತು. ಇಂತಿಷ್ಟು ತೋರಿಸಿದ ಬಳಿಕ ಭಗವಂತನು ಆ ತತ್ವೇಶರಿಗೆ ಪುನಃ ತನ್ನ ಆ ಶರೀರದಲ್ಲಿ ಒಬ್ಬೊಬ್ಬರಾಗಿ ಸೇರಿಕೊಳ್ಳಲು ಆಜ್ಞಾಪಿಸಿದನು. ಅದರಂತೆ, ಆ ತತ್ವೇಶರೆಲ್ಲರೂ ತಂತಮ್ಮ ಅಭಿಮಾನದ ಅವಯವಗಳಲ್ಲಿ ಸೇರಿಕೊಂಡು ಎಷ್ಟೆಷ್ಟೋ ಸಾಹಸಪಟ್ಟಾಗ್ಯೂ ಆ ಪತನವಾದ ಶರೀರವು ಚಲಿಸಲಿಲ್ಲ, ಉಸರಾಡಲಿಲ್ಲ, ಪೂರ್ಣ ನಿಶ್ಚೇಷ್ಟವಾಗಿತ್ತು. ತದನಂತರ, ಶ್ರೀ ಹರಿಯಾಜ್ಞೆಯಿಂದ ವಾಯುದೇವರು ಅದರಲ್ಲಿ ಪ್ರವೇಶಿಸಿದೊಡ

ನೆಯೇ ಆ ದೇಹವು ಸಜೀವವಾಗಿ ಚಲನ ವಲನಾದಿ ವ್ಯಾಪಾರಗಳನ್ನು ಮಾಡ ತೊಡಗಿತು. ಆದರಿಂದ, ವಾಯುದೇವರು ಸಕಲ ತತ್ವೇಶರಿಗೂ ಶ್ರೇಷ್ಠರಾಗಿ ನಿಯಾಮಕರಾದದ್ದು ಅನುಭವ ಸಿದ್ಧವಾಯಿತು. ಮತ್ತು ಸಕಲ ತತ್ವೇಶರೂ ಈ ಉದ್ಗೀಥನಾಮಕ ವಾಯುದೇವರ ಮಹಾಮಹಿಮೆಗಳನ್ನು ಅಖಂಡವಾಗಿ ಕೊಂಡಾಡಿ ಶರಣುಹೋದರು. ೨ನೇ ದೃಷ್ಟಾಂತವೆಂದರೆ :–ಹನುಮಂತದೇವರು ಅವತರಿಸಿದ ೨೭ನೇ ದಿನ ಸೂರ್ಯನಿಗೆ ಗ್ರಹಣ ಕವಿಯಲು, ಸೂರ್ಯ ದೇವರ ಆ ಆಪತ್ತನ್ನು ನಿವಾರಿಸಬೇಕೆಂದು ರವಿ ಮಂಡಲಕ್ಕೆ ಆಂಜನೇಯರು ಹಾರಿ ಸೂರ್ಯನಿಗೆ ಕಂಟಕನಾಗಿ ಬಂದಿದ್ದ ರಾಹುವನ್ನು ನುಂಗಹೋಗಲು, ಆ ದೈತ್ಯನು ಬೆದರಿ ಇಂದ್ರದೇವರ ಬೆನ್ನುಬಿದ್ದನು. ಇಂದ್ರದೇವರು ಈ ಹಸುಗೂಸು ಯಾರೆಂಬ ಜ್ಞಾನವಾಗದೆ ತನ್ನ ವಜ್ರಾಯುಧದಿಂದ ಅದಕ್ಕೆ ಹೊಡೆದರು. ಆದರೆ, ಸ್ವತಃ ವಜ್ರ ಶರೀರಿಯಾದ ಆಂಜನೇಯರಿಗೆ ಆ ವಜ್ರಾಯುಧದ ಪೆಟ್ಟಿನಿಂದ ಎಷ್ಟೆಷ್ಟೂ ನೋವಾಗಲಿಲ್ಲ. ಆದಾಗ್ಯೂ, ಆ ಆಯುಧಕ್ಕಿದ್ದ ವರವನ್ನು ಸತ್ಯಗೊಳಿಸಲು ಆ ಹೊಡತದಿಂದ ಮೂರ್ಛೆ ಹೊಂದಿದವರಂತೆ ಭೂಮಿಯ ಮೇಲೆ ಒರಗಿದರು. ಇದನ್ನು ತಿಳಿದು ವಾಯುದೇವರು ಬಹು ಕುಪಿತರಾಗಿ ದೇವೇಂದ್ರನನ್ನು ಶಿಕ್ಷಿಸಲು ಅವನ ಪರಿವಾರದ ಎಲ್ಲ ದೇವತೆಗಳ ಶ್ವಾಸನಿರೋಧಗೈದರು. ಸ್ವರ್ಗಲೋಕವು ಮೃತಪ್ರಾಯವಾಗಿದ್ದನ್ನು ಕಂಡು ಬ್ರಹ್ಮದೇವರು ಶ್ರೀ ಹರಿಯೊಡಗೂಡಿ ಭೂಲೋಕಕ್ಕೆ ಬಂದು, ಆಂಜನೇಯರನ್ನೆಬ್ಬಿಸಿ ಅವರ ಜನಕರಾದ ವಾಯುದೇವರನ್ನು ಸಾಂತ್ವನಗೊಳಿಸಿದರು. ಇಂದ್ರದೇವರು ವಾಯುದೇವರ ಪಾದಗಳ ಮೇಲೆ ಬಿದ್ದು ಅಪರಾಧ ಕ್ಷಮಿಸಿರೆಂದು ಪ್ರಾರ್ಥಿಸಿ, ಹನುಮಂತದೇವರಿಗೆ ತಮ್ಮ ಕಾಣಿಕೆಯೆಂದು ಎಲ್ಲ ದೇವತೆಗಳೂ ವರಗಳನ್ನಿತ್ತರು. ಅಂತೆಯೇ, ವಾಯುದೇವರು "**ದೇವದೇವೋ ವಿಶಿಷ್ಟಃ**" ಎನಿಸಿದ್ದು. ಈ ಪ್ರಸಂಗದಿಂದ ಆಂಜನೇಯರು ಹನುಮಂತಾಖ್ಯರಾದರು ॥ ೩ ॥

**ಪದ :— ಸುರರೊಳಗೆ ನರರೊಳಗೆ ಸರ್ವ ಭೂತಗಳೊಳಗೆ ।**
**ಪರತರನೆನಿಸಿ ನೇಮದಿ ನೆಲೆಸಿಹ ॥**
**ಹರಿಯನಲ್ಲದೆ ಬಗೆಯ ಅನ್ಯರನು ಲೋಕದೊಳು ।**
**ಗುರುಕುಲ ತಿಲಕ ಮುಖ್ಯ ಪವಮಾನನು ॥ ೪ ॥**

**ಟೀ. ತಾ.** :—ವಾಯುದೇವರು ಸಕಲ ಸದ್ಗುಣಗಳಿಂದ ಸುರಸಮೂಹದಲ್ಲೂ ಕೈಮುತ್ಯನ್ಯಾಯದಿಂದ ನರಾದಿ ಪ್ರಾಣಿವರ್ಗದಲ್ಲೂ ಅತಿ ಶ್ರೇಷ್ಠರಾಗಿದ್ದು ಸಕಲ ಜಗಚ್ಚೇಷ್ಟಾಕಾರಣರೆನಿಸರು. ಜೀವಕೋಟಿಗೆಲ್ಲ ನಿಯಾಮಕ–ಬುದ್ಧಿಪ್ರೇರಕರಾಗಿ ಶ್ರೀ ರಮಾನಾರಾಯಣರ ವಿನಾ ಯಾರಿಗೂ ಅಧೀನರಾಗಿರದೆ, ಭಗವದಿಚ್ಛೆಯನ್ನರಿತು ಅದರಂತೆ ವರ್ತಿಸುತ್ತ ದೇವಶಿಖಾಮಣಿಯೆನಿಸಿಹರು. ಇಂಥ ಅಮೋಘ ಕೀರ್ತಿಯುತರಾದ ಪ್ರಧಾನ ವಾಯುದೇವರೇ ಮುಮುಕ್ಷುಜೀವರ ಶ್ರೇಷ್ಠ ಗುರುಗಳು. ಮತ್ತು ಸುರ ಸಮುದಾಯದ ಸಾರ್ವಭೌಮಚಕ್ರವರ್ತಿಗಳು. ಹಾಗೆಯೇ ಶ್ರೀ ಹರಿಗೆ ಪ್ರಮುಖ ಮಂತ್ರಿಗಳಾಗಿಹರು. ವಾಯುದೇವರು ಈ ಬ್ರಹ್ಮಾಂಡಗತರಾದ ಅನಂತ ಜೀವರ ಶರೀರಗಳಲ್ಲಿ ಅನಂತರೂಪ ಧರಿಸಿ ಕಾರ್ಯ ಮಾಡುತ್ತಿದ್ದು, ಅಂಥವುಗಳಲ್ಲಿ ಪಂಚಕ್ರಿಯಾತ್ಮಕವಾದ ರೂಪಗಳು ಬಹು ಶ್ರೇಷ್ಠವಾದವು. ಅವು ಯಾವವೆಂದರೆ :— (೧) ಸಾತ್ವಿಕಾದಿ ತ್ರಿವಿಧ ಜೀವರಲ್ಲಿ ನೆಲೆಸಿದ್ದು ಅವರವರ ಸ್ವರೂಪ ಯೋಗ್ಯ ವ್ಯಾಪಾರಗಳನ್ನು ಮಾಡಿಸುವದು. ಇದು ಅವರ "**ಸೂತ್ರನಾಮಕ ಪ್ರಥಮ ರೂಪವು.**" (೨) ಈ ಬ್ರಹ್ಮಾಂಡವನ್ನು ತಲೆಯ ಮೇಲೆ ಹೊತ್ತಿರುವ ಮಹಶೇಷ ದೇವರನ್ನು ಘನೋದಕವಲ್ಲಿ ಬೆನ್ನುಮೇಲೆ ಧರಿಸಿರುವದು ಇದು ಅವರ **ಕೂರ್ಮನಾಮಕ ದ್ವಿತಿಯರೂಪವು.**" (೩) ಈ ಕಲ್ಪದಲ್ಲಿ ಸೃಷ್ಟರಾದ ವಿಶಿಷ್ಟ ದೇಹಿಗಳಲ್ಲಿ ನಿಂತು ಶ್ರೀ ಹರಿಯ ಪ್ರೀತ್ಯರ್ಥವಾಗಿ ಪ್ರತಿದಿನ ೨೧೬೦೦ ಶ್ವಾಸರೂಪದ ಹಂಸಮಂತ್ರಗಳನ್ನು ಈ ಕಲ್ಪಾವಸಾನ ಕಾಲದವರೆಗೂ ಜಪಿಸಿ ಸಾತ್ವಿಕಾದಿ ತ್ರಿವಿಧಜೀವರ ತ್ರಿವಿಧ ಸಾಧನಗಳನ್ನು ಪೂರ್ತಿಗೈಸಿ ಅವರವರ ಯೋಗ್ಯ ಗತಿಗಳನ್ನು ಕೊಡುವದು–ಕೊಡಿಸುವದು. ಇದು ಅವರ "**ಶ್ವಾಸನಾಮಕ ತೃತಿಯರೂಪವು.**" (೪) ಈ ಬ್ರಹ್ಮಾಂಡದೊಳಗೆ ಹಾಗೂ ಅತಿಸೂಕ್ಷ್ಮವಾದ ಜೀವರ ಸ್ವರೂಪದೊಳಗೆ ವ್ಯಾಪ್ತನಾದ ಶ್ರೀ ಹರಿಯ ಅತಿ ಸಮೀಪದ ಸನ್ನಿಧಾನದಲ್ಲಿದ್ದು ಸರ್ವದಾ ಸೇವಿಸುತ್ತಿರುವದು. ಇದು ಅವರ "**ಅಣೋರಣೀಯಾನ್‌ನಾಮಕ ಚತುರ್ಥರೂಪವು.**" (೫) ಇಂದ್ರದೇವರಿಗಾಗಿ ಬಲಿಚಕ್ರವರ್ತಿಯನ್ನು ನಿಗ್ರಹಿಸುವಾಗ್ಗೆ ತ್ರಿವಿಕ್ರಮದೇವರ ಎಡಪಾದದಂಗುಟದ ಉಗುರು ತಗಲಿ ಮಹದ್ಬ್ರಹ್ಮಾಂಡಖರ್ಪರವು ಒಡೆಯಲು, ಬಾಹ್ಯದ ಘನೋದಕವು ಈ ಬ್ರಹ್ಮಾಂಡದೊಳಗೆ ಬಾರದಂತೆ ಆ ಒಡಕನ್ನು

ಮೆತ್ತುತ್ತಿರುವದು. ಇದು ಅವರ “ **ಮಹತೋಮಹೀಯಾನ್ ನಾಮಕ ಪಂಚಮರೂಪವು.** ” ಈ ರೂಪವು ೩ ಕೋಟಿ ಸಂಖ್ಯಾತ್ಮಕವಾಗಿದ್ದು ಅಸುರವೃಂದ ಸಂಹಾರಕವೂ ಆಗಿಹುದು. ಈ ರೂಪಗಳು ಹರಿಕಥಾಮೃತಸಾರ ಸಂ ೨೩ ಶ್ಲೋ. ೧೬, ೧೭ರಲ್ಲಿ ಚನ್ನಾಗಿ ನಿರೂಪಿಸಲ್ಪಟ್ಟಿವೆ. ದೇವತಾದಿ ಸರ್ವದೇಹಿಗಳಿಗೆ ಸ್ವಪ್ನ, ಸುಪ್ತಿ, ಮೂರ್ಛಾದಿ ಅವಸ್ಥೆಗಳೂ, ತಲ್ಲಕ್ಷಣಗಳಾದ ಅಜ್ಞಾನ, ಮೋಹ, ಮದ, ಆಲಸ್ಯ, ಬುದ್ಧಿ ಭ್ರಮಾದಿ ದೋಷಗಳೂ ಇರುವಂತೆ, ವಾಯುದೇವರಿಗೆ ಮಾತ್ರ ಸುತರಾಂ ಇಲ್ಲ. ಅಂತೆಯೇ, ಅವರು ಬ್ರಹ್ಮಕಲ್ಪದಾರಂಭದಿಂದ ಅಂತ್ಯದ ವರೆಗೆ ಮಧ್ಯದಲ್ಲಿ ಎಷ್ಟೂ ವಿರಾಮವಿಲ್ಲದೆ ಅಖಂಡವಾಗಿ ಸರ್ವಪ್ರಾಣಿಗಳಲ್ಲಿ ನಿಂತು ಇವರ ಜಾಗ್ರತ್ಸ್ವಪ್ನ ಸುಪ್ತಿಗಳ ವ್ಯಾಪಾರಗಳನ್ನು ಕ್ರಮತಪ್ಪದೆ ಮಾಡಿಸುವರು. ಅದರಿಂದೇ ಅವರು ಸರ್ವ ವಿಕಾರಗಳಿಂದ ರಹಿತರಾದವರೆನಿಸಿದ್ದು. ಇವರು ಜೀವರ ಸ್ವರೂಪದಲ್ಲಿಯೂ ಇರುವರೆಂಬುವದಕ್ಕೆ ಹರಿ. ಕ. ಸಾರದ ೭–೫, ೧೨–೪೪, ೨೩–೨೦ ಸಂಧಿ ಶ್ಲೋಕಗಳು ಆಧಾರಗಳಾಗಿವೆ.

ಶ್ರೀ ಗುರು ಮಧ್ವೇಶಾರ್ಪಣಮಸ್ತು.

# ವಾಯುದೇವರ ಪ್ರಥಮಾವತಾರರಾದ ಶ್ರೀ ಹನುಮಂತದೇವರ ವರ್ಣನ

**ಪದ:— ತ್ರೇತೆಯಲಿ ರಘುಪತಿಯ ಸೇವೆ ಮಾಡುವೆನೆಂದು ।**
**ವಾತ ಸುತ ಹನುಮಂತನೆಂದೆನಿಸಿದ ॥**
**ಪ್ರೋತ ಭಾವದಿ ತರಣಿ ಬಿಂಬಕ್ಕೆ ಲಂಘಿಸಿದ ।**
**ಈತಗೆಣೆ ಯಾರು ಮೂಲೋಕದೊಳಗೆ ॥ ೫ ॥**

**ಟಿ. ತಾ.** :— ವಾಯುದೇವರನ್ನು ಶ್ರೀ ರಮಾನಾರಾಯಣರು ಪಡೆದಿರುವಂತೆ ಇವರ ಹನುಮಾದ್ಯವತಾರ ತ್ರಯಗಳನ್ನೂ ಶ್ರೀ ರಮಾದೇವಿಯರೇ ಪಡೆದಿಹರೆಂದು ಶ್ರುತಿಗಳು ಸಾರುವವು. ಶ್ರೀ ನೃಸಿಂಹದೇವರು ಪ್ರಾದುರ್ಭ

ವಿಸಲು ಶಿಲಾ ಸ್ತಂಭವು ಉಪಾಧಿಯಾದಂತೆ ಅಂಜನಾದೇವಿ, ಕುಂತೀದೇವಿ, ವೇದವತಿದೇವಿಯರು ನಿಮಿತ್ತಮಾತ್ರದವರು. ಇಲ್ಲವಾದರೆ, ಇವರಿಂದ ಜನಿಸಿದ ಶಿಶುಗಳು ರವಿಮಂಡಲಕ್ಕೆ ಹಾರುವದೆಂದರೇನು?' ಪರ್ವತವನ್ನು ಶತಶಃ ಸೀಳುವದೆಂದರೇನು? ಬುಟ್ಟಿತುಂಬ ಗುಗ್ಗರಿಯನ್ನು ತಿನ್ನುವದೆಂದರೇನು? ಇವೆಲ್ಲ ಅತಿ ಮಾನುಷ ವ್ಯಾಪಾರಗಳೇ ಅಹುದು. ಈ ಅವತಾರ ರೂಪಗಳೂ ಮೂಲರೂಪದಂತೆ ಶುಕ್ಲ ಶೋಣಿತ ಸಂಪರ್ಕರಹಿತವಾದಂಥಹಾದುದರಿಂದಲೇ ಅಜ್ಞಾನಾದಿ ಸರ್ವದೋಷ ವಿವರ್ಜಿತವಾಗಿ ಸ್ವೇಚ್ಛಾ ಮರಣವುಳ್ಳವಾದವು. ಭೂಭಾರರಾದ ದೈತ್ಯರ ವಿನಾಶಕ್ಕಾಗಿ ಶ್ರೀ ಹರಿಯು ರಾಮಾವತಾರ ಮಾಡಬೇಕೆಂದಿರಲು, ಆತನ ಸಕಲ ಸೇವಾರ್ಥವಾಗಿ ತ್ರೇತಾ ಯುಗದಲ್ಲಿ ಶ್ರೀ ಹರಿಗೆ ಪ್ರಥಮಾಂಗರಾದ ವಾಯುದೇವರು '**ಹನುಮಂತ**'ನೆಂಬಭಿಧಾನದಿಂದ ಅಂಜನಾದೇವಿಯಲ್ಲಿ ಅವತರಿಸಿದರು. ಇವರು ಶ್ರೀ ರಾಮದೇವರ ಕಾರ್ಯ ನಿರ್ವಾಹಕ್ಕಾಗಿ ಕಪಿ ರೂಪವನ್ನು ಧರಿಸಿದರೇ ವಿನಾ ಶಾಪಾದಿ ಅನ್ಯ ಕಾರಣಗಳಿಂದಲ್ಲ. ಹಿಂದೆ ಹೇಳಿದ '**ಆತ್ಮಾವೈ ಪುತ್ರನಾಮಾಸಿ**' ಎಂಬ ಪ್ರಮಾಣದಂತೆ ಸಾಕ್ಷಾದ್ವಾಯುದೇವರೇ ಈಗ ಹನುಮಂತದೇವರ ರೂಪದಿಂದ ಕಾಣಿಸಿಗೊಂಡರು. ಅದರಿಂದ ಮೂಲರೂಪದ ಜ್ಞಾನ, ಭಕ್ತಿ, ವೈರಾಗ್ಯ, ಬಲ, ವೀರ್ಯ, ಧೈರ್ಯ, ಶೌರ್ಯಾದಿ ಗುಣಗಳು ಯಥಾಪ್ರಕಾರವಾಗಿ ಈ ಅವತಾರದಲ್ಲೂ ಪೂರ್ಣವಾಗಿ ಇದ್ದವು. ಆದರೆ, ಅವು ಯುಗ ಮರ್ಯಾದೆಯನ್ನನುಸರಿಸಿ ಮಾತ್ರ ಪ್ರಕಟಿಸಲ್ಪಟ್ಟವು. ಈ ಹನುಮಂತದೇವರು ಅಕ್ಷಯ ತೃತೀಯದ ಶುಭ ಮುಹೂರ್ತದಲ್ಲಿ ಅವತರಿಸಿ ೨೭ ದಿವಸಗಳ ಶಿಶುವಾಗಿರುವಾಗ್ಗೆ ವೈಶಾಖ ವದಿ ಅಮವಾಶ್ಯದಲ್ಲಿ ಸೂರ್ಯಗ್ರಹಣ ಬರಲು, ಆ ಭಯ ನಿವಾರಣಾರ್ಥವಾಗಿ ರವಿ ಮಂಡಲಕ್ಕೆ ಉಡ್ಡಾಣಮಾಡಿದರು. ಇಂಥ ಅಸದೃಶ ಪರಾಕ್ರಮಶಾಲಿಗೆ ಈ ಬ್ರಹ್ಮಾಂಡದಲ್ಲಿ ಸಮರಾದವರ್ಯಾರು? ಯಾರೂ ಇಲ್ಲೆಂಬುವದೇ ಅಭಿಪ್ರಾಯವು || ೫ ||

**ಪದ:— ತರಣಿಗಭಿಮುಖನಾಗಿ ಶಬ್ದ ಶಾಸ್ತ್ರವ ಪಠಿಸಿ |**
**ಉರವಣಿಸಿ ಹಿಂದೆ ಮುಂದಾಗಿ ನಡೆದ ||**
**ಪರಮ ಪವಮಾನ ಸುತ ಉದಯಾಸ್ತ ಶೈಲಗಳ |**
**ಭರದಿ ಐದಿದ ಈತಗುಪಮೆಯುಂಟೆ || ೬ ||**

**ಟೀ. ತಾ. :**—ಯದ್ಯಪಿ ಹನುಮಂತದೇವರು ಪೂರ್ಣಜ್ಞರಾದಾಗ್ಯೂ, ಸೂರ್ಯಾಂತರ್ಗತ ಶ್ರೀ ಲಕ್ಷ್ಮೀನಾರಾಯಣನಲ್ಲಿ ತಮ್ಮ ·ನೀತ ಶಿಷ್ಯತ್ವ ಭಾವನೆಯಿಂದ ಆತನಿಗೆ ಸಮ್ಮುಖರಾಗಿ ನಿಂತು ಸ್ವರ, ವರ್ಣ ಸಂಯೋಜನದ ಸಮಗ್ರ ವ್ಯಾಕರಣ ಶಾಸ್ತ್ರವನ್ನು ಅಭ್ಯಾಸ ಮಾಡುತ್ತ ಸೂರ್ಯನ ರಥವು ಅತಿ ವೇಗದಿಂದ ಸಾಗಿದಂತೆ ತಾವೂ ಸಹ ಹಿಂದೆ ಹಿಂದಕ್ಕೆ ಅಷ್ಟೇ ವೇಗದಿಂದ ಓಡುತ್ತ ಮಹಾಬಲದ ಈ ವಾಯುಕುಮಾರರು ಪೂರ್ವ, ಪಶ್ಚಿಮ ಗಿರಿಗಳನ್ನು ಬಹು ತೀವ್ರವಾಗಿ ಮುಟ್ಟಿದರು. ಇಂಥ ಅದ್ಭುತ ವೀರರಿಗೆ ಈ ಬ್ರಹ್ಮಾಂಡದಲ್ಲಿ ಸಮಾನರಾದವರುಂಟೇ ? ಸುತರಾಂ ಇಲ್ಲ. ॥ ೬ ॥

**ಪದ :— ಅಖಿಲ ವೇದಗಳ ಸಾರವ ಥರಿಸಿ ಮುನ್ನ ತಾ ।**
**ನಿಖಿಲ ವ್ಯಾಕರಣ ಶಾಸ್ತ್ರವನು ಪೇಳಿ ॥**
**ಮುಖದಲ್ಲಿ ಕಿಂಚಿದಪಶಬ್ದ ಇವಗಿಲ್ಲೆಂದು ।**
**ಮುಖ್ಯ ಪ್ರಾಣನನು ರಾಮನನುಕರಿಸಿದ ॥ ೭ ॥**

**ಟೀ. ತಾ. :**— ಅನಂತ ವೇದರಾಶಿಯ ಯಥಾರ್ಥ ಜ್ಞಾನವನ್ನು ಸಂಗ್ರಹಿಸಿ ಅರಿತಿದ್ದ ಹನುಮಂತದೇವರು ಶ್ರೀ ರಾಮಚಂದ್ರದೇವರನ್ನು ದಂಡ ಕಾರಣ್ಯದೊಳಗಿದ್ದ ಕಿಷ್ಕಿಂಧದ ಸಮೀಪದಲ್ಲಿ ಕಂಡು, ತಾವು ಮೊದಲು ಅಭ್ಯಾಸಗೈದಿದ್ದ ಸಮಗ್ರ ವ್ಯಾಕರಣ ಶಾಸ್ತ್ರವನ್ನು ನಿಂದು ಒಪ್ಪಿಸಲು, ಅವರ ಸುಧಾ ಸದೃಶವಾದ ಅಸ್ಖಲಿತ ಮೃದು ಮಧುರ ವಾಣಿಯಲ್ಲಿ ಯಾವ ವಿಧದ ಅಪಶಬ್ದ, ತೊದಲ್ನುಡಿ, ಅಸ್ಪಷ್ಟತಾ, ಗಡಿಬಿಡಿ, ಬಹು ಮಂದತ್ವ, ಅತಿಗಟ್ಟಿ, ಕರ್ಕಶ, ಮಹಾ ಸಾವಕಾಶ, ಅಪಸ್ವರಾದಿ ದೋಷಗಳಿಲ್ಲದಿರುವದನ್ನು ಕಂಡು ಸುಪ್ರೀತರಾಗಿ, ಹನುಮಂತದೇವರು ನಿರ್ದೋಷ ವಸ್ತುವೆಂದು ಗ್ರಹಿಸಿ, ಅವ ರಲ್ಲಿ ಪರಮಾನುಗ್ರಹಮಾಡಿ ಶ್ರೀ ರಾಮಚಂದ್ರದೇವರು ಮುಖ್ಯ ಪ್ರಾಣಾಖ್ಯ ಹನುಮಂತದೇವರ ಸ್ನೇಹವನ್ನು ಅಪೇಕ್ಷಿಸಿದರು. ಅರ್ಥಾತ್, ಅವರನ್ನು ತಮ್ಮ ಮುಖ್ಯ ಮಂತ್ರಿಯೆಂದು ಸ್ವೀಕರಿಸಿ, ಸರ್ವ ಕಾರ್ಯಗಳಲ್ಲೂ ಅವರ ಅನುಮತಿ, ಅಭಿಪ್ರಾಯಗಳನ್ನು ಕೇಳಿ, ಅದರಂತೆ ಮಾಡುವದೆಂದು ಮನಸಾ ನಿರ್ಧರಿ ಸಿದರು. ಅದರಿಂದೇ “ **ಹನುಮನ ಮತವೇ ಹರಿಮತವು** ” ಎಂದು ಮೊದಲು ಹನುಮಂತದೇವರ ಮತಕ್ಕೆ ಪ್ರಾಶಸ್ತ್ಯಕೊಟ್ಟು ದಾಸವರ್ಯರು

ಪದ ರಚಿಸಿದ್ದಾರೆ. ಈ ಶ್ರೇಷ್ಠ ಪುರುಷರನ್ನು "ಮಹಾವ್ಯಾಕರಣಾಂಬೋಧಿ" ಎಂದು ಸಚ್ಛಾಸ್ತ್ರಗಳಲ್ಲಿ ಸ್ತುತಿಸಿರುವರು. ॥ ೭ ॥

**ಪದ :— ತರಣಿ ಸುತನನು ಕಾಯ್ದು ಶರಧಿಯನು ನೆರೆದಾಟಿ ।**
**ಧರಣಿ ಸುತೆಯಳ ಕಂಡು ದನುಜರೊಡನೆ ॥**
**ಭರದಿ ರಣವನು ಮಾಡಿ ಗೆಲಿದು ದಿವ್ಯಾಸ್ತ್ರಗಳ ।**
**ಉರಹಿ ಲಂಕೆಯ ಬಂದ ಹನುಮಂತನು ॥ ೮ ॥**

**ಟೀ. ತಾ. :—** ಸೂರ್ಯನವತಾರನಾದ ಸುಗ್ರೀವ ಕಪಿರಾಜನು ತನ್ನ ಅಣ್ಣನಾದ ಇಂದ್ರಾವತಾರದ ವಾಲಿಯೆಂಬ ಕಪಿವೀರನೊಡನೆ ವೈರವನ್ನು ಬೆಳೆಸಿ ಹನುಮಂತದೇವರ ಸಹಾಯವನ್ನ ಪೇಕ್ಷಿಸಲು, ಅವರು ಸುಗ್ರೀವನಲ್ಲಿ ಪರಮಾನುಗ್ರಹವನ್ನು ಮಾಡಿ ಆತನ ಪಕ್ಷವಹಿಸಿ ಶ್ರೀರಾಮಚಂದ್ರದೇವರಿಂದ ವಾಲಿಯನ್ನು ಕೊಲ್ಲಿಸಿ ಸುಗ್ರೀವನನ್ನು ಸಂರಕ್ಷಿಸಿದರು. ಶ್ರೀ ರಾಮಚಂದ್ರ ದೇವರ ಪ್ರೀತಿಗಾಗಿ ಶತ ಯೋಜನ ವಿಸ್ತಾರವಾದ ದಕ್ಷಿಣದ ಕಡಲನ್ನು ಕಾಲುವೆಯಂತೆ ದಾಟಿ ಲಂಕಾ ದ್ವೀಪವನ್ನು ಸೇರಿ, ರಾವಣನ ಅಶೋಕ ವನದಲ್ಲಿದ್ದ ಶ್ರೀ: ಸೀತಾದೇವಿಯರನ್ನು ಕಂಡು ನಮಸ್ಕರಿಸಿ, ಶ್ರೀ ರಾಮ, ಲಕ್ಷ್ಮಣದೇವರ ಕುಶಲವಾರ್ತೆಯನ್ನು ಹೇಳಿ, ಶ್ರೀ ರಾಮದೇವರು ಕೊಟ್ಟು ಕಳುಹಿದ ಕೈ ಬೆರಳ ಉಂಗುರವನ್ನು ಆ ಜಗನ್ಮಾತೆಗೆ ಸಲ್ಲಿಸಿ, ತಮ್ಮ ದೌತ್ಯವನ್ನು ಸಾರ್ಥಕಗೊಳಿಸಿ, ಹಸಿವೆಯ ನೆವನದಿಂದ ಆ ಅತಿ ಸೌಂದರ್ಯವಾದ ಅಶೋಕ ವನವನ್ನು ನಾಶಗೊಳಿಸಿ ಆ ವ್ಯಾಜದಿಂದ ಕೈಗೆ ಸಿಕ್ಕ ರಾವಣಗೆ ಸಮನಾದ ಅಕ್ಷಯಕುಮಾರನೆಂಬ ರಾವಣನ ಮಗನನ್ನೂ ಅವನ ದೈತ್ಯದಳದ ಮೂರರಲ್ಲಿ ಒಂದುಭಾಗವನ್ನೂ ಒಂದೇ ಕಾಲದಲ್ಲಿ ಸಂಹರಿಸಿಬಿಟ್ಟರು. ರಾವಣನ ಜೇಷ್ಠಪುತ್ರನಾಗಿ ಮಹಾವೀರನಾದ ಇಂದ್ರಜಿತು ಬಿಟ್ಟ ಬ್ರಹ್ಮಾಸ್ತ್ರವೇ ಮೊದಲಾದವುಗಳನ್ನು ತೃಣದಂತೆ ಬಗೆದು, ತಮ್ಮ ಬಾಲಕ್ಕೆ ಆ ದೈತ್ಯರಾಜನಾದ ರಾವಣನು ಹಚ್ಚಿಸಿದ ಬೆಂಕಿಯಿಂದ ಆ ಲಂಕಾ ಪಟ್ಟಣವನ್ನೇ ಸುಟ್ಟು ಭಸ್ಮಮಾಡಿ, ಶ್ರೀ ರಾಮಚಂದ್ರದೇವರ ಸನ್ನಿಧಾನಕ್ಕೆ ಪುನಃ ಸಮುದ್ರವನ್ನು ನಿರಾಯಾಸದಿಂದ ದಾಟಿಬಂದರು. ಇಂಥ ಸಾಹಸವು ಇನ್ನೊಬ್ಬರಿಂದ ಸುತರಾಂ ಸಾಧ್ಯವಿಲ್ಲ. ॥ ೮ ॥

**ಪದ :— ಹರಿಗೆ ಚೂಡಾರತ್ನವಿತ್ತು ಹರಿಗಳ ಕೂಡಿ।**
**ಶರಧಿಯನು ಕಟ್ಟಿ ಬಹು ರಕ್ಕಸರನು ॥**
**ಒರಿಸಿ ರಣದಲ್ಲಿ ದಶಶಿರನ ಹುಡಿಗುಟ್ಟಿ ತಾ।**
**ಮೆರೆದ ಹನುಮಂತ ಬಲವಂತ ಧೀರಾ ॥ ೯ ॥**

**ಟೀ. ತಾ.** :—ಶ್ರೀ ರಾಮಚಂದ್ರದೇವರ ಉಂಗುರವನ್ನು ಶ್ರೀ ಜಾನಕಿ ದೇವಿಯರಿಗಿತ್ತು ಅವರನ್ನು ಮಹಾನಂದಸಾಗರದಲ್ಲಿ ಲೋಲಾಡಿಸಿದಂತೆ, ಆ ಜಗನ್ಮಾತೆಯರು ಮುಡಿಯಲ್ಲಿ ಧರಿಸಿದ್ದ ಚೂಡಾರತ್ನವನ್ನು ಅವರಿಂದ ತಂದು ಶ್ರೀ ರಾಮಚಂದ್ರದೇವರಿಗೆ ಒಪ್ಪಿಸಿ, ಆ ಮೂಲಕವಾಗಿ ಆ ಸೀತ ಹಾಗೂ ಶಾಶ್ವತ ದಂಪತಿಗಳ ಪರಮಾನುಗ್ರಹವನ್ನೂ ಅನರ್ಘ್ಯ ಪದವಾದ ಬ್ರಹ್ಮಪಟ್ಟವನ್ನೂ ಇವರು ಸಂಪಾದಿಸಿದರು ಶ್ರೀ ರಮಾನಾರಾಯಣರ ಮಧ್ಯ ದಲ್ಲಿ ವಿಯೋಗವೆಂಬುದು ಯಾವ ಯಾವ ಕಾಲಕ್ಕೂ ಇರದಿದ್ದಾಗ್ಯೂ, ನರರಂತೆ ನಟನೆಯನ್ನು ಮಾಡಿ ತೋರಿಸಲು ಅವರಿಬ್ಬರೂ ಅಗಲಿರುವಂತೆ ಅಜ್ಞರಿಗೆ ಕಾಣಿಸುತ್ತಿರಲು, ಹನುಮಂತದೇವರು ಹೀಗೆ ಜಗದ್ವಿಲಕ್ಷಣರಾದ ಆ ಗಂಡ-ಹೆಂಡರ ಸ್ವರೂಪಭೂತವಾಗಿದ್ದ ಉಂಗುರ ಚೂಡಾರತ್ನಗಳನ್ನು ತಂದು ಪರಸ್ಪರರಿಗೆ ಮುಟ್ಟಿಸಿದ ಕಾರಣ, ಬಹುಕಾಲದಾರಭ್ಯದಿಂದ ಅಗಲಿದ್ದ ದಂಪತಿ ಗಳು ಪುನಃ ಕೂಡಿದಂತಾಗಿ ಹರ್ಷಾಬ್ಧಿಯಲ್ಲಿ ಮುಳುಗಿದರು. ಶ್ರೀ ರಮಾ-ನಾರಾಯಣರ ಮಧ್ಯದ ಯಾವದೇ ಪ್ರಕಾರದ ಕಾರ್ಯವನ್ನು ಮಾಡ ತಕ್ಕವರು ಯಾವಾಗಲಾದರೂ ಬ್ರಹ್ಮಪದಕ್ಕೆ ಯೋಗ್ಯರಾದ ಋಜು ಜೀವರೇ ಆಗಿರುವರು, ಅನ್ಯರಲ್ಲ. ಈ ಮಾತಿಗೆ, ಶ್ರೀ ರಮಾವತಾರದ ರುಗ್ಮಿಣಿ ದೇವಿಯರ ವಿವಾಹ ಕಾಲದಲ್ಲಿ ಅವರ ಪತ್ರವನ್ನು ಶ್ರೀಕೃಷ್ಣಪರಮಾತ್ಮನಿಗೆ ತಂದುಕೊಟ್ಟ ಬ್ರಾಹ್ಮಣರು ಋಜುಗಣದಲ್ಲಿ ಹೆಚ್ಚಿನವರಾದ ಲಾತವ್ಯರೇ ಆಗಿದ್ದರೆಂಬುದು ಪ್ರಮಾಣ ಪ್ರಮಿತವಾಗಿದೆ.

ಹನುಮಂತದೇವರು ಸುಗ್ರೀವಾದಿ ಕಪಿವೀರರನ್ನು ಕೂಡಿಕೊಂಡು ಸಮು ದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಗೆ ದಾಳಿಯನ್ನಿಟ್ಟು ಅನೇಕಕೋಟಿ ರಾಕ್ಷಸ ರನ್ನು ಮಶಕಗಳನ್ನೊರಿಸುವಂತೆ ಸವರಿಬಿಟ್ಟರು. ಹೀಗೆ, ಲಂಕೆಯನ್ನು ಸೂರೆ ಗೊಂಡು ದೈತ್ಯೇಂದ್ರನಾದ ಹತ್ತುತಲೆ, ೨೦ ಕರಗಳ ರಾವಣನನ್ನು ರಕ್ತಕಾರು

ವಂತೆ ಗುದ್ದಿ ಬಹು ಭಂಗಪಡಿಸಿ ಜಗದೇಕವೀರರಾಗಿ ರಣದಲ್ಲಿ ಅತಿ ಶೋಭಿಸುತ್ತ ಮೆರೆದವರು ಈ ಹನುಮಂತ ದೇವರು. ॥ ೯ ॥

**ಪದ :— ಉರಗ ಬಂಧಕೆ ಸಿಲುಕಿ ಕಪಿವರರು ಮೈ ಮರೆಯೆ ।**
**ತರಣಿ ಕುಲ ತಿಲಕನಾಜ್ಞೆಯ ತಾಳಿ ತಾ ॥**
**ಗಿರಿ ಸಹಿತ ಸಂಜೀವನವ ಕಿತ್ತಿ ತಂದಿತ್ತ ।**
**ಸುರ ನರರೊಳ್ ಸರಿಯುಂಟೆ ಹನುಮಂತಗೆ ॥ ೧೦ ॥**

**ಟೀ. ತಾ.** :— ಇಂದ್ರಜಿತುವಿನ ಮಹಾಘೋರ ಯುದ್ಧದಲ್ಲಿ ಅವನ ಸರ್ಪಾಸ್ತ್ರದ ಬಾಧೆಯಿಂದ ಸುಗ್ರೀವಾದಿ ಸರ್ವ ಕಪಿವೀರರೂ ಮೂರ್ಛಿತರಾಗಿ ಬೀಳಲು, ಸೂರ್ಯ ಕುಲ ಸುಧಾಂಬುಧಿಗೆ ಚಂದ್ರನಾದ ಶ್ರೀ ರಾಮಚಂದ್ರ ದೇವರ ಮಹದಾಜ್ಞೆಯನ್ನು ಶಿರಸಾ ವಹಿಸಿ, ಕಣ್ಣೆವೆ ಮುಚ್ಚಿ ತೆಗೆಯುವಷ್ಟು ಕಾಲಾವಧಿಯಲ್ಲಿ ೫೦ ಸಾವಿರ ಗಾವುದಗಳಾಚೆಯಲ್ಲಿದ್ದ ಮೃತ ಸಂಜೀವಿನಿ ಔಷಧಗಳುಳ್ಳ, ೧೦೦ ಗಾವುದ ಉದ್ದಗಲವಾದ ಗಂಧಮಾದನವೆಂಬ ಮಹಾ ಪರ್ವತವನ್ನು ಲೀಲಾಮಾತ್ರದಿಂದ ಕಿತ್ತಿ ತಂದು, ಶ್ರೀ ರಾಮದೇವರ ಅಡಿದಾವರೆಗಳಿಗೆ ಸಮರ್ಪಿಸಿದ ಈ ಹನುಮಂತದೇವರ ಅತ್ಯಮೋಘವಾದ ಸಾಹಸ, ಸಾಮರ್ಥ್ಯಗಳಿಗೆ ಸಮರಾದವರು ಈ ದೇವ ಮಾನವರಲ್ಲಿ ಯಾರಾದರೂ ಇರುವರುಂಟೇ ? ಸುತರಾಂ ಇಲ್ಲ. ಇವರು ಲಕ್ಷ್ಮಣದೇವರೇ ಮೊದಲಾದ ಸರ್ವ ಕಪಿ ಸೇನೆಯ ಪ್ರಾಣದಾತರಾಗಿದ್ದಂತೆ, ಈ ಜಗತ್ತಿನ ವಿವಿಧ ಪ್ರಾಣಿ ಮಾತ್ರಕ್ಕೂ ಆಗಿರುವದರಿಂದ, ಇವರಿಗೆ '**ಪ್ರಾಣದೇವರು**' ಎಂಬ ಪ್ರಖ್ಯಾತ ನಾಮಧೇಯವು ವೇದಗಳಲ್ಲೂ ಪ್ರಸಿದ್ಧವಾಗಿರುವದು. ಇಂಥ ಪ್ರಾಣದೇವರ ಒಲುಮೆಯಿಂದಲೇ ಈ ಜಗತ್ತು ಚಲಿಸುವದೆಂಬುದು ಈ ಸಂಗತಿಗಳಿಂದ ಸ್ಫುಟವಾಗುವದು. ॥ ೧೦ ॥

**ಪದ :— ವಿಜಯ ರಘುಪತಿಯೊಲಿಸಿ ಧರಣಿ ಸುತೆಯುಳನೀತ ।**
**ಭಜಿಸಿ ಮೌಕ್ತಿಕದ ಹಾರವನು ಪಡೆದ ॥**
**ಅಜ ಪದವಿಯನು ರಾಮ ಕೊಡಬರಲು ಹನುಮಂತ ।**
**ನಿಜ ಭಕುತಿಯನೆ ಬೇಡ್ಯಾವರವ ಪಡೆದ ॥ ೧೧ ॥**

೬೭. ತಾ. :— ರಾವಣ, ಕುಂಭಕರ್ಣ, ಇಂದ್ರಜಿತ್ತಾದಿ ಬಹು ಭಯಂಕರರಾದ ರಕ್ಕಸರ ಸಂಹಾರ ಕಾರ್ಯದಲ್ಲಿ ಅಖಂಡ ಸಹಾಯಕರಾಗಿದ್ದ ಹನುಮಂತದೇವರ ಪೂರ್ಣ ನಿಸ್ವಾರ್ಥದ ಸೇವೆಗೆ ಮನಸೋತು, ಅವರನ್ನು ತಮ್ಮ ಅನುಜರೆಂದು ಭಾವಿಸಿ, ಅನ್ಯರಿಗೆಂದೆಂದೂ ಲಭಿಸದಿರುವಂಥ ಮೋಕ್ಷ ಸುಖ ಸದೃಶವಾದ ತಮ್ಮ ಆಲಿಂಗನಾದಿಗಳಿಂದ ಶ್ರೀ ರಾಮಚಂದ್ರದೇವರು ಆಂಜನೇಯರನ್ನು ಆನಂದಬಡಿಸಿದರು; ಇದೇ ಮಾತನ್ನು ಕವಿ ಕೋವಿದರಾದ ತಿಪ್ಪಣಾಚಾರ್ಯರು ತಮ್ಮ ಹನುಮದ್ವಿಲಾಸವೆಂಬ ಶ್ರೇಷ್ಠಕಾವ್ಯದಲ್ಲಿ ಪದ್ಯ ರೂಪದಿಂದ ನಿರೂಪಿಸಿದ್ದು ಹೇಗೆಂದರೆ :—

ಸೀಸಪದ್ಯ :—

" ಹನುಮಂತ ಕೇಳು ಸೂರ್ಯಾನ್ವಯಾಗ್ರಣಿಯಾದ । ದಶರಥಕ್ಷ್ಮಾಪಾಲ ಚಂದ್ರಮಂಗೆ । ನಾವು ನಾಲ್ವರು ಮಕ್ಕಳೆಂದೀ ವಸುಂಧರಾ । ತಳದಿ ಭಾವಿಸುತಿರ್ದೆವೀಸು ದಿನವು ॥ ನೀನೈದನೇ ಪುತ್ರನೆಂದಿಂದಿನಾರಭ್ಯ । ನಮ್ಮಂತರಂಗದೊಳ್ ತಿಳಿದೆವೀಗ । ದೇಹವೊಂದಕೆ ಪ್ರಾಣಗಳ ಪಂಚಕದ ಓಲ್ । ತೋರ್ಪಂತೆ ಪೂರ್ಣಮಾಯ್ತು ರು ಚರಿತ್ರಾ ॥ ಭೃತ್ಯ ನೀನಲ್ಲ ನಮ್ಮೊಡ ಹುಟ್ಟಿದವನು । ಇತ್ತ ಬಾ ರನ್ನ ಮೇಲ್ ಚಿನ್ನಬಣ್ಣ । ಭಾಗವತಗೇಯ ಶುಭನಾಮಧೇಯ ವಜ್ರ । ಕಾಯ ಶ್ರೀಯಾಂಜನೆಯಸತ್ರಾಣರಾಯಾ ॥ "

ಎಂದು ಶ್ಲಾಘಿಸಿ ಆಂಜನೇಯರನ್ನು ಶ್ರೀ ರಾಮಚಂದ್ರದೇವರು ತಕ್ಕೈಸಿದರೆಂಬುದನ್ನು ಅತಿ ಸ್ವಾರಸ್ಯವಾಗಿ ರಚಿಸಿರುವರು. ಈ ಆಲಿಂಗನದಿಂದ ಶ್ರೀ ರಾಮದೇವರು ಹನುಮಂತದೇವರಿಗೆ ತಮ್ಮ ಸರ್ವಾಂಗಸಾಯುಜ್ಯ ಭೋಗವನ್ನೇ ದಯಪಾಲಿಸಿದರು. ಹೀಗೆ ಶ್ರೀ ರಾಮಚಂದ್ರದೇವರನ್ನು ಪೂರ್ಣ ಒಲಿಸಿಗೊಂಡು, ಹನುಮಂತದೇವರು ಶ್ರೀ ಸೀತಾದೇವಿಯರಲ್ಲಿಗೆ ಹೋಗಿ ಪ್ರದಕ್ಷಿಣೆ, ನಮಸ್ಕಾರಗಳನ್ನು ಮಾಡಿ ಕೈಮುಗಿದು ಸಮ್ಮುಖದಲ್ಲಿ ಮೌನದಿಂದ ನಿಲ್ಲಲು, ಸರ್ವಜ್ಞ ನಿಧಿಯಾದ ಶ್ರೀ ಸೀತಾದೇವಿಯರು ಹನುಮಂತದೇವರಿಗೆ ಬ್ರಹ್ಮ ಪಟ್ಟವನ್ನು ಕಟ್ಟಿ ತತ್ಸೂಚಕವಾಗಿ ಪೂಮಾಲೆಯನ್ನು ಹಾಕುವಂತೆ, ತಮ್ಮ ಕೊರಳೊಳಗಿದ್ದ ಅಮೋಲ್ಯವಾದ ಮುತ್ತಿನ

ಹಾರವನ್ನು ಆ ಹನುಮಂತದೇವರ ಕೊರಳಲ್ಲಿ ಹಾಕಿ, ಜನನಿಯು ಪುತ್ರನ್ನಲಂಕರಿಸಿ ನೋಡಿ ಹರ್ಷಪಡುವಂತೆ ಬಹು ಸಂತುಷ್ಟರಾದರು. ಈ ವ್ಯಾಜದಿಂದ ಮೋಕ್ಷಗತ ಆನಂದಾಭಿಮಾನಿಯಾದ ಶ್ರೀ ಜಾನಕಿದೇವಿಯರು ಹನುಮಂತದೇವರಿಗೆ ಚಿರಂಜೀವತ್ವವನ್ನು ಪಾಲಿಸಿ ಐಹಿಕದಲ್ಲೇ ಮೋಕ್ಷ ಸಮಾನವಾದ ಆನಂದವನ್ನನುಗ್ರಹಿಸಿದರು. ಒಳ್ಳೇದು. ತಮ್ಮ ವಿವಾಹ ಮಹೋತ್ಸವದಲ್ಲಿ ಜನಕಮಹರಾಜರು ತಮಗೆ ಬಹು ಪ್ರೇಮದಿಂದ ಕೊಟ್ಟಿದ್ದ ಮುತ್ತಿನ ಮಾಲೆಯನ್ನು ಶ್ರೀ ಸೀತಾದೇವಿಯರು ಹನುಮಂತದೇವರಿಗೆ ಕೊಟ್ಟ ಅಭಿಪ್ರಾಯವೇನೆಂದರೆ:— ಸೀತಾದೇವಿಯರು ತಮ್ಮ ಪ್ರಾಣವನ್ನು ಆ ರಾವಣಾದಿ ದುಷ್ಟ ದೈತ್ಯರಿಂದ ಉಳುಹಿ ರಕ್ಷಿಸಿದುದಕ್ಕಾಗಿ ಹನುಮಂತದೇವರನ್ನು ತಮ್ಮ ತಂದೆಯ ಜನಕರಾಯನೆಂದೇ ಮನದಲ್ಲಿ ಭಾವಿಸಿ, ಜೋಕೆ ಮಾಡಿದ ಜನಕನು ಇತ್ತ ಮುತ್ತಿನ ಹಾರವನ್ನು ಸಂಕಟದಿಂದ ಪಾರುಗಾಣಿಸಿದ ಜನಕನಿಗೆ, ಆತನು ಮಾಡಿದ ಮಹದುಪಕಾರಕ್ಕೆಪ್ರತಿಫಲವಾಗಿ ಕೊಟ್ಟು ಸಂತೋಷಬಟ್ಟರು. ಈ ಅಭಿಪ್ರಾಯದಿಂದ ವರ ಕವಿಗಳಾದ ತಿಪ್ಪಣಾಚಾರ್ಯರು—

ಪದ. ರಾಗ—ಆರಭಿ. ತಾಳ—ಆದಿ.

ಅನಾಥರಕ್ಷಕ ಆಪದ್ಬಾಂಧವ |
ನೀನಹುದಹುದೈ ಮಾರುತೀ || ಪ ||
ಮನೋತ್ಸಹವ ಮಾಡಿಸಿದೆ ಮಹಾತ್ಮನೆ |
ಮನದಲಿ ನಿನ್ನನು ಮರೆವೆನೆ ಬಹುತರ |
ಜನುಮಗಳಲಿ ಪಾವನ ಗುಣಶೀಲನೆ || ಅ. ಪ ||
ಕಂಗಳಲಿ ರಘುಪುಂಗವನ ಚರ |
ಣಂಗಳ ಕಾಣದೆ ಚಿಂತಿಸಿ ಈ ಜೀ |
ವಂಗಳ ಬಿಡಬೇಕೆಂದಿರುತಿರಲು ತುಂಗ ವಿಕ್ರಮನೆ ||
ಮಂಗಳ ರೂಪದಿ ಕಂಗೊಳಿಸುವನೆಂ |
ದಂಗ ಕುರುಹವನು ಹಿಂಗದೆ ತಿಳುಹಿ ಕೃ |
ಪಾಂಗನ ಖಾದ್ರಿ ನೃಸಿಂಗನ ಕೈ ಬೆರ |
ಳುಂಗುರವಿತ್ತೆ ಶುಭಾಂಗನೆ ದಯದಿಂ || ೧ ||

ಹೀಗೆ ಶ್ರೀ ಸೀತಾದೇವಿಯರು ಅಂದಿರುವಂತೆ ಭಾವದೋರಿ ಕರುಣಾರಸ ಪೂರ್ಣವಾದ ಈ ಪದ್ಯವನ್ನು ರಚಿಸಿರುವರು

ಹನುಮಂತದೇವರು ಜಿತಕಾಮರು, ಸರ್ವಜ್ಞರು, ಅಶೇಷ ಸಂಪದ್ವಿಶಿಷ್ಟರು, ಸದ್ಗುಣ ಭರಿತರು, ಪೂರ್ಣತೃಪ್ತರು, ನಿಶ್ಚಲಭಕ್ತರು, ದೃಢ ವೈರಾಗ್ಯ ಶಾಲಿಗಳು, ಚಿರಂಜೀವಿಗಳು. ಆದುದರಿಂದ ಶ್ರೀ ರಾಮಚಂದ್ರದೇವರು ತಮ್ಮ ಕಾರ್ಯ ಸಮಾಪ್ತಿಯ ಕಾಲದಲ್ಲಿ ನಿನಗೇನು ಬೇಕು ? ಎಂದು ಹನುಮಂತ ದೇವರಿಗೆ ಕೇಳಲು, ಅವರು ಯಾವದನ್ನೂ ಅಪೇಕ್ಷಿಸದೆ ಜಗಜ್ಜನ್ಮಾದಿ ಸಮಸ್ತ ಕರ್ತೃತ್ವ ಶಕ್ತರಾದ ಶ್ರೀ ರಮಾನಾರಾಯಣಾವತಾರದ ಸೀತಾರಾಮ ಚಂದ್ರದೇವರ ಅಡಿದಾವರೆಗಳಲ್ಲಿ ಅಚಲವಾದ ನಿರ್ಲಜ್ಯ ಮತ್ತು ನಿರ್ವ್ಯಾಜಭಕ್ತಿ, ವಿಜ್ಞಾನಪೂರ್ವಕ ಧ್ಯಾನ, ಇದಿಷ್ಟೇ ಸ್ಥಿರವಾಗಿರುವಂತೆ ಅನುಗ್ರಹಿಸುವದೆಂದು ಕರಜೋಡಿಸಿ ಪ್ರಾರ್ಥಿಸಿದರು ಶ್ರೀ ರಾಮಚಂದ್ರದೇವರು ಹನುಮಂತದೇವರ ಮಹಾ ವೈರಾಗ್ಯವೃತ್ತಿಗೆ ತಲೆದೂಗಿ, ಜೀವಕೋಟಿಗಿರದ ಹೆಚ್ಚಿನ ಆನಂದ ವನ್ನೂ ನೆನೆಸಿದಾಗ್ಗ ತಮ್ಮ ಶ್ರೀ ರಾಮರೂಪ ದರ್ಶನದ ಲಾಭವನ್ನೂ ಪಾಲಿಸುತ್ತ, ಅವರ ಶಿರದ ಮೇಲೆ ಕರುಣಾಪೂರ್ಣರಾಗಿ ಉಭಯ ಹಸ್ತಗಳಿಟ್ಟು "ಮಗುವೇ ಚಿರಂಜಿವಿಯಾಗಿರು" ಎಂದು ಹರಸಿ ಮುದ್ದಾಡಿದರು.

ಜೀವಕೋಟಿಗೆಲ್ಲ ಜೇಷ್ಠರಾಗಿ ಮೇಲ್ಪಙ್ಕ್ತಿಯನ್ನು ಹಾಕಿ ಕೊಡತಕ್ಕ ಹನುಮಂತದೇವರು, ಶ್ರೀ ರಾಮಚಂದ್ರದೇವರು ತಾವಾಗಿಯೇ ಒಲಿದು ಬಂದಾಗ್ಗೆ ಅವರನ್ನು ಪ್ರಾರ್ಥಿಸಿ ಬೇಕಾದ ವರಗಳನ್ನೂ ಪಾರಿತೋಷಿಕಗಳನ್ನೂ ಪಡೆಯಬಹುದಾಗಿತ್ತು. ಅದನ್ನೆಲ್ಲ ಬಿಟ್ಟು, ಮಹಾ ವೈರಾಗ್ಯವನ್ನು ಧರಿಸಿದಂತೆ ಅರಸಿಕ ಕಣ್ಮುಚ್ಚಿಕೊಂಡು ಶ್ರೀ ರಾಮಧ್ಯಾನ ಮಾಡುವದೊಂದನ್ನೇ ಕೇಳಿಕೊಂಡು, ಸುಸೇವಾವೃತ್ತಿಯಿಂದಿರತಕ್ಕ ಮುಂದಿನ ಭಕ್ತರು ಏನೂ ಬೇಡದಂತೆ ವ್ಯವಸ್ಥೆಗೈದು ಬಿಟ್ಟರೆಂದು ಇವರನ್ನ ಶ್ರೀ ಪುರಂದರದಾಸರಾಯರು ಅಪಹಾಸ ವ್ಯಾಜದಿಂದ ಪಾಡಿದ್ದಾರೆ. **ಪದ :— " ಸೇವಕತನದ ರುಚಿ ಏನಳಿದ್ಯೋ । ದೇವ ಹನುಮರಾಯಾ ವೈರಾಗ್ಯವನು ಮಾಡಿ ॥ಪ॥ ಸಾರ್ವಭೌಮನು ಸೇವೆಗೆ ಮೆಚ್ಚಿ ಕರೆದಾಗ್ಗೆ । ಊರ್ವಿಯ ಬೇಡಲು ಕೊಡದಿದ್ದನೇ । ರಾಮಾ ॥ ಸರ್ವಾತ್ಯಜಿಸಿ ಶಿರಿಪುರಂದರ ವಿಠ್ಠಲಗೆ । ನಿರ್ವ್ಯಾಜ ಭಕುತಿಯೊಂದೇ ಬೇಡಿಕೊಂಡ್ಯಲ್ಲದೆ ॥ ೧ ॥ "**

ಹೀಗೆ ವಾಯುದೇವರು ತಮ್ಮ ಪ್ರಥಮಾವತಾರವನ್ನು ಶ್ರೀರಾಮಚಂದ್ರ ದೇವರ ಸೇವೆಯಲ್ಲಿ ಪೂರ್ಣ ಸಾರ್ಥಕಗೊಳಿಸಿ, ಚಿರಂಜೀವಿಗಳಾದುದರಿಂದ ತಮ್ಮ ಅಭಿಮಾನದ ಕಿಂಪುರುಷ (ವಾನರ)ವೆಂಬಭಿಧಾನದ ಖಂಡದಲ್ಲಿ ಅದ್ಯಾಪಿ ತಮ್ಮ ಬಿಂಬಮೂರುತಿಯಾದ ಶ್ರೀ ಸೀತಾರಾಮಚಂದ್ರದೇವರನ್ನು ಮನಸಿನಲ್ಲಿ ಧೇನಿಸುತ್ತ, ಕೈ ಹೆಬ್ಬಟ್ಟಿನ ಪ್ರಮಾಣದಷ್ಟು ಶರೀರದವರಾಗಿ ವಾಸಿಸಿಹರು. ಶ್ರೀಹರಿಯಂತೆ ಈ ಬ್ರಹ್ಮಾಂಡದಲ್ಲಿ ವಾಯುದೇವರು ಅನಂತ ರೂಪಗಳನ್ನು ಧಾರಣಗೈದು ಜಗತ್ತಿನ ಅನಂತ ವಿಧದ ವ್ಯಾಪಾರಗಳನ್ನು ಕ್ಷಣಶಃ ಮಾಡುತ್ತ ಸಕಲ ದೇವತೆಗಳಿಂದಲೂ ಆರಾಧ್ಯರಾಗಿರುವರು. ಈ ಭೂಲೋಕದಲ್ಲಿ ಸಾಧನ ಸಂಪತ್ತಿಗೆ ಶ್ರೇಷ್ಠ ಸ್ಥಾನವಾಗಿರುವ ಈ ಭರತಖಂಡದಲ್ಲಿ ಪ್ರತಿ ಗ್ರಾಮ ಗ್ರಾಮಕ್ಕೊಂದು ಹನುಮಂತದೇವರ ದೇವಾಲಯವು ಇದ್ದೇ ಇರುತ್ತ, ಅಲ್ಲಿ ಸರ್ವ ಹಿಂದೂ ಜ್ಯಾತಿಯವರೂ ಆ ದೇವರ ಭಕ್ತರಾಗಿ ಆರಾಧಿಸುವದುಂಟು. ಹೀಗೆ ಈ ಭೂಮಂಡಲದ ಮೇಲೆ ಪ್ರಾಣದೇವರಷ್ಟು ಸಾರ್ವತ್ರಿಕಜನರಿಂದ ಪೂಜ್ಯರಾದ ದೇವರು ಇನ್ನೊಬ್ಬರಿಲ್ಲೆಂದರೆ ಅತಿಶಯೋಕ್ತಿಯಾಗದು. ಈ ದೇವಶ್ರೇಷ್ಠರು ಸಕಲ ವಿಘ್ನನಿವಾರಕರು, ಭವವಿನಾಶಕರು, ದುಷ್ಟಗ್ರಹ-ಭೂತ, ಪ್ರೇತಾದಿಗಳ ಭಯಪರಿಹಾರಕರು, ಸ್ವಭಕ್ತಜನ ರಕ್ಷಕರು, ಬುದ್ಧಿ, ವಿದ್ಯಾ, ಬಲ, ಆಯುರಾರೋಗ್ಯಪ್ರದರು, ಮೋಕ್ಷಾದಿ ರೂಪದ ಮಹಾಪುರುಷಾರ್ಥಗಳನ್ನೂ ಕೊಡತಕ್ಕವರು. ಆದುದರಿಂದ, ಜೀವರನ್ನು ಕಾಡುವ ಗ್ರಹರಲ್ಲಿ ಬಹು ಹೆಚ್ಚಿನವರು ಶನಿಮಹಾರಾಯರೇ ಆಗಿದ್ದು, ಅವರ ಕಾಟದ ಪರಿಹಾರಾರ್ಥವಾಗಿ ಪ್ರತಿ ಶನಿವಾರದಲ್ಲೂ ಪ್ರಾಣದೇವರ ಆರಾಧನೆಯನ್ನು ಧೂಪ ದೀಪ ನೈವೇದ್ಯಾದಿಗಳಿಂದ ವಿಶೇಷವಾಗಿ ಮಾಡುತ್ತಿರುವದು ಹಿಂದೂಸಮಾಜದಲ್ಲಿ ಕಂಡುಬರುವದು.

ವಾಯುದೇವರ ಮೂಲ ಹಾಗೂ ಅವತಾರ ತ್ರಯಗಳ ಮಹಾಮಹಿಮೆಗಳನ್ನು ಸಾದ್ಯಂತವಾಗಿ "**ಶ್ರೀಮದ್ವಾಯುಸ್ತುತಿ**" ಹಾಗೂ "**ಶ್ರೀ ಸುಮಧ್ವವಿಜಯ**" ವೆಂಬ ಮಹಾ ಕಾವ್ಯಗಳಲ್ಲಿ "**ಪಂಡಿತಾಚಾರ್ಯ ವರ್ಯರ್ಧ್ಯ**" ರಿಂದ ಬಹು ಸರಸಾಗಿ ವರ್ಣಿಸಲ್ಪಟ್ಟಿದ್ದು, ಅವನ್ನು ಸಕಲ ಮಾಧ್ವರೂ ನಿತ್ಯ ಪಠಿಸುತ್ತಿರುವದು ಬಹು ಪ್ರಸಿದ್ಧವಾದ ವಿಷಯವು. ಪ್ರತಿ ನಿತ್ಯ ತ್ರಿಕಾಲಗಳಲ್ಲೂ ಶ್ರೀ ಹನುಮಂತದೇವರ ಧ್ಯಾನ, ಆರಾಧನಗಳಿಂದ

ಪ್ರಾಪ್ತವಾಗತಕ್ಕದ್ದೇನೆಂದರೆ—ಪಾರತ್ರಿಕದಲ್ಲಿ ಪರಮ ಪುರುಷಾರ್ಥರೂಪದ ಮೋಕ್ಷವು. ಐಹಿಕದಲ್ಲಿ ಶ್ರೀ ಹರಿ ಗುರುಗಳಲ್ಲಿ ಸುಜ್ಞಾನ, ಸದ್ಭಕ್ತಿ, ದೃಢ ವೈರಾಗ್ಯಾದಿ ಸೌಭಾಗ್ಯಗಳ ಫಲಪ್ರಾಪ್ತಿಯು. ಮತ್ತು "**ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಂ, ಅರೋಗತಾ ॥ ಅಜಾಡ್ಯಂ ವಾಕ್ಪಟುತ್ವಂಚ ಹನುಮತ್ಸ್ಮರಣಾದ್ಭವೇತ್ ॥**" ಎಂಬಂತೆ ಈ ಗುಣಗಳೂ ಕೈಗೂಡುವವು. ಅಂತೆಯೇ, ಮುಮುಕ್ಷುಗಳು ಇಂಥ ಹನುಮಂತದೇವರನ್ನು ಪ್ರತಿನಿತ್ಯ ಮೋಕ್ಷಪ್ರಾಪ್ತಿಯ ಹೇತುವಿನಿಂದ ಧ್ಯಾನಗೈಯತಕ್ಕದ್ದೆಂಬ ಉದ್ದೇಶದಿಂದ ಆ ಧ್ಯಾನಶ್ಲೋಕವು ಇಲ್ಲಿ ನಿರೂಪಿಸಿದೆ. ಅದನ್ನು ಸದ್ಗುರುಗಳ ದ್ವಾರ ಉಪದೇಶಗೊಂಡು ಧ್ಯಾನಗೈಯತಕ್ಕದ್ದು, ಅದರಿಂದ ಫಲಪೂರಣವು.

**ಧ್ಯಾನಶ್ಲೋಕ :—**

**ಮನೋಜವಂ ಮಾರುತಿತುಲ್ಯ ವೇಗಂ ।**
**ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ ॥**
**ವಾತಾತ್ಮಜಂ ವಾನರಯೂಥ ಮುಖ್ಯಂ ।**
**ಶ್ರೀ ರಾಮದೂತಂ ಶಿರಸಾ ನಮಾಮಿ ॥ ೧ ॥**

**ಶ್ರೀ ಗುರು ಮಧ್ವೇಶಾರ್ಪಣಮಸ್ತು.**

# ವಾಯುದೇವರ ದ್ವಿತೀಯಾವತಾರರಾದ ಶ್ರೀ ಭೀಮಸೇನದೇವರ ವರ್ಣನ

**ಪದ :—** **ಆ ಮಾರುತನೆ ಭೀಮನೆನಿಸಿ ದ್ವಾಪರಯುಗದಿ ।**
**ಸೋಮ ಕುಲದಲಿ ಜನಿಸಿ ಪಾರ್ಥರೊಡನೆ ॥**
**ಭೀಮ ವಿಕ್ರಮ ರಕ್ಕಸರನು ಮುರಿದಿಕ್ಕಿದ ।**
**ಆ ಮಹಿಮ ನಮ್ಮ ಕುಲ ಗುರುರಾಯನು ॥ ೧೨ ॥**

**ಟೀ. ತಾ. :—** ಶ್ರೀ ಹರಿಯ ಪ್ರಥಮಾಂಗರಾದ ವಾಯುದೇವರು ಶ್ರೀ ರಾಮಚಂದ್ರದೇವರ ಸೇವಾರ್ಥವಾಗಿ ತ್ರೇತಾಯುಗದಲ್ಲಿ ಹನುಮಾವತಾರ

ವನ್ನು ಮಾಡಿದಂತೆ, ದ್ವಾಪರಯುಗದಲ್ಲಿ ಭೂಭಾರಹರಣಾರ್ಥವಾಗಿ ಅವತರಿಸಿದ ಶ್ರೀ ಕೃಷ್ಣದೇವರ ಪಾದಸೇವೆಗೋಸುಗ ಭೀಮಸೇನಾಖ್ಯರಾಗಿ ಚಂದ್ರ ವಂಶದಲ್ಲಿ (ಪೃಥಾ) ಕುಂತಿದೇವಿಯರ ಮಹಾ ಪವಿತ್ರವಾದ ಗರ್ಭ ಸುಧಾಂಬುಧಿಯಲ್ಲಿ ಧರ್ಮಾರ್ಜುನರ ಮಧ್ಯದ ಸುತರೆನಿಸಿ, ಮಾಘ ಶುದ್ಧ ದ್ವಾದಶಿ ದಿನದ ಶುಭ ಮುಹೂರ್ತದಲ್ಲಿ ಅವತರಿಸಿದರು. ಮುಂದೆ ಮಹಾ ಪರಾಕ್ರಮಿಗಳಾಗಿ ಅತಿ ಬಲಿಷ್ಠರಾದ ಅನೇಕ ಸಂಖ್ಯಾಕ ದುಷ್ಟ ದೈತ್ಯ, ದಾನವರನ್ನು ಲೀಲಾಮಾತ್ರದಿಂದ ಸವರಿಬಿಟ್ಟರು. ಇಂಥ ಅಸಾಧಾರಣ ಬಲಯುತರಾದ ಭೀಮಸೇನದೇವರು ನಮ್ಮ ಅರ್ಥಾತ್ ಶ್ರೀಮನ್ಮಧ್ವಮತಾನುಯಾಯಿಗಳ ಪರಮಗುರುಗಳು. ॥ ೧೨ ॥

**ಪದ :— ಕರದಿಂದ ಶಿಶುಭಾವನಾದ ಭೀಮನ ಬಿಡಲು ।**
**ಗಿರಿಯೊಡೆದು ಶತಶೃಂಗವೆಂದೆನಿಸಿತು ॥**
**ಹರಿಗಳನು ಹರಿಗಳಿಂ ಕರಿಗಳನು ಕರಿಗಳಿಂ ।**
**ಅರೆದ ವೀರನಿಗೆ ಸುರ ನರರು ಸರಿಯೇ? ॥ ೧೩ ॥**

**ಟೀ. ತಾ. :—** ಈ ಭೀಮಸೇನದೇವರು ಹುಟ್ಟಿದ ಸ್ವಲ್ಪ ದಿವಸಗಳ ನಂತರ, ಒಂದು ದಿನ ಕುಂತಿದೇವಿಯು ತನ್ನ ಮಗುವನ್ನೆತ್ತಿಕೊಂಡು ಒಂದು ಪರ್ವತದ ಮೇಲೆ ಮನೋರಂಜನಾರ್ಥವಾಗಿ ತಿರಗಾಡುತ್ತಿರಲು, ಸಮೀಪದ ಅರಣ್ಯದಲ್ಲಿ ಒಂದು ಸಿಂಹವು ಗರ್ಜನೆಯನ್ನು ಮಾಡಿತು. ಅಬಲೆಯಾದ ಆ ರಾಜಪತ್ನಿಯು ಸ್ವಭಾವತಃ ಭೀರು ಆದ್ದರಿಂದ, ಆ ಮಹಾತಾಯಿಯು ಅಂಗಾಂಗಗಳೆಲ್ಲ ನಡುಗಿ ಎತ್ತಿಕೊಂಡಿದ್ದ ಕೂಸನ್ನು ಕೆಳಗೆ ಬಿಡಲು, ಕೆಳಗಿದ್ದ ಒಂದು ಮಹಾ ಪರ್ವತದ ಮೇಲೆ ಆ ಶಿಶುವು ಅಪ್ಪಳಿಸಿದ್ದರಿಂದ ಆ ಪರ್ವತವು ಸಹಸ್ರ ಹೋಳಾಗಿ ಶೀಳಿತು. ಆಗ್ಗೆ ಅದಕ್ಕೆ ಶತಶೃಂಗವೆಂಬ ಹೆಸರು ಬಂತು. ಆದರೆ, ವಾಯುದೇವರ ಮಹಾ ವೀರ್ಯದಿಂದುತ್ಪನ್ನವಾದ ಆ ಶಿಶುವು ಅತಿ ಕಠಿಣವಾದ ವಜ್ರ ಶರೀರಿಯಾದುದರಿಂದ ಅದಕ್ಕೆ ಎಷ್ಟೆಷ್ಟೂ ಬಾಧೆಯಾಗಲಿಲ್ಲ. ಅತಿರಥಿಕ, ಮಹರಥಿಕರೆಂಬ ಸಮಸ್ತ ವೀರಾಗ್ರೇಸರರನ್ನು ಬಾಹು ಬಲವಲ್ಲಿ ಮೀರಿದ ಈ ಭೀಮಸೇನದೇವರು ರಣದಲ್ಲಿ ಹೋರಾಡುವಾಗ್ಗೆ ವೈರಿಗಳ ಕುದುರೆಗಳಿಂದಲೇ ಅವರ ಕುದುರೆಗಳನ್ನೂ, ವೈರಿಗಳ ಆನೆಗಳಿಂದಲೇ ಅವರ

ಆನೆಗಳನ್ನೂ ಹೊಡೆದು ಕೊಲ್ಲುತ್ತ, ಅವರ ಸೈನ್ಯ ಸಮೂಹವನ್ನೂ ವಿನಾಶ ಗೊಳಿಸಿದರು. ಇಂಥ ವೀರಾಗ್ರೇಸರರನ್ನು ದೇವ, ಮಾನವ, ದಾನವರಲ್ಲಿ ಪ್ರತಿ ಭಟಿಸುವವರು ಯಾರಾದರೂ ಉಂಟೆ? ಸರ್ವಥಾತ್ಮನಾ ಇಲ್ಲ. ॥ ೧೩ ॥

**ಪದ :— ಕುರುಪ ಗರಳವನಿಕ್ಕೆ ನೆರೆಯುಂಡು ತೇಗುತಲಿ ।**
**ಉರುಗಗಳ ಮೇಲ್ಬಿಡಲು ಅವನೊರಸಿದ ॥**
**ಅರಗಿನರಮನೆಯಲ್ಲಿ ಉರಿಯನಿಕ್ಕಿ ತಾ ಧೀರ ।**
**ಧರಿಸಿ ಜಾಹ್ನವಿಗೊಯ್ದ ತನ್ನನುಜರ ॥ ೧೪ ॥**

**ಟೀ. ತಾ. :—** ಮೂಲ ಕಲಿಯಾದ ದುರ್ಯೋಧನನು ಭೀಮಸೇನ ದೇವರನ್ನು ಕೊಲ್ಲಬೇಕೆಂದು ಯೋಜಿಸಿಟ್ಟ ಅತ್ಯುಲ್ಬಣವಾದ ವಿಷಮಿಶ್ರಿತ ಅನ್ನ ವನ್ನು ಅಮೃತ ಸಹೋದರಿಯ (ಶ್ರೀ ಮಹಾಲಕ್ಷ್ಮಿದೇವಿಯ) ಕುವರರಾದ ಈ ಭೀಮಸೇನದೇವರು ಯಥೇಚ್ಛವಾಗುಂಡು ಅರಗಿಸಿಗೊಂಡು ತೇಗಿ ಆನಂದ ಬಟ್ಟರು. ಇದೊಂದು ಆಶ್ಚರ್ಯವಲ್ಲ. ಏಕೆಂದರೆ–ಸಮುದ್ರ ಮಥನ ಕಾಲದಲ್ಲಿ ಪ್ರಪಂಚದೊಳಗಿರತಕ್ಕ ಸಮಸ್ತ ವಿಷಗಳ ಸಾರಭೂತವಾಗಿ ಉತ್ಪನ್ನವಾದ, ಜಗತ್ತನ್ನೇ ದಹಿಸಬಲ್ಲ ಕಾಳಕೂಟಾಖ್ಯ ವಿಷವನ್ನು ಅಂಗೈಗಳಿಂದ ಮರ್ದಿಸಿ ಕರಗಿಸಿದಂಥ ವಿಚಿತ್ರ ಮಹಿಮೆಯ ವಾಯುಸುತ ಭೀಮಸೇನದೇವರು ವಿಷ ಮಿಶ್ರಿದನ್ನವನ್ನುಂಡು ಅರಗಿಸಿಕೊಂಡದ್ದೊಂದು ಅತಿಶಯವಲ್ಲ. ಕೌರವರು ಕೆರ ಳಿದ ಘಟಸರ್ಪಗಳನ್ನು ಭೀಮಸೇನದೇವರ ಮೈಮೇಲೆ ಒಗೆದು, ಅವುಗಳಿಂದ ಕಚ್ಚಿಸಿ ಕೊಲ್ಲಬೇಕೆಂದು ಹವಣಿಸಿ ಹಾಗೆ ಮಾಡಲು, ಆ ಕ್ರೂರ ಸರ್ಪಗಳನ್ನು ಹಿಡಿದು ಧೈರ್ಯದಲ್ಲಿ ಮೇರು ಸದೃಶರಾದ ಇವರು ಭೂಮಿಯ ಮೇಲೆ ಅವುಗ ಳನ್ನಪ್ಪಳಿಸಿ ಕೊಂದುಬಿಟ್ಟರು. ಕುಂತಿದೇವಿ ಸಹ ಪಾಂಡವರೈವರನ್ನು ಅರಗಿನ ಅರಮನೆಯಲ್ಲಿ ರಾತ್ರಿಕಾಲ ಸುಟ್ಟು ಸಂಹರಿಸಬೇಕೆಂದು ಬಗೆದು, ದುರ್ಯೋಧ ನಾದಿಗಳು ಮಹಾ ಮಾಯಾವಿ ಅಸುರನಾದ ಖನಕನೆಂಬ ಶಿಲ್ಪಿಯಿಂದ ಸಕಲ ಜ್ವಾಲಾಗ್ರಾಹಿಯಾದ ಪದಾರ್ಥಗಳಿಂದ ಒಂದು ಅತಿ ಮನೋಹರವಾದ ಅರ ಮನೆಯನ್ನು ಕಟ್ಟಿಸಿ, ಅಲ್ಲಿಗೆ ಪಾಂಡವರನ್ನು ಕಳುಹಲು, ಆ ನೀಚರ ಈ ಕಪಟ ಕುಯುಕ್ತಿಗಳನ್ನು ಆದ್ಯಂತಬಲ್ಲ ಭೀಮಸೇನದೇವರು ಮಧ್ಯರಾತ್ರಿಯಲ್ಲಿ ತಾವೇ ಆ ಲಾಕ್ಷಗೃಹಕ್ಕೆ ಬೆಂಕಿಯನ್ನಚ್ಚಿ ಒಳಗಿದ್ದ ಕೌರವಪಕ್ಷದ ಷಟ್ಸಂಖ್ಯಾಕ

ಜನರನ್ನು ಸುಟ್ಟು ಭಸ್ಮಮಾಡಿ, ತಮ್ಮ ತಾಯಿ ಅಣ್ಣ ತಮ್ಮಂದಿರನ್ನು ಹೆಗಲು, ಕೊಂಕಳಗಳಲ್ಲಿ ತ್ತಿಕೊಂಡು ವಾಯುವೇಗದಿಂದ ಬೆಳಗಾಗುವಷ್ಟರಲ್ಲಿ ಭಾಗೀರಥಿಯ ತಟಾಕಿಗೆ ಬಂದು ತಲ್ಪಿದರು. ಇಂಥ ಅಗಾಧಶಕ್ತಿಯು ಅನ್ಯತ್ರದಲ್ಲಿ ಕಾಣಲು ಶಕ್ಯವೇ ಇಲ್ಲ. ॥ ೧೪ ॥

**ಪದ:— ಅಲ್ಲಿದ್ದ ಬಕ ಹಿಡಂಬಕರೆಂಬ ರಕ್ಕಸರ ।**
**ನಿಲ್ಲದೊರೆಸಿದ ಲೋಕ ಕಂಟಕರನು ॥**
**ಬಲ್ಲಿದಸುರರ ಗೆಲಿದು ದ್ರೌಪದಿಯ ಕರವಿಡಿದು ।**
**ಎಲ್ಲ ಸುಜನರಿಗೆ ಹರುಷವ ಬೀರಿದ ॥ ೧೫ ॥**

**ಟೀ. ತಾ.** :— ಹಾಗೆಯೇ ಮುಂದೆ ಹೋಗುತ್ತಿರುವಾಗ್ಗೆ, ಒಂದು ಮಹಾರಣ್ಯದಲ್ಲಿ ಲೋಕಕಂಟಕನಾಗಿದ್ದ ಹಿಡಿಂಬಾಖ್ಯ ಮಹಾದೈತ್ಯನು ಇವರನ್ನೆಲ್ಲ ಭಕ್ಷಿಸಬರಲು, ಅವನನ್ನು ಮುಷ್ಟಿ ಪ್ರಹಾರದಿಂದ ಕೊಂದು, ಮುಂದೆ ಸಾಗಿ ಹಿಮಾಚಲದಡಿಯಲ್ಲಿರುವ ಏಕಚಕ್ರವೆಂಬ ನಗರದಲ್ಲಿ ವಾಸಿಸುತ್ತ, ಆ ಸಮೀಪದ ಗಿರಿಯ ಗುಹೆಯಲ್ಲಿ ವಾಸವಾಗಿದ್ದ ಬಕನೆಂಬ ಮಹಾಕ್ರೂರ ಹಾಗೂ ನರಭಕ್ಷಕನಾಗಿದ್ದ ದೈತ್ಯಾಧಮನನ್ನು ಕೆಣಕಿ ಚರಚರನೆ ಶೀಳಿ ಸಂಹರಿಸಿ, ಆ ಪಟ್ಟಣಿಗರು ಪ್ರತಿ ನಿತ್ಯದಲ್ಲೂ ಆ ಅಸುರನಿಗೆ ತಪ್ಪದೆ ಕೊಡುತ್ತಿದ್ದ ಬಂಡಿಯನ್ನ, ನರಬಲಿಗಳಿಂದ ತಪ್ಪಿಸಿ ಅವರನ್ನು ಆ ಸಂಕಟದಿಂದ ರಕ್ಷಿಸಿದರು. ಅಲ್ಲಿಂದ ಮುಂದೆ ಸಾಗುತ್ತ, ದ್ರುಪದರಾಜನ ಪಟ್ಟಣದಲ್ಲಿ ಸಾಕ್ಷಾದ್ಭಾರತೀ ದೇವಿಯ ಅವತಾರರಾದ ದ್ರೌಪದಿದೇವಿಯರ ಸ್ವಯಂವರ ಮಹೋತ್ಸವವು ನಡೆಯುವದೆಂಬ ಸುವಾರ್ತೆಯನ್ನು ಕೇಳಿ ಅಲ್ಲಿಗೆ ಹೋಗಿ, ತಮ್ಮನುಜರಾದ ಅರ್ಜುನ ದೇವರಲ್ಲಿ ತಾವು ಆವಿಷ್ಟರಾಗಿದ್ದುದರಿಂದ, ಅವರಿಂದ ಮತ್ಸ್ಯಭೇದವನ್ನು ಮಾಡಿಸಿ, ದ್ರೌಪದಿದೇವಿಯರನ್ನು ತಾವೈಯ್ವರೂ ಪಾಣಿಗ್ರಹಣ ಮಾಡಿದರು. ಆ ಕಾಲದಲ್ಲಿ ತಮಗೆ ಪ್ರತಿಕೂಲರಾಗಿ ಕಾದಾಡಬಂದ ಸಕಲ ಮಹ ಮಹಾ ವೀರರಾದ ಅಸುರರನ್ನು ಸದೆಬಡೆದೋಡಿಸಿ, ಆ ಸುಮಂಗಲ ಮಹೋತ್ಸವಕ್ಕೆ ಬೇಕೆಂದು ಆಗಮಿಸಿದ್ದ ಶ್ರೀಕೃಷ್ಣದೇವರಿಗೆ, ಬಲರಾಮಾದಿ ಯಾದವ ಸುಜೀವ ಸಮುದಾಯಕ್ಕೆ ಆನಂದವನ್ನುಂಟು ಮಾಡಿದರು. ॥೧೫॥

**ವಿಶೇಷಾಂಶ :—** ದ್ರೌಪದಿದೇವಿಯರಿಗೆ ಪಂಚ ಪಾಂಡವರು ಪತಿಗಳೆಂಬುದರ ರಹಸ್ಯವೇನೆಂದರೆ :— ಇವರು ಭಕ್ತ್ಯಾಭಿಮಾನಿ ಭಾರತಿದೇವಿಯರ ಅವತಾರರು. ಅವರ ನಿಜ ಪತಿಗಳು ವಾಯು ಅವತಾರದ ಭೀಮಸೇನದೇವರು. ಉಳಿದ ಧರ್ಮ, ಅರ್ಜುನ, ನಕುಲ, ಸಹದೇವರಲ್ಲಿ ವಾಯುದೇವರ ನಿತ್ಯ ಸನ್ನಿವೇಶವಿದ್ದುದರಿಂದೇ ಅವರು ದ್ರೌಪದಿದೇವಿಯರಿಗೆ ಪತಿಗಳೆನಿಸಿದರು. ಆದರೆ, ಅವರ ಪತಿತ್ವವು ತಾತ್ಕಾಲಿಕವಾದದ್ದೇ ಆಗಿದ್ದಿತು. ಮತ್ತು ದ್ರೌಪದಿದೇವಿಯರಲ್ಲಿ ಧರ್ಮ, ಅರ್ಜುನ, ನಕುಲ, ಸಹದೇವರ ನಿಜ ಸತಿಯರಾದ ಶಾಮಲಾ, ಶಚಿ, ಪಾರ್ವತಿ, ಉಷಾಖ್ಯ ಚತುರ್ದೇವ ಸ್ತ್ರೀಯರು ಸೋತ್ತಮರ ಶ್ಯಾಪದಿಂದ ಬಂದು ಸನ್ನಿಹಿತರಾಗಿದ್ದು, ಆಯಾ ಕಾಲಗಳಲ್ಲಿ ಅವರವರು ತಂತಮ್ಮ ಪತಿಗಳನ್ನೇ ಕೂಡುತ್ತಿದ್ದರೆಂದು ಶ್ರೀಮದಾಚಾರ್ಯರೇ ನಿರ್ಣಯಮಾಡಿ ಹೇಳಿರುವರು. ಈ ಮಾತನ್ನೇ ಭಗವಾನ್ ಶ್ರೀ ಮದ್ವೇದವ್ಯಾಸದೇವರು ಸಂಕಟಗ್ರಸ್ತನಾಗಿ ವಿಚಾರದಲ್ಲಿದ್ದ ದ್ರೌಪದಿದೇವಿಯರ ಜನಕನಾದ ದ್ರುಪದರಾಯನಿಗೆ ಅವರ ಲಗ್ನ ಸಮಾರಂಭದ ಕಾಲದಲ್ಲಿ ತಿಳಿಸಿ ಹೇಳಿದರು.

**ಪದ:— ರಾಜಕುಲ ವಜ್ರನೆನಿಸಿದ ಮಾಗಧನ ಸೀಳಿ ।**
**ರಾಜಸೂಯಾಗವನು ಮಾಡಿಸಿದನು ॥**
**ಆಜಿಯಲಿ ಕೌರವರ ಬಲವ ಸವರುವೆನೆಂದು ।**
**ಮೂಜಗವರಿಯೆ ಕಂಕಣ ಕಟ್ಟಿದ** ॥ ೧೬ ॥

**ಟೀ. ತಾ. :—** ಆ ಕಾಲದಲ್ಲಿದ್ದ ಸಕಲ ರಾಜರಲ್ಲಿ ಮಹಾ ಪ್ರಬಲನಾಗಿ, ಯಾವತ್ತೂ ಅರಸರನ್ನು ತನ್ನ ಕಾರಾಗೃಹದಲ್ಲಿ ಬಂಧಿಸಿಟ್ಟು ಗೋಳಾಡಿಸುತ್ತಿದ್ದ ನೀಚತಮನಾದ ಆ ಜರಾಸಂಧನೊಡನೆ ಬಿಟ್ಟು ಬಿಡದೆ ಅಹೋರಾತ್ರಿ ೧೪ ದಿವಸ ಗದಾ, ಮುಷ್ಟಿಗಳಿಂದ ಯುದ್ಧವನ್ನು ಮಾಡಿ, ಏಕೋಪ್ರಕಾರವಾಗಿ ಸಿಡಿಲಿನ ಸಪ್ಪಳವಾಗುವಂತೆ ಅವನ ದೇಹವನ್ನು ಸರಿಯಾಗಿ ಮಧ್ಯ ಸೀಳಿ ಬೀಸಾಡುತ್ತಿರಲು, ಆ ಭಾಗಗಳು ವರ ಬಲದಿಂದ ಪುನಃ ಕೂಡಿಕೊಂಡು ಯುದ್ಧಕ್ಕೆ ಸಾಗಿಬರಲು, ೧೪ನೇ ದಿನ ಶ್ರೀಕೃಷ್ಣಪರಮಾತ್ಮನ ಮಹದಾಜ್ಞೆಯಿಂದ ಆ ನೀಚನನ್ನು ಬಹು ಸಂಕಟಪಡಿಸಿ, ಆ ತುಂಡುಗಳು ಪುನಃ ಸೇರದಂತೆ ಸೀಳಿ ಬದಲುಮಾಡಿ ಬಿಸಾಡಿ ಬಿಟ್ಟು, ಅವನ ಕಾರಾಗೃಹದಲ್ಲಿ ಬಳಲಿ ಬೆಂಡಾ

ಗಿದ್ದ ಆ ಅರಸರನ್ನು ಬಂಧಮುಕ್ತಮಾಡಿ ಅಖಂಡ ಕೀರ್ತಿಯನ್ನು ಪಡೆದರು. ಆ ಬಳಿಕ, ತಮ್ಮ ಅಗ್ರಜರಾದ ಧರ್ಮರಾಜರಿಂದ ರಾಜಸೂಯಾಖ್ಯ ಮಹಾ ಯಾಗವನ್ನು ಯಥಾ ಸಾಂಗವಾಗಿ ಮಾಡಿಸಿ, ಅಲೌಕಿಕ ಪುಣ್ಯಾತಿಶಯವನ್ನು ಸಂಪಾದಿಸಿದರು. ಕೌರವರ ೧೧ ಅಕ್ಷೋಹಿಣಿ ಸಂಖ್ಯಾಕ ಸೈನ್ಯವನ್ನು ತಾವೊಬ್ಬರೇ ಸಂಹರಿಸುವೆವೆಂದು ಪ್ರಮಾಣಗೈದು ಸ್ವರ್ಗ, ಮೃತ್ಯು, ಪಾತಾಳ ಲೋಕಗಳು ಆಶ್ಚರ್ಯಪಡುವಂತೆ ಕಂಕಣಬದ್ಧರಾಗಿ ಆ ಪಣವನ್ನು ನಡೆಸಿ ಮೆರೆದ ಅಸಹಾಯ ಶೂರರೇ ಇವರು. || ೧೬ ||

**ಪದ :— ಮಾನನಿಧಿ ದ್ರೌಪದಿಯ ಮನದಿಂಗಿತವನರಿದು |**
**ದಾನವರ ಸವರಬೇಕೆಂದು ಬೇಗ ||**
**ಕಾನನವ ಪೊಕ್ಕು ಕಿರ್ಮೀರಾದಿಗಳ ತರಿದು |**
**ಮಾನಿನಿಗೆ ಸೌಗಂಧಿಕವನು ಇತ್ತ || ೧೭ ||**

**ಟೀ. ತಾ. :—** ಸಕಲ ಸದ್ಗುಣಗಳಿಂದ ಜಗತ್ತಿನ ಗೌರವಕ್ಕೆ ಆಗರ ರಾದ ದ್ರೌಪದಿದೇವಿಯರ ಮನೋಭಿಪ್ರಾಯವನ್ನು ತಿಳಿದು, ದೇವತೆಗಳಿಗೆ ಸ್ವರೂಪ ದ್ವೇಷಿಗಳಾಗಿ ಜನಿಸಿ ಭೂಭಾರರಾಗಿದ್ದ ಅಸುರ ವೃಂದವನ್ನು ಸಂಹರಿ ಸಲು, ವಾಯುವೇಗದಿಂದ ಭೀಮಸೇನದೇವರು ಗಂಧಮಾದನವೆಂಬ ಗಿರಿ ಯನ್ನೇರಿ ಹೋಗಿ ಅಲ್ಲಿ ವಾಸವಾಗಿದ್ದ ಕಿರ್ಮೀರಾದಿ ಅತಿ ದುರುಳ ದೈತ್ಯರನ್ನು ಮುರಿದು ಮುಟ್ಟಗೆ ಮಾಡಿ, ತಮ್ಮ ಸತಿಶಿರೋಮಣಿಯಾದ ದ್ರೌಪದಿದೇವಿ ಯರು ಬಯಸಿ ಬೇಡಿದ, ಸಹಸ್ರದಳಗಳುಳ್ಳ ಹಾಗೂ ಯಾವಾಗ್ಯೂ ಬಾಡದೆ ಸರ್ವದಾ ಶ್ರೇಷ್ಠ ಪರಿಮಳವನ್ನು ಬೀರುವ, ಸೌಗಂಧಿಕಾಖ್ಯ ನೀಲಕಮಲ ಪುಷ್ಪವನ್ನು ಬಹು ಪ್ರೇಮದಿಂದ ತಂದು ಆ ದೇವಿಯರ ಮುಡಿಯಲ್ಲಿ ಮುಡಿ ಸಿದರು. || ೧೭ ||

**ಪದ :— ದುರುಳ ಕೀಚಕನು ದ್ರೌಪದಿದೇವಿ ಚೆಲ್ವಿಕೆಗೆ |**
**ಮರುಳಾಗಿ ಕರಕರೆಯ ಮಾಡಲವನ ||**
**ಗರಡಿ ಮನೆಯೊಳು ಬರಸಿ ಒರಿಸಿ ಅವನನುಜರ |**
**ಕುರುಪನಟ್ಟಿದ ಮಲ್ಲ ಕುಲವ ಸದೆದ || ೧೮ ||**

**ಟೀ. ತಾ. :—** ಶಿವಭಕ್ತನಾದ ಬಾಣಾಸುರನಲ್ಲಿ ಆವಿಷ್ಟನಾಗಿದ್ದ ಬಾಣನಾಮಕ ದೈತ್ಯನೇ ಪರಮ ನೀಚನಾದ ಕೀಚಕನಾಗಿ ಹುಟ್ಟಿ, ದ್ರೌಪದಿ ದೇವಿಯರ ಅಲೌಕಿಕವಾದ ಸೌಂದರ್ಯಕ್ಕೆ ಮರುಳಾಗಿ ಮನಸೋತು, ನಾನಾ ವಿಧಗಳಿಂದ ಆ ಸಾಧ್ವಿದೇವಿಯರನ್ನು ನಿತ್ಯದಲ್ಲೂ ಕೆಣಕಿ ಕಾಡುತ್ತಿರಲು, ಅದನ್ನೆಲ್ಲ ತಿಳಿದು ಭೀಮಸೇನದೇವರು ಮಹಾ ರೋಷದಿಂದ ಹಲ್ಲು ಕಡಿಯುತ್ತ, ರಾತ್ರಿ ಕಾಲದಲ್ಲಿ ಗರಡಿ ಮನೆಗೆ ಬರುವಂತೆ ಆ ಪರಮ ಪಾಪಿಗೆ ಹೇಳಿಕಳುಹಿ, ಅದರಂತೆ ಅತಿ ಕಾಮುಕನಾಗಿ ಅಲ್ಲಿಗೆ ಬಂದ ಆ ನೀಚನನ್ನು ಮುಷ್ಟಿ ಪ್ರಹಾರದಿಂದ ಗುದ್ದಿ ಮಾಂಸದ ಮುದ್ದೆಯನ್ನು ಮಾಡಿ, ತಮ್ಮ ಸತಿಯನ್ನು ಬಹು ಸಂತೋಷಗೊಳಿಸಿದರು ಹಾಗೆಯೇ, ಆ ಕೀಚಕನ ೧೦೫ ಜನ ಉಪಕೀಚಕಾಖ್ಯ ತಮ್ಮಂದಿರನ್ನೂ ಸದೆಬಡೆದು ಯಮ ಸದನಕ್ಕಟ್ಟಿದರು. ದುರುಳತಮನಾದ ದುರ್ಯೋಧನನು ಅಜ್ಞಾತ ವಾಸಿಗಳಾಗಿ ಇರುತ್ತಿದ್ದ ಪಾಂಡವರ ಗುರುತನ್ನು ಹಿಡಿಯಲು, ಅವರಿದ್ದ ವಿರಾಟರಾಯನ ನಗರಕ್ಕೆ ಕುಸ್ತಿಯ ನೆವದಿಂದ ಕಳುಹಿಕೊಟ್ಟ ಯಾವತ್ತೂ ಮಹಾ ಮಲ್ಲರ ಸಮೂಹವನ್ನು ಭೀಮಸೇನದೇವರು ಕುಸ್ತಿಯಾಡುವ ವ್ಯಾಜದಿಂದ ತಗಣೆಯನ್ನೊರಿಸುವಂತೆ ನೆಲಕ್ಕೆ ಒರಿಸಿ ಸಂಹರಿಸಿ ಬಿಟ್ಟರು. ॥ ೧೮ ॥

**ಪದ :— ವೈರಿ ದುಶ್ಶಾಸನನ ತೊಡೆಯ ಮೇಲಡ್ಡಗೆಡಹಿ ।**
**ವೀರ ನರಹರಿಯ ಲೀಲೆಯ ತೋರಿದ ॥**
**ಕೌರವರ ಬಲ ಸವರಿ ವೈರಿಗಳ ನೆಗ್ಗುತ್ತ ।**
**ಓರಂತೆ ಕೌರವರನೆಲ್ಲ ತರಿದ ॥ ೧೯ ॥**

**ಟೀ. ತಾ. :—** ಸಾಧ್ವಿಶಿರೋಮಣಿಯಾದ ದ್ರೌಪದಿದೇವಿಯರನ್ನು ಮುಟ್ಟಿ ಅವರ ಮುಡಿ ಹಿಡಿದೆಳೆಯುತ್ತ ನಡುಸಭೆಗೆ ತಂದ ಕಡುಪಾಪಿಯೂ ದೃಢವೈರಿಯೂ ಆಗಿದ್ದ ದುಶ್ಶಾಸನನನ್ನು ಭೀಮಸೇನದೇವರು ಮಧ್ಯ ರಣರಂಗದಲ್ಲಿ ಜುಟ್ಟು ಹಿಡದೆಳತಂದು, ವೀರಾಧಿವೀರರಾದ ಕೌರವ ಪಾಂಡವ ಉಭಯ ದಳಗಳಲ್ಲಿದ್ದ ಅತಿರಥಿಕ, ಮಹರಥಿಕರಾದವರೆಲ್ಲರೂ ನೋಡುತ್ತಿರುವಂತೆ, ಆ ನೀಚನನ್ನು ತಮ್ಮ ತೊಡೆಯಮೇಲೆ ಅಡ್ಡ ಕೆಡಹಿಕೊಂಡು ಭೂವ್ಯಾಕಾಶಗಳು ಗಡಗಡನೆ ನಡಗುವಂತೆ ಸಿಂಹಗರ್ಜನೆಯನ್ನು ಮಾಡುತ್ತ, ಶ್ರೀ ನೃಸಿಂಹ

ದೇವರು ಲೋಕಕಂಟಕನಾದ ಹಿರಣ್ಯಕಶ್ಯಪುವಿನ ಉದರವನ್ನು ಬಗೆಯುವಾಗ್ಗೆ ತೋರಿದ ಅತಿ ಭಯಂಕರ ಕ್ರೌರ್ಯವನ್ನು ತೋರುತ್ತ, ಆ ದುಶ್ಶ್ಯಾಸನನ ಉದರವನ್ನು ತಮ್ಮ ಗದೆಯಿಂದ ಕುಟ್ಟಿ ಹರಿದು ರಕ್ತದ ಮಡುವನ್ನು ನಿರ್ಮಿಸಿ, ಅಟ್ಟಹಾಸದಿಂದ ಇಡೀ ಜಗತ್ತಿಗೆ ಸಾಕ್ಷಾಚ್ಛ್ರೀ ನರಹರಿಯ ಅಸದೃಶವಾದ ಶೌರ್ಯದ ಲೀಲೆಯನ್ನು ತಾವು ಮಾಡಿ ತೋರಿಸಿದಂಥ ಧೀರಶಿವರು. ಶ್ರೀ ನೃಸಿಂಹದೇವರು ಹಿರಣ್ಯಕಶ್ಯಪನನ್ನು ಕೊಂದು, ಪ್ರಹ್ಲಾದರಾಜರನ್ನು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮುದ್ದಾಡಿ ಪ್ರೇಮದಿಂದ ಪೋಷಿಸಿದಂತೆ, ಭೀಮಸೇನದೇವರು ದುಶ್ಶ್ಯಾಸನನನ್ನು ಕೊಂದು ದ್ರೌಪದಿದೇವಿಯರನ್ನು ಕರೆದು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಆ ಪಾಪಿಯ ಎದೆಯ ರಕ್ತದಿಂದ ಆ ಸತಿಶಿರೋಮಣಿಯ ಜಡೆಗಟ್ಟಿದ ಮುಡಿಯನ್ನು ತೊಯ್ಸಿ ನೆನಿಸಿ, ಅವನ ಹಲ್ಲುಗಳನ್ನು ಕಿತ್ತಿ ತೆಗೆದು ಅದರಿಂದ ಕೇಶಗಳನ್ನು ಬಾಚಿ, ಆ ದೇವಿಯರು ಪೂರ್ವದಲ್ಲಿ ಗೈದ ದೃಢಶಪಥವನ್ನು ಪೂರ್ತಿಮಾಡಿ ಸಂತೋಷಗೊಳಿಸಿದರು. ಹೀಗೆ ಭೀಮಸೇನದೇವರು ಮಾಡಿತೋರಿದ ಈ ಕಾರ್ಯವು ಶ್ರೀ ನೃಸಿಂಹದೇವರ ಕ್ರಿಯಾಕ್ಕೆ ಪೂರ್ಣ ಸಾಮ್ಯವಾಗಿದ್ದುದರಿಂದಲೇ, ಪದ್ಯದಲ್ಲಿ **" ವೀರ ನರಹರಿಯ ಲೀಲೆಯ ತೋರಿದ "** ಎಂದು ಅಂದದ್ದು.

ಕೌರವರ ೧೧ ಅಕ್ಷೋಹಿಣಿ ಬಲವನ್ನು ಬಹಳವಾಗಿ ಭೀಮಸೇನದೇವರೊಬ್ಬರೇ ಕೊಂದು ಮಹಮಹಾ ವೀರರಾದ ವೈರಿಗಳನ್ನು ಮೆಟ್ಟಿತುಳಿದು, ಧೃತರಾಷ್ಟ್ರರಾಜನ ಶತ ಸಂಖ್ಯಾಕ ಮಹಾ ದುಷ್ಟ ಪುತ್ರರನ್ನು ತಮ್ಮ ಉಕ್ಕಿನ ಗದೆಯಿಂದ ಹೊಡೆದು ಕೊಂದು ಮಾರಿಗೆ ಹಬ್ಬದೌತನವನ್ನು ಮಾಡಿಸಿದರು. ಭೀಮಸೇನದೇವರ ಗದಾ ಪ್ರಹಾರವು ಕೇವಲ ತಮೋಯೋಗ್ಯ ಜೀವರ ಸಂಹಾರಕ್ಕಾಗಿಯೇ ಕೊನೆಗೆ ಪ್ರಯೋಗವಾಗುವದರಿಂದ, ಈ ೧೦೦ ಜನ ಕೌರವರೂ ಮಹಾ ತಮಸ್ಸನ್ನೇ ಸೇರುವವರಾದರೆಂದು ತಿಳಿಯತಕ್ಕದ್ದು.

ಈ ಬ್ರಹ್ಮಾಂಡದಲ್ಲಿ ಭೀಮಸೇನದೇವರಿಗೆ ಸಮರಾದ ಸಾಮರ್ಥ್ಯ ಪ್ರಭಾವದ ಜೀವರು ಯಾರೂ ಇಲ್ಲವೆಂದು, ಕುರು ಪಾಂಡವರ ವೃದ್ಧ ಪಿತಾಮಹರಾದ ಸಾಕ್ಷಾತ್ ಭೀಷ್ಮಾಚಾರ್ಯರು ಮಹಾಭಾರತ ಯುದ್ಧ ಕಾಲದಲ್ಲಿ, ದುರ್ಯೋಧನಾದಿಗಳಿಗೆ ಸಮಸ್ತ ಕೌರವ ಸೈನಿಕರ ಸಮಕ್ಷದಲ್ಲಿ ಸಾರಿ ಸಾರಿ

ಹೇಳಿದ್ದೇನೆಂದರೆ :— " **ನಾಸ್ತಿ ಭೀಮಸೇನ ಸಮೋ ವೀರೋ । ಸೇನ ಯೋರುಭಯೋರಪಿ ॥ ಪಾಂಡಿತ್ಯೇಽಪಿ ಪಟುತ್ವೇಽಪಿ ಶೂರತ್ವೇಽಪಿ ಬಲೇಽಪಿ ಚ ॥** " **ಅರ್ಥ** :- " ಈ ಉಭಯ ಕುರು ಪಾಂಡವರ ಸೈನ್ಯ ಮಧ್ಯದಲ್ಲಿ ಭೀಮಸೇನದೇವರಿಗೆ ಜ್ಞಾನದಲ್ಲಿಯೂ, ಕೌಶಲ್ಯದಲ್ಲಿಯೂ, ಶೌರ್ಯ ದಲ್ಲಿಯೂ, ಬಲದಲ್ಲಿಯೂ ಸಮರಾದವರು ಯಾರ್‍ಯಾರೂ ಇಲ್ಲವೇ ಇಲ್ಲ" ಎಂಬುದು ಅವರ ವಚನವು. ಇನ್ನೊಂದು ಪ್ರಸಂಗದಲ್ಲಿ–ಅಂದರೆ ಅತಿ ರಥಿಕ, ಮಹರಥಿಕರೆನಿಸಿದ ಭೀಷ್ಮ, ದ್ರೋಣ, ಅಶ್ವತ್ಥಾಮ, ಕೃಪ, ಕರ್ಣ, ಕೃತವರ್ಮಾದಿ ವೀರಾಗ್ರೇಸರರಿಂದ್ಯುಕ್ತವಾದ ೧೧ ಅಕ್ಷೋಹಿಣಿಯ ಕೌರವ ಬಲವನ್ನು ತಮ್ಮಿಂದ ಗೆದೆಯಲಾದೀತೋ ಇಲ್ಲವೋ ಎಂದು ಬಹು ಭಯ ಗ್ರಸ್ತನಾಗಿ ಯೋಚಿಸುತ್ತ ಕುಳಿತಿರ್ದ ಧರ್ಮರಾಜನ ಮನೋಭಿಪ್ರಾಯವನ್ನು ಸರ್ವಜ್ಞಶಿಖಾಮಣಿಯಾಗಿದ್ದ ಭಗವಾನ್ ಕೃಷ್ಣಪರಮಾತ್ಮನು ತಿಳಿದು, ಆ ರಾಯನ ಮನೋತಾಪವನ್ನೂ ಸಂಶಯವನ್ನೂ ನಿವಾರಿಸಿ ಅಖಂಡ ಧೈರ್ಯ ವನ್ನು ಹುಟ್ಟಿಸಲು, ಭಾರತ ಯುದ್ಧ ಪ್ರಾರಂಭದ ಪೂರ್ವದಲ್ಲಿ ಎಲ್ಲರ ಬಲಾ ಬಲಗಳನ್ನು ತಿಳಿಪಡಿಸುವ ವ್ಯಾಜದಿಂದ, ಧರ್ಮಾದಿ ನಾಲ್ವರೂ ಪಾಂಡವರನ್ನು ಕೇಳಿ, ಕೊನೆಗೆ ಭೀಮಸೇನದೇವರಿಗೆ ತಮ್ಮ ಬಲವೆಷ್ಟಿರುವದೆಂಬುದನ್ನು ಧರ್ಮಾರ್ಜುನಾದಿಗಳ ಮುಂದೆ ಉಸುರಲು ಹೇಳಿದನು. ಆಗ್ಗೆ ಭೀಮಸೇನ ದೇವರು ಬಹು ವಿನಯದಿಂದ ಕೈಮುಗಿದು :– " ಹೇ ಸ್ವಾಮಿಾ! ನಿನ್ನ ಪೂರ್ಣ ಕೃಪಾಕಟಾಕ್ಷಲಕ್ಷಣದ ಅನುಗ್ರಹವೊಂದು ನನ್ನಲ್ಲಿ ದೃಢವಾಗಿದ್ದರೆ, ಆ ಮಹದ್ಬಲದಿಂದ ಈ ಬ್ರಹ್ಮಾಂಡವನ್ನು ಎರಡು ಹೋಳಾಗಿ ಸೀಳಿ ತಾಳ ಬಾರಿಸುವಂತೆ ಕಟಿಯಬಲ್ಲೆನು " ಎಂದು ಅಂದರು. ಆಗ್ಗೆ, ಧರ್ಮಾದಿಗಳ ಎದೆ, ಕೈ, ಕಾಲುಗಳು ಗಾಬರಿಯಿಂದ ಗಡಗಡ ನಡುಗಿ, ಬಳಿಕ ಆನಂದ ಚಿತ್ತರಾಗಿ ಭೀಮಸೇನದೇವರನ್ನು ಅವರು ಬಹು ಕೊಂಡಾಡಿದರು. ಆದರೆ, ಭಗವಂತನು ಇವರ ನುಡಿಯನ್ನಾಲಿಸಿ ತಲೆದೂಗಿ " ಹೇ ಮತ್ಪ್ರಾಣನಾದ ಭೀಮಸೇನನೇ! ನೀನಾಡಿದ್ದೆಲ್ಲ ಅತಿ ಸಹಜವೇ. ಪರಂತು, ನಮ್ಮಲ್ಲಿಯ ಗುರುತ್ವದ ಗೌರವದಿಂದ ನೀನು ನಿನ್ನ ಸರ್ವ ಸಾಮರ್ಥ್ಯವನ್ನು ಹೇಳಿಕೊಳ್ಳದೆ ಅಲ್ಪಾಂಶವನ್ನೇ ಉಸುರಿದಿ. ನಿನ್ನ ಸಾಮರ್ಥ್ಯವು ಇದಕ್ಕೂ ಎಷ್ಟೋಮಡಿ ಅಧಿಕವಾಗಿರುವದನ್ನು ನಾನು ಪೂರ್ಣಬಲ್ಲೆನು. " ಎಂದು ಶ್ರೀ ಹರಿಯು

ಭೀಮಸೇನದೇವರನ್ನು ಕೊಂಡಾಡುತ್ತ ತಬ್ಬಿಕೊಂಡು ಆನಂದಸಾಗರದಲ್ಲಿ ಮುಳುಗಿಸಿದನು. ಆಹಹಾ! ಏನು ವಿಚಿತ್ರ ಸಾಮರ್ಥ್ಯವೋ ಈ ವಾಯು ದೇವರದು! ಅವರ ಶಕ್ತಿವಿಶೇಷವನ್ನು ಭಗವಂತನೊಬ್ಬ ಬಲ್ಲನು. ॥ ೧೯ ॥

**ಪದ :— ಗುರು ಸುತನು ಸಂಗರದಿ ನಾರಾಯಣಾಸ್ತ್ರ ಬಿಡೆ ।**
**ಉರವಣಿಸಿ ಬರಲು ಶಸ್ತ್ರವ ಬಿಸುಟಿದೆ ॥**
**ಹರಿಯ ಕೃಪಾಪಡೆದಿದ್ದ ಭೀಮ ಹುಂಕಾರಗೈದು ।**
**ಎರಗದಲೆ ದಿವ್ಯಾಸ್ತ್ರ ನೆರೆ ಅಟ್ಟಿದ ॥ ೨೦ ॥**

**ಟೀ. ತಾ. :—** ಬೃಹಸ್ಪತ್ಯಾಚಾರ್ಯರ ಅವತಾರರಾದ ದ್ರೋಣಾ ಚಾರ್ಯರಿಗೆ ಪುತ್ರರಾದ ಅಶ್ವತ್ಥಾಮಾಚಾರ್ಯರು ರಣರಂಗದಲ್ಲಿ ಪಾಂಡವರ ಸಹಿತಾದ ಅವರ ಸೇನೆಯ ಮೇಲೆ ಅತ್ಯಮೋಘವಾದ ನಾರಾಯಣಾಸ್ತ್ರ ವನ್ನು ಪ್ರಯೋಗಿಸಲು, ಅದು ದಶ ದಿಕ್ಕುಗಳಲ್ಲಿಯೂ ಭಯಂಕರವಾಗಿ ಉರಿ ಯುತ್ತ ಬರಲು, ಶ್ರೀ ಕೃಷ್ಣಪರಮಾತ್ಮನ ಮಹದಾಜ್ಞೆಯಿಂದ ಧರ್ಮರಾಜನೇ ಮೊದಲಾಗಿ ಸರ್ವರೂ ತಂತಮ್ಮ ಅಸ್ತ್ರಗಳನ್ನು ಕೆಳಗಿಟ್ಟು ನಮಸ್ಕರಿಸುತ್ತ ತಮ್ಮ ಪ್ರಾಣಗಳನ್ನು ಉಳಿಹಿಕೊಂಡರು. ಆದರೆ, ಈ ಜೀವರಂತೆ ಆಗಿರದ ಭೀಮಸೇನದೇವರು ಪ್ರಾಣಭಯವೆಂಬುದನ್ನೇ ಅರಿಯದಿದ್ದು, ಅಂಥ ತಮ್ಮ ಪ್ರಾಣರಕ್ಷಣ ಮಾಡಿಕೊಳ್ಳಬೇಕೆಂಬ ಸ್ವಾರ್ಥದಿಂದ ಭಗವದಸ್ತ್ರಕ್ಕೆ ನಮಸ್ಕಾರ ಮಾಡಲಿಲ್ಲ. ಅವರು ಭಗವಂತನ ನಿಷ್ಕಾಮಭಕ್ತರಲ್ಲಿ ಅಗ್ರೇಸರರು. ನಾರಾ ಯಣಾಸ್ತ್ರಕ್ಕೆ ಅಂಜಿ ತಲೆಬಾಗಿ ಜೀವಗಳ್ಳತನದಿಂದ ಪ್ರಾಣವುಳಿಸಿಗೊಳ್ಳದೆ, ಭಗವದ್ದತ್ತ ದೇಹವನ್ನು ಭಗವದಸ್ತ್ರಕ್ಕೆ ಸಮರ್ಪಿಸುವದು ಶ್ರೇಷ್ಠವಾದ ಯಜ್ಞವೆಂದು ನಿಶ್ಚೈಸಿ ನಮಿಸದಿದ್ದರು. ಅಥವಾ, ತಾವು ಜಗದೇಕವೀರರಾಗಿ ತಮ್ಮ ವೈರಿಬಿಟ್ಟ ಅಸ್ತ್ರಕ್ಕೆ ಅಂಜಿ ಹೇಡಿಯಂತೆ ಶರಣು ಹೋಗುವದು ವೀರ ಕ್ಷತ್ರಿಯರ ಕುಲಕ್ಕೆ ಮಹಾ ಕಲಂಕವೆಂಬ ನ್ಯಾಯವನ್ನು ಬಲ್ಲವರಾದ, ಹಾಗೂ ಶ್ರೀ ಹರಿಯ ಪೂರ್ಣ ಕೃಪಾಕಟಾಕ್ಷವೆಂಬ ವಜ್ರಕವಚದಿಂದ ರಕ್ಷಿತರಾದ ಭೀಮಸೇನದೇವರು ಗರ್ಜನೆಯ ಹುಂಕಾರ ಗೈಯುತ್ತ ಹಾಗೆಯೇ ನಿಂತಿದ್ದು, ಆ ಅಮೋಘಾಸ್ತ್ರವನ್ನು ಮುಂದಕ್ಕೆ ಸಾಗಿಸಿಬಿಟ್ಟರು.

**ವಿಶೇಷಾಂಶ :—** ಸರ್ವದೇಶ, ಕಾಲ, ಪರಿಸ್ಥಿತಿಗಳಲ್ಲಿ ಪೂರ್ಣವಾದ ಭಗವದ್ವ್ಯಾಪ್ತಿ ರೂಪಗಳನ್ನು ಸಮ್ಮುಖದಲ್ಲಿ ಪ್ರತ್ಯಕ್ಷವಾಗಿ ಕಾಣುತ್ತ, ಹಾಗೆಯೇ ಜ್ಞಾನ, ಇಚ್ಛಾ, ಕ್ರಿಯಾ ಶಕ್ತಿಗಳಲ್ಲಿಯೂ ಭಗವದನುಸಂಧಾನ ವನ್ನು ತತ್ತತ್ಕಾಲಗಳಲ್ಲಿ ಗೈಯುತ್ತ ಪೂಜಿಸತಕ್ಕ ಭೀಮಸೇನದೇವರು, ಪ್ರತ್ಯಕ್ಷ ವಾಗಿ ತಮ್ಮ ಸಮ್ಮುಖದಲ್ಲಿ ಬರುತ್ತಿದ್ದ ಅಸ್ತ್ರರೂಪದ ಭಗವನ್ನಾರಾಯಣ ನಿಗೆ ನಮಿಸಲಿಲ್ಲೆಂಬುದು ಅನುಚಿತವಾಗಿ ತೋರುವದು; ಹೀಗೆಂದರೆ ನಿಜ. ಅದರಿಂದ, ಭೀಮಸೇನದೇವರು ನಿಜವಾಗಿಯೂ ಮಾಡಿದ್ದೇನೆಂದರೆ:-ಜಗತ್ತಿಗೆ ಧರ್ಮ, ಕರ್ಮ, ನೀತಿ, ಮರ್ಯಾದೆಗಳನ್ನು ಬೋಧಿಸ ಸನ್ಮಾರ್ಗಪ್ರವರ್ತಕರಿ ಗೆಲ್ಲ ಶ್ರೇಷ್ಠ ಗುರುಗಳಾದ ವಾಯು ಅವತಾರದ ಭೀಮಸೇನದೇವರು ನಾರಾ ಯಣಾಸ್ತ್ರಕ್ಕೆ ಮಿಕ್ಕವರಂತೆ ಬಾಹ್ಯದಲ್ಲಿ ನಮಿಸಲಿಲ್ಲ. ಆದರೆ, ಅಂತರಂಗದಲ್ಲಿ ಆ ಅಸ್ತ್ರಾಂಗರ್ತತ ಅಸ್ತ್ರಾಭಿಮಾನಿಯಾದ ಶ್ರೀಮನ್ನಾರಾಯಣದೇವರಿಗೆ ಅನಂತಪ್ರಣಾಮಗಳನ್ನು ಮಾಡಿಯೇ ಮುಂದಕ್ಕೆ ಸಾಗಿಸಿದರು. ಮತ್ತು ಅರ್ಚಕನ ತಪೋಬಲಕ್ಕನುಸರಿಸಿ ಆಯಾ ಪೂಜ್ಯ ವಸ್ತುಗಳಲ್ಲಿ ಭಗವತ್ಸಾ ನಿಧ್ಯವು ಇರುವದೆಂಬುದು ವೇದಪ್ರಮಾಣವಾಗಿದ್ದು, ಪರಮ ಪಾಪಿಯಾದ ದುರ್ಯೋಧನನ ಅನ್ನದಿಂದ ಪೋಷಿತರಾದ ಅಶ್ವತ್ಥಾಮಾಚಾರ್ಯರು ಅಭಿ ಮಂತ್ರಿಸಿ ಬಿಟ್ಟ, ನಾರಾಯಣಾಸ್ತ್ರದೊಳಗಿನ ಭಗವತ್ಸನ್ನಿಧಾನದಕಿಂತಲೂ, ಸಕಲ ಜೀವೋತ್ತಮರಾಗಿ ಅಖಂಡ ಪುಣ್ಯಪ್ರಭಾವದಿಂದ ಸರ್ವದಾ ಭಗವಂತನ ಕೇವಲ ಸನ್ನಿಧಾನದಲ್ಲಿ ತಾವೂ ತಮ್ಮಲ್ಲಿ ಭಗವಂತನೂ ಹೀಗಿರತಕ್ಕ ಭೀಮಸೇನದೇವರಲ್ಲಿ ಭಗವತ್ಕಳೆಯು ಅತ್ಯಧಿಕವಾಗಿದ್ದುದರಿಂದೇ ಅವರಿಗೆ ಆ ಅಶ್ವತ್ಥಾಮರು ಬಿಟ್ಟ ಅಸ್ತ್ರದಿಂದ ಭಯವುಂಟಾಗಲಿಲ್ಲ. ॥ ೨೦ ॥

**ಪದ :— ನಾರಿ ರೋದನ ಕೇಳಿ ಮನ ಮರುಗಿ ಗುರುಸುತನ ।**
**ಹಾರ್ಹಿಡಿದು ಶಿರೋರತ್ನ ಕಿತ್ತಿ ತೆಗೆದ ॥**
**ನೀರೊಳಡಗಿದ್ದ ದುರ್ಯೋಧನನ ಹೊರಗೆಡಹಿ ।**
**ಊರುದ್ವಯ ತನ್ನ ಗದೆಯಿಂದ ಮುರಿದ ॥ ೨೧ ॥**

**ಟೀ. ತಾ. :—** ಮಧ್ಯರಾತ್ರಿಯಲ್ಲಿ ಮೋಸಮಾಡಿ ಬಂದು ಗಾಢನಿದ್ರೆ ಯಿಂದ ಮಲಗಿದ್ದ ದ್ರೌಪದಿದೇವಿಯರ ಪಂಚಪುತ್ರರನ್ನು—ಉಪಪಾಂಡವರನ್ನು

ಅಶ್ವತ್ಥಾಮಾಚಾರ್ಯರು, ದುರ್ಯೋಧನನಗೆ ವಚನಕೊಟ್ಟು ಬಂದಿರುವಂತೆ ಕೊಂದು ಹೋದರೆಂಬ ಮಹಾ ದುಃಖದ ವಾರ್ತೆಯನ್ನು ರೋದನಗೈಯುತ್ತ ಕುಳಿತಿದ್ದ ತಮ್ಮ ಸತಿಯಿಂದ ಕೇಳಿ, ದಕ್ಷಧ್ವಂಸನ ಕಾಲದಲ್ಲಿ ಕೋಪದಿಂದ ಕೆರಳಿದ ವೀರಭದ್ರನಂತೆ, ಹಿರಣ್ಯಕಶ್ಯಪನ ಸಂಹಾರ ಕಾಲದಲ್ಲಿ ಕರಾಳವದನನಾಗಿ ಸಿಡಿಲಂತೆ ಗರ್ಜಿಸುತ್ತಿದ್ದ ಶ್ರೀ ನೃಸಿಂಹನಂತೆ, ಭೀಮಸೇನದೇವರು ಕಣ್ಣಿಂದ ಕೆಂಡಗಳನ್ನು ದುರಿಸುತ್ತ, ತಮ್ಮ ಭಯದಿಂದ ಬೆದರಿ ಓಡಿಹೋಗುತ್ತಿದ್ದ ಅಶ್ವತ್ಥಾಮರನ್ನೂ ಬೆನ್ನಟ್ಟಿಹೋಗಿ ಹಾರಿ ಹಿಡಿದು, ಅವರ ತಲೆಯನ್ನೊಡೆದು ಅಲ್ಲಿದ್ದ ಮಹಾ ಜ್ಞಾನದಾಯಕವಾದ ಅನೋಲ್ಯ ರತ್ನವನ್ನು ಕಿತ್ತಿತೆಗೆದು, ಅಶ್ವತ್ಥಾಮರನ್ನು ನಿರ್ವೀರ್ಯ ಹಾಗೂ ತೇಜೋವಿಹೀನರನ್ನಾಗಿ ಮಾಡಿ ಕಟ್ಟಿತಂದು ದ್ರೌಪದಿದೇವಿಯರ ಪಾದಗಳ ಮೇಲೆ ಕೆಡಹಿದರು.

ಯುದ್ಧದಲ್ಲಿ ಭೀಷ್ಮಾಚಾರ್ಯರೇ ಮೊದಲಾಗಿದ್ದ ತನ್ನ ಸಮಸ್ತ ಬಾಂಧವರೆಲ್ಲ ಮಡಿದು ಹೋಗಿ, ಏಕಾಕಿಯಾಗಿ ತಾನೊಬ್ಬನೇ ಉಳಿದ ಕಾರಣ ಹತಾಶನಾಗಿ, ಕೊನೆಯ ಉಪಾಯವೆಂದು ನೀರಿನ ಮಡುವಿನಲ್ಲಿ ಮುಳುಗಿ ಜಲಸ್ತಂಭವೆಂಬ ಮಂತ್ರವನ್ನು ಜಪಿಸಿ, ತನ್ನ ಮಡಿದ ೧೧ ಅಕ್ಷೋಹಿಣಿ ಸೈನ್ಯವನ್ನೂ ಪುನಃ ಬದುಕಿಸುವ ಮಹಾ ಪ್ರಯತ್ನದಲ್ಲಿದ್ದ ದುರ್ಯೋಧನನನ್ನು ಆ ಸರೋವರದಿಂದ ಜಲ ಕದಡಿ ಹೊರಗೆಡಹಿ, “ಎಲೈ ಜೀವಗಳ್ಳನೇ! ಏತಕ್ಕಂಜಿ ಜಲದಲ್ಲಿಡಗಿರುವಿ? ಬಂಧುಗಳನ್ನೆಲ್ಲ ಹತಮಾಡಿಸಿದ ಪರಮಪಾಪಿಯೋ’ ಎಂದು ಮರ್ಮೋದ್ಘಾತುಕವಾದ ನುಡಿಗಳಿಂದ ಹಂಗಿಸುತ್ತ, ತಮ್ಮ ಗದೆಯಿಂದ ಅವನ ಎರಡೂ ತೊಡೆಗಳನ್ನು ಮುರಿದು ಕಾಲಿಲೊದ್ದು ಒಗೆದರು. ಆ ಪರಮ ನೀಚನು ದ್ರೌಪದಿದೇವಿಯರನ್ನು ನಡುಸಭೆಗೆಳೆಸಿ, ನನ್ನ ರಾಣಿಯಾಗಿ ನನ್ನ ತೊಡೆಯ ಮೇಲೆ ಕೂಡ್ರಬಾರೆಂದು ತೊಡೆ ಚಪ್ಪರಿಸಿಕೊಂಡಾಗ್ಗೆ, “ಎಲಾ ಅಧಮಾಧಮಾ! ನಿನ್ನ ತೊಡೆಯ ಮೇಲೆ ಕೂಡತಕ್ಕವಳು ನಾನಲ್ಲ. ನನ್ನ ಪತಿಯಾದ ಭೀಮಸೇನದೇವರ ಗದೆಯು; ಅದನ್ನು ತಾಳಿಕೋ.” ಎಂದು ಪ್ರತಿಜ್ಞಾಪೂರ್ವಕವಾಗಿ ಅಂದ ತಮ್ಮ ಸತಿಯ ಮಾತನ್ನು ಭೀಮಸೇನದೇವರು ಸತ್ಯಗೊಳಿಸಿ, ಮೂಲಕಲಿಯಾದ ದುರ್ಯೋಧನಾದಿಗಳನ್ನು ಕೊಂದು ಭೂಭಾರವನ್ನಿಳುಹಿ, ಆ ಮಹಾ ಪುಣ್ಯವನ್ನೆಲ್ಲ ಆಗಾಗ್ಗೆ ಸರ್ವ ಕರ್ಮ ಸಾಕ್ಷಿಯಾಗಿ ನಿರೀಕ್ಷಿಸುತ್ತಿದ್ದ ಶ್ರೀ ಕೃಷ್ಣದೇವರ ಚರಣಾರವಿಂದಗಳಿಗೆ ಸಮರ್ಪಿಸಿದರು.

**ಪದ :— ಚಂಡ ವಿಕ್ರಮನು ಗದೆಗೊಂಡು ರಣದೊಳಗೆ ಭೂ ।**
**ಮಂಡಲದೊಳುದ್ಭವಿಸಿದಖಿಳ ಖಳರ ॥**
**ಹಿಂಡಿ ಬಿಸುಟಿದ ವೃಕೋದರನ ಪ್ರತಾಪವನು ।**
**ಕಂಡು ನಿಲ್ಲುವರಾರು ತ್ರಿಭುವನದೊಳು ॥ ೨೨ ॥**

**ಟೀ. ತಾ. :—** ಈ ಬ್ರಹ್ಮಾಂಡದೊಳಗೆ ಅತಿ ಪ್ರಚಂಡ ಪರಾಕ್ರಮಿಗಳಾದ ಭೀಮಸೇನದೇವರು, ತಮ್ಮ ೧೦೦ ಮಣ ಭಾರವಾದ ಉಕ್ಕಿನ ಗದೆಯನ್ನು ಕರದಲ್ಲಿ ಧರಿಸಿ, ಈ ಭೂಮಂಡಲದ ಮೇಲೆ ಹುಟ್ಟಿದ ದುಷ್ಟ ದೈತ್ಯರ ಅಸುಗಳನ್ನು ಹಿಂಡಿ ಹಿಚುಕಿ ಹಾಕಿದರು. ಮತ್ತು "**ವೃಕ**" ನಾಮಕ ಅಂಗುಷ್ಟಪ್ರಮಾಣವಾದ ಅಗ್ನಿ ರೂಪದ ಭಗವಂತನನ್ನು ತಮ್ಮುದರದಲ್ಲಿ ಅತಿ ಹಿತವಾಗಿಟ್ಟುಕೊಂಡಿದ್ದ ಭೀಮಸೇನದೇವರ ಅತ್ಯದ್ಭುತ ಸಾಮರ್ಥ್ಯವನ್ನು ಅರಿದು, ಅವರ ಮುಂದೆ ಧೈರ್ಯದಿಂದ ನಿಂತು ಹೋರಾಡತಕ್ಕ ವೀರರು ಈ ಚತುರ್ದಶ ಲೋಕಗಳಲ್ಲಿ ಯಾರಾದರೂ ಇರುವರೇನು? ಸುತರಾಂ ಇಲ್ಲವೆಂದೇ ಅಭಿಪ್ರಾಯವು. ಹೀಗೆ ವಾಯುದೇವರ ದ್ವಿತಿಯಾವತಾರರಾದ ಭೀಮಸೇನದೇವರು ಶ್ರೀ ಕೃಷ್ಣಪರಮಾತ್ಮನ ಅಂಗಭೂತರಾಗಿ ಅವತರಿಸಿದವರಲ್ಲಿ ಪ್ರಥಮರಾಗಿ, ಭೂಭಾರವಾದ ದೈತ್ಯವೃಂದವನ್ನು ವಿನಾಶಗೊಳಿಸಿ, ಸಜ್ಜನಸಮೂಹಕ್ಕೆಲ್ಲ ಸುಖಪ್ರದರಾಗಿ ತಮ್ಮ ಅವತಾರವನ್ನು ಮುಗಿಸಿದರು.

ಮುಮುಕ್ಷುಗಳ ಮೋಕ್ಷಸಾಧನ ಸಂಪತ್ತಿಗೆ ನಿತ್ಯದಲ್ಲಿಯೂ ಗುರು ಮಂತ್ರದ ಧ್ಯಾನವು ಅತ್ಯವಶ್ಯಕವಾದುದರಿಂದ, ಈ ಸುರಗುರುಗಳ ಧ್ಯಾನ ಶ್ಲೋಕವನ್ನು ತ್ರಿಕಾಲಗಳಲ್ಲೂ ತಪ್ಪದೆ ಸುಜೀವರು ಪಠಣಗೈಯತಕ್ಕದೆಂದು ಅದನ್ನು ಇಲ್ಲಿ ಕೊಟ್ಟಿರುವದು.

**ಧ್ಯಾನಶ್ಲೋಕ :—**

**" ಶ್ರೀ ಭೀಮೋ ಭೀಮಸೇನಶ್ಚ ।**
**ಮಾರುತಿಃ ಪಾಂಡುನಂದನಃ ॥**
**ವೃಕೋದರೋ ಗದಾಪಾಣಿಃ ।**
**ಕುಂತೀಪುತ್ರೋ ಮಹಾಬಲಃ ॥ ೧ ॥ "**

# ವಾಯುದೇವರ ತೃತಿಯಾವತಾರರಾದ ಶ್ರೀಮನ್ಮಧ್ವಾಚಾರ್ಯವರ್ಯರ ವರ್ಣನ

**ಪದ :— ದಾನವರು ಕಲಿಯುಗದೊಳವತರಿಸಿ ಸುಜನರಿಗೆ |**
**ವೇನನ ಕುಮತವ ಬೋಧಿಪುದನರಿತು ||**
**ಜ್ಞಾನಿತಾ ಪವಮಾನ ಭೂತಳದೊಳವತರಿಸಿ |**
**ಮಾನನಿಧಿ ಮಧ್ವಾಖ್ಯನೆಂದೆನಿಸಿದ || ೨೩ ||**

**ಟೀ. ತಾ.** :–ಪಾಪಪುಂಜವಾದ ಈ ಕಲಿಯುಗದಲ್ಲಿ ದ್ವಾಪರಯುಗದ ಮಣಿಮಂತನೇ ಮೊದಲಾದ ಅಸುರರು, ವೇದಾದಿ ಸಚ್ಛಾಸ್ತ್ರಗಳಲ್ಲಿಯೂ ಶ್ರೀ ಹರಿ, ವಾಯುದೇವರಲ್ಲಿಯೂ ಸ್ವರೂಪ ಸಿದ್ಧವಾದ ದ್ವೇಷ ವಿಶೇಷದಿಂದ ಮೂಲ ಕಲಿಗೆ ಅಂಗಭೂತರಾಗಿ ಹುಟ್ಟಿ, ಅಂಗರಾಜನ ಸುತನೆನಿಸಿ ಮಹಾ ನೀಚನಾಗಿದ್ದ ವೇನನ ಕುಮತವನ್ನನುಸರಿಸಿ, ಜೀವನೇ ಪರಬ್ರಹ್ಮ, ಜೀವನೇ ಕರ್ತಾ, ಜಗನ್ಮಿಥ್ಯಾ, ಬ್ರಹ್ಮನೊಬ್ಬನೇ ಸತ್ಯ, ಇತ್ಯಾದಿಯಾಗಿ ಎಲ್ಲ ಜೀವ ರಿಗೂ ದುರ್ಬೋಧೆ ಮಾಡುತ್ತಿರುವದನ್ನು ನೋಡಿ, ಸಜ್ಜನರಲ್ಲಿ ಅನುಗ್ರ ಹಾರ್ಥವಾಗಿ ದೇವತೆಗಳೆಲ್ಲ ಕಲೆತು ಶ್ರೀ ಹರಿಗೆ ಮೊರೆಯಿಡಲು, ಭಗವಂತನು ವಾಯುದೇವರಿಗೆ ಈ ಭರತಭೂಮಿಯ ಪರಿಶುದ್ಧವಾದ ಪ್ರದೇಶದಲ್ಲಿ ಅವ ತರಿಸಿ, ವೇದ, ಶಾಸ್ತ್ರ, ಪುರಾಣೇತಿಹಾಸಗಳ ನಿಜಾರ್ಥ ನಿರೂಪಣೆಯ ಸಿದ್ಧಾಂತ ರೂಪದ ಸಚ್ಛಾಸ್ತ್ರವನ್ನು ರಚಿಸಿ ಸಜ್ಜನವೃಂದವನ್ನುದ್ಧರಿಸಬೇಕೆಂದು ಆಜ್ಞೆ ಯನ್ನಿತ್ತನು. ಇಂಥ ಪರಮಾನುಗ್ರಹ ಲಕ್ಷಣದ ಮಹದಾಜ್ಞೆಯನ್ನು ವಾಯು ದೇವರು ಶಿರಸಾವಹಿಸಿ, ತ್ರೇತ, ದ್ವಾಪರಯುಗಗಳಲ್ಲಿ ಶ್ರೀ ಹರಿಯಂಗಭೂತ ರಾಗ್ಯವತರಿಸಿ ದುಷ್ಟ ದೈತ್ಯರನ್ನೆಲ್ಲ ಪ್ರಧ್ವಂಸಮಾಡುವ ವ್ಯಾಜದಿಂದ ಭೂಭಾ ರವನ್ನು ಹರಣಮಾಡಿದಂತೆ, ಈಗ ಈ ಕಲಿಯುಗದಲ್ಲಿ ವಾಸುದೇವಾಖ್ಯರಾಗಿ ಪಾಜಕಕ್ಷೇತ್ರವೆಂಬ ಮಹಾ ಪುಣ್ಯಗ್ರಾಮದಲ್ಲಿ ಅವತರಿಸಿ, ಪೌಗಂಡಾವಸ್ಥೆ ಯಲ್ಲೇ ಸನ್ಯಾಸವನ್ನು ಗ್ರಹಿಸಿ, ಶ್ರೀ ಮದ್ಬಾದರಾಯಣಾಖ್ಯ ಭಗವಂತನು ಸುಜೀವರ ಮೋಕ್ಷಸಾಧನೋಪಾಯವೆಂದು ನಿರ್ಮಿಸಿದ ವೇದಗಳು, ಬ್ರಹ್ಮಸೂ ತ್ರಗಳು, ಶ್ರೀ ಮನ್ಮಹಾಭಾರತ, ಭಾಗವತಾದಿ ಸಚ್ಛಾಸ್ತ್ರಗಳಿಗೆ ಕೇವಲ ಕುಕ ಲ್ಪಿತವಾದ ಮಹಾ ಅಶುದ್ಧಾರ್ಥಗಳಿಂದ ಅಪವಿತ್ರವಾದ ೨೧ ಕುಮತಗಳನ್ನು

ವಾದದಲ್ಲಿ ಖಂಡಿಸಿ, "**ಮಧ್ವಾಚಾರ್ಯ**"ರೆಂಬ ಅಭಿಧಾನವುಳ್ಳವರಾಗಿ ಸಕಲಶ್ರುತಿ, ಸ್ಮೃತಿ, ಯುಕ್ತಿಗಳಿಂದಲೂ ಸುಸಮ್ಮತವಾಗಿರುವಂತೆ "**ದ್ವೈತ ಶಾಸ್ತ್ರ**"ವೆಂಬ ತಮ್ಮದೊಂದು ಹೊಸ ಮತವನ್ನೇ ಸ್ಥಾಪಿಸಿದರು. ಸರ್ವಜ್ಞ ರಾದ ವಾಯುದೇವರಿಗೆ ಇದೊಂದು ಅಸಾಧ್ಯವಾದ ಕಾರ್ಯವಲ್ಲ.

**ವಿಶೇಷಾಂಶ :—** ಭಗವಂತನು ಈ ದುರ್ಬೋಧಕರ ಕುಮತಗಳನ್ನು ಖಂಡಿಸಿ ಸತ್ಯಾರ್ಥದ ಶುದ್ಧ ಮತವನ್ನು ಸ್ಥಾಪಿಸಲು ರುದ್ರಾದಿಗಳಿಗೆ ಏಕೆ ಆಜ್ಞಾಪಿಸಲಿಲ್ಲ ? ಅಂದರೆ–ಅವರಲ್ಲಿ ಅಜ್ಞಾನಾದಿ ದೋಷಗಳು ಕಂಡಿರುವದ ರಿಂದ, ಅವರಿಂದ ಸಚ್ಛಾಸ್ತ್ರಗಳನ್ನೆಲ್ಲ ಸಂಗ್ರಹಿಸಿ ಇಂಥ ಪರಿಶುದ್ಧವಾದ ಸಿದ್ಧಾಂತರೂಪದ ಮತವನ್ನು ನಿರ್ಮಿಸುವದು ಶಕ್ಯವಿರಲಿಲ್ಲೆಂಬುದೇ ಅಭಿ ಪ್ರಾಯವು. ಮತ್ತು ವೇದಾದಿ ಸಚ್ಛಾಸ್ತ್ರಗಳಿಗೆಲ್ಲ ಅಪಾರ್ಥವನ್ನು ಕಲ್ಪಿಸಿ ಭ್ರಷ್ಟಗೊಳಿಸಿರುವದು, ಆ ಗ್ರಂಥಗಳಿಗೆಲ್ಲ ಅಭಿಮಾನಿಗಳಾದ ಶ್ರೀ ಭಾರತಿ ದೇವಿಯರಿಗೆ ಅವಮಾನಗೊಳಿಸಿದಂತಾಗಿದ್ದುದರಿಂದ, ಅಂಥ ಅವಮಾನದ ಸೇಡನ್ನು ಪೂರ್ಣ ತೀರಿಸಿಕೊಳ್ಳಬೇಕಾದ್ದು ಸಾಕ್ಷಾತ್ ವಾಯುದೇವರದೇವೆ ಕೇವಲ ಕರ್ತವ್ಯವಾಗಿದ್ದ ಕಾರಣದಿಂದ, ಅವರು ಸ್ವತಃ ತಾವೇ ಬಂದು ಈ ಮಹತ್ಕಾರ್ಯವನ್ನು ಕೊನೆಗಾಣಿಸಿ, ಆ ಕುಪಂಡಿತರಾದ ವಾದಿಗಳನ್ನು ಸಂವಾದ ರೂಪದ ಸಮರದಲ್ಲಿ ವಾಗ್ವಜ್ರಗಳೆಂಬ ಶಸ್ತ್ರಗಳಿಂದ ಸಂಪೂರ್ಣವಾಗಿ ಖಂಡಿಸಿಬಿಟ್ಟರು. ಇಷ್ಟ ಸಾಹಸವು ರುದ್ರಾದಿಗಳಿಂದ ಸಾಧ್ಯವಿರಲಿಲ್ಲ ಹಾಗೂ ವೇದಾದಿ ಸಚ್ಛಾಸ್ತ್ರಗಳನ್ನು ಶುದ್ಧಪಡಿಸಿ ಉದ್ಧಾರಗೈಯ್ಯುವದು ಶ್ರೀ ಹರಿ ವಾಯುಗಳದೇ ಪ್ರಾಮುಖ್ಯವಾದ ಕಾರ್ಯವಾಗಿರುವದು. ವಾಯುದೇವರು ಅವ್ಯಕ್ತ ತತ್ವದಿಂದ ( ಪ್ರಕೃತ್ಯಾಭಿಮಾನಿಯಾದ ಸಾಕ್ಷಾಚ್ಛ್ರೀರಮಾದೇವಿಯ ರಿಂದ) ಉತ್ಪನ್ನವಾದಂಥ ಮಹತತ್ವವೇ ಶರೀರವಾಗುಳ್ಳವರಾದುದರಿಂದ, ಅವರಲ್ಲಿ ಅಜ್ಞಾನ, ಅಹಂಕಾರ, ಅಭಿಮಾನಾದಿ ಯಾವ್ಯಾವ ದೋಷಗಳಿಗೂ ಎಷ್ಟೆಷ್ಟೂ ಆಸ್ಪದವಿರದಿರುವದರಿಂದಲೇ, ಅಂಥ ಪವಿತ್ರತರ ದೇಹಿಗಳಲ್ಲಿ ಕಲ್ಯಾದಿ ದೈತ್ಯರಪ್ರವೇಶಕ್ಕೆ ಯಾವ ಕಾಲದಲ್ಲೂ ಸುತರಾಂ ಅವಕಾಶವಿಲ್ಲ. ಅಂತೆಯೇ, ಅವರು ವಿಜ್ಞಾನ, ಸದ್ಭಕ್ತ್ಯಾದಿ ಸೌಭಾಗ್ಯಗಳಿಂದ ಪರಿಪೂರ್ಣ ರಾಗಿದ್ದು, ಅವರ ಹೆಸರುಗೊಂಡ ಮಾತ್ರದಿಂದಲೇ ಕಲ್ಯಾದಿ ದೈತ್ಯರ ಸಮು ದಾಯವು ಬೆದರಿ ಆ ಸ್ಥಳದಲ್ಲಿ ನಿಲ್ಲದೆ ಪಲಾಯನ ಗೈಯ್ಯುವದು.

ನಿರ್ದುಷ್ಟಜ್ಞಾನಾನಂದಾದಿ ಗುಣಪೂರ್ಣನಾದ ಶ್ರೀಹರಿಯ ಸಂಬಂಧವ ಸಕಲ ತತ್ವಗಳೂ ನಿರ್ದುಷ್ಟವಾದವೇ ಆಗಿದ್ದು, ಅವನ್ನು ಮತಪ್ರಕ್ರಿಯ ಕ್ಕನುಸರಿಸಿ ಸ್ಥಾಪನಗೈಯ್ಯತಕ್ಕವರೂ ನಿರ್ದೋಷಿಗಳಾಗಿದ್ದರೇನೆ ಆ ಮತ ಸ್ಥಾಪನೆಯು ಪೂರ್ಣ ಜಗನ್ಮಾನ್ಯವಾಗುವದು. ಈ ಹೇತುದಿಂದ ಭಗವಂತನು ತನ್ನ ಶುದ್ಧವಾದ ತತ್ವವನ್ನು ಜಗತ್ತಿಗೆ ಬೋಧಿಸಲು ಸರ್ವತೋಪರಿ ಪರಿ ಶುದ್ಧರಾದ ವಾಯುದೇವರಿಗೇನೆ ಆಜ್ಞಾಪಿಸಿದನು. ॥ ೨೩ ॥

**ಪದ:— ಅರ್ಭಕತನವನೀಗಿ ಬದರಿಯಲಿ ಮಧ್ವಮುನಿ |**
**ನಿರ್ಭಯದಿ ಸಕಲ ಶಾಸ್ತ್ರಾರ್ಥ ಪಠಿಸಿ ||**
**ಉರ್ಬಿಯೊಳು ಆಮ್ನಾಯದ ತತ್ವಮಾರ್ಗವನು |**
**ಸರ್ಬ ಸುಜನರಿಗೆ ಅರುಹಿದ ಮೋದದಿ ॥ ೨೪ ॥**

**ಟೀ. ತಾ. :—** “ **ವಾಸುದೇವಾಖ್ಯ** ” ಈ ಶ್ರೇಷ್ಠದೇವತಾ ಶಿಶುವು ಬಾಲ್ಯಾವಸ್ಥೆಯ ನಂತರದ ಕೌಮಾರದೆಶೆಯ ಪ್ರಾರಂಭದಲ್ಲಿಯೇ ಉಪನೀತ (ಮೌಂಜಿಬಂಧನ) ರಾಗಿ, ಮುಂದೆ ೭ ವರ್ಷಕ್ಕೆ ಅಂದರೆ, ತಮ್ಮ ೧೨ನೇ ವರ್ಷದ ವಯಸ್ಸಿನಲ್ಲಿ ಶ್ರೇಷ್ಠ ಯತಿಗಳಾದ ‘**ಶ್ರೀಮದಚ್ಯುತ ಪ್ರೇಕ್ಷಾಖ್ಯ**’ ಗುರುಗಳಿಂದ ಸನ್ಯಾಸ್ಯಾಶ್ರಮವನ್ನು ಸ್ವೀಕರಿಸಿ “ **ಮಧ್ವ** ” ಅಂದರೆ ‘**ಮೋಕ್ಷಶಾಸ್ತ್ರವನ್ನು ರಚಿಸಿ ಶಿಷ್ಯರಿಗೆ ಬೋಧಿಸಿ ವಿಸ್ತಾರಪಡಿಸಿದವರು**’ ಎಂಬ ಅನ್ವರ್ಥಕ ಮತ್ತು ಮಹಾ ಪವಿತ್ರವಾದ ಯತ್ಯಾಶ್ರಮದ ನಾಮಧೇಯ ವುಳ್ಳವರಾಗಿ ಸ್ವಲ್ಪ ಕಾಲದಲ್ಲಿಯೇ ಭಗವಾನ್ ‘ **ಶ್ರೀ ನರನಾರಾಯಣರ** ’ ವಾಸಸ್ಥಾನವಾದ ಮೋಕ್ಷಪ್ರಾಯದ ಹಿರಿಯ ‘ **ಬದರಿಕಾಶ್ರಮ** ’ ಕ್ಕೆ ಬಿಜ ಯಂಗೈದು, ಅಲ್ಲಿ ಯೋಗಾಸನದಿಂದ ಬದರಿ ( ಬೋರೆ ) ವೃಕ್ಷದ ಛಾಯದಡಿ ಯಲ್ಲಿ ಪ್ರಾರಬ್ಧ ಕರ್ಮನಿಶ್ಶೇಷರಾಗಿ ಬಿಂಬಧ್ಯಾನಾಸಕ್ತರಾದ ಮೌನೀಶ್ವರ ರಿಂದ ಪರೀವೃತನಾಗಿ ಅವರಿಂದ ಸೇವೆಯನ್ನು ಸ್ವೀಕರಿಸುತ್ತ ಕುಳಿತಿದ್ದ ಶ್ರೀಮದ್ವೇದವ್ಯಾಸಾಖ್ಯ ಭಗವಂತನ ಸನ್ನಿಧಾನವನ್ನೈದಿದರು. ಆ ಜ್ಞಾನಾ ನಂದಾದಿ ಸತ್ಕಲ್ಯಾಣಗುಣಪೂರ್ಣನಾದ ಶ್ರೀಮದ್ಬಾದರಾಯಣದೇವರ ನಿಜ ಶಿಷ್ಯತ್ವದ ದೀಕ್ಷೆಯಿಂದ, ಅದ್ವೈತಾದಿ ಏಕವಿಂಶತಿ ಕುಮತಗಳನ್ನೂ, ತತ್ಪ್ರತಿ ಪಾದಕರಾದ ಅಜ್ಞಾನ, ಸಂದೇಹಜ್ಞಾನ, ವಿಪರೀತಜ್ಞಾನಗಳುಳ್ಳ ಮಾಯ

ಗಳನ್ನೂ ತೃಣದಂತೆ ಬಗೆದು, ಸಕಲ ವೇದ, ಉಪನಿಷತ್ತುಗಳು, ಪಂಚರಾತ್ರ, ಬ್ರಹ್ಮಸೂತ್ರಾದಿ ಶಾಸ್ತ್ರಗಳು, ಶ್ರೀಮದ್ಭಾರತ, **ಭಾಗವತಾದಿ ಪುರಾಣೇತಿ** ಹಾಸಗಳ ರಹಸ್ಯಾರ್ಥಗಳನ್ನು, ಯದ್ಯಪಿ ತಾವು ಪೂರ್ವ ಜನ್ಮಗಳಲ್ಲಿಯೇ ಅಭ್ಯಾಸಗೈದು ಸರ್ವಜ್ಞರಾಗಿದ್ದಾಗ್ಯೂ, ಭಗವತ್ತತ್ವವನ್ನು ಆತನಿಂದ ಇನ್ನೂ ಅಧಿಕವಾಗಿ ತಿಳಕೊಳ್ಳಬೇಕೆಂಬ ಅಪೇಕ್ಷೆಯಿಂದ ಅಭ್ಯಾಸ ಮಾಡಿ, ಹೆಚ್ಚಾದ ಭಗವದನುಗ್ರಹರೂಪದ ಪ್ರಸಾದಕ್ಕೆ ಪಾತ್ರರಾಗಿ, ದುಷ್ಟ ಅಸುರರ ದುರ್ಬೋಧದಿಂದ ಈ ಪೂರ್ವದಲ್ಲಿ ಭ್ರಷ್ಟರಾದ ಸುಜೀವ ವೃಂದವನ್ನು ಪುನಃ ತಮ್ಮ ಸಿದ್ಧಾಂತದ ಬೋಧದಿಂದ ಶುದ್ಧಿಗೈದು ಉದ್ಧರಿಸುವದ್ವಾರ ಆ ಜೀವರಿಗೆ ಸಮ್ಮೋದವನ್ನುಂಟುಮಾಡಲು ತಮ್ಮ ನೂತನವಾದ "**ದ್ವೈತ ಶಾಸ್ತ್ರ**"ವನ್ನು ಬಹು ಸಂಭ್ರಮದಿಂದ ಉಪದೇಶಿಸಿದರು.

**ವಿಶೇಷಾಂಶ :—** ಭಗವದಾಜ್ಞೆಯಂತೆ ಪ್ರಧಾನ ವಾಯುದೇವರು ಈ ಕಲಿಯುಗದಲ್ಲಿ ತಮ್ಮ ತೃತಿಯಾವತಾರವನ್ನು ಮಾಡಲೋಸುಗ ಉದ್ಯುಕ್ತರಾಗಿ ಪಶ್ಚಿಮಸಮುದ್ರದ ದಂಡೆಯಲ್ಲಿರುವ **ಉಡುಪಿ** ಎಂಬ ಪಟ್ಟಣಕ್ಕೆ ಸಮೀಪದಲ್ಲಿರುವ **ಪಾಜಕಕ್ಷೇತ್ರ**ವೆಂಬ ಬಹು ಪವಿತ್ರವಾದ ಸ್ಥಳದಲ್ಲಿ ತುಳುವು ಭಾಷೆಯನ್ನಾಡುತ್ತಿದ್ದ ಬಡಬ್ರಾಹ್ಮಣೋತ್ತಮ ದಂಪತಿಗಳಿಂದ ಶಕೆ ೧೧೯೯ನೇ ವಿಳಂಬಿನಾಮ ಸಂವತ್ಸರದ ಆಶ್ವಿಜ ಶುದ್ಧ ವಿಜಯದಶಮಿಯ ಶ್ರೇಷ್ಠ ಮುಹೂರ್ತದಲ್ಲಿ ವಿಜಯಶ್ರೀಯನ್ನೊಲಿಸಿಕೊಂಡು ಅವತರಿಸಿ '**ವಾಸುದೇವ**' ಅಂದರೆ '**ಪ್ರಪಂಚದೊಳಗಿರತಕ್ಕ ಪ್ರಾಣಿ ಸಮೂಹದಲ್ಲಿ ಚೇಷ್ಟಾಪ್ರದರಾಗಿರತಕ್ಕವರು**' ಎಂಬ ಯಥಾ ಯೋಗ್ಯಾಭಿಪ್ರಾಯದ ನಾಮಧ್ಯೇಯವುಳ್ಳವರಾದರು.

ದ್ವಾತ್ರಿಂಶತ್ಸಲ್ಲಕ್ಷಣೋಪೇತರಾಗಿ ಶರತ್ಕಾಲದ ಪೌರ್ಣಿಮೆಯ ಅಹ್ಲಾದಕರ ಚಂದ್ರಮನ ಕಾಂತಿಯುಳ್ಳ ವದನದಿಂದ, ಮುಗುಳುನಗೆಯ ರೂಪದ ಅಮೃತಕಿರಣಗಳನ್ನು ಪ್ರೇಕ್ಷಕವರ್ಗದ ಸುಜೀವಸಮುದಾಯದ ಮೇಲೆ ಹರಡುತ್ತಿರುವ ಈ ಮಹಾ ಪುರುಷರನ್ನು ಪಡೆದಿರುವ, ವಸಿಷ್ಠ ಅರುಂಧತಿಯರೋ, ಅತ್ರಿ ಅನಸೂಯರೋ ಎಂಬಂತಿರುವ, ನಡುಮನೆಭಟ್ಟರು ವೇದವತಿಯಮ್ಮನವರೆಂಬ ತಂದೆ ತಾಯಿಗಳು ಏನು ಧನ್ಯರೋ! ಎಷ್ಟು ಮಾನ್ಯರೋ! ॥೨೪॥

**ಪದ :— ಸರ್ವೇಶ ಹರಿ ವಿಶ್ವವೆಲ್ಲವೂ ಪುಸಿಯೆಂಬ ।**
**ದುರ್ವಾದಿಗಳ ಮತವ ನೆರೆ ಖಂಡಿಸಿ ॥**
**ಸರ್ವೇಶ ಹರಿ ವಿಶ್ವ ಸತ್ಯವೆಂದರುಹಿದ ।**
**ಶರ್ವಾದಿ ಗಿರ್ವಾಣ ಸಂತತಿಯಲಿ ॥ ೨೫ ॥**

**ಟೀ. ತಾ.** :— ಅನಂತಕೋಟಿ ಬ್ರಹ್ಮಾಂಡನಾಯಕನೂ, ದೇವತಾ ಸಾರ್ವಭೌಮನೂ, ಅಣುಜೀವ ಮೊದಲಾಗಿ ಮಹದ್ಬ್ರಹ್ಮಾಂಡ ಪರ್ಯಂತ ಸರ್ವತ್ರದಲ್ಲೂ ಓತಪ್ರೋತವಾಗಿ ವ್ಯಾಪ್ತನೂ, ಕೇವಲ ಸತ್ಯನೂ, ಶಾಶ್ವತನೂ ಆದ ಶ್ರೀ ಹರಿಯು ಸರ್ವೋತ್ತಮನಲ್ಲ; ಆತನಿಂದ ಸೃಷ್ಟವಾದ ಈ ಜಗತ್ತು ಮಿಥ್ಯಾಭೂತವಾದದ್ದೆಂದು ಪ್ರದ್ವೇಷ ಮೂಲಕವಾಗಿ ಮಹಾ ದುಷ್ಟ ಹಟದಿಂದ ಸಾಧಿಸಿದ ಅಜ್ಞಾನ, ಮೋಹಕಜ್ಞಾನ, ವಿಪರೀತಜ್ಞಾನ ಮೂರ್ತಿಗಳಾದ ೨೧ ಕುವಾದಿಗಳ ಮತಾನುಯಾಯಿಗಳನ್ನು ವಾದದಲ್ಲಿ ಸ್ವಕಪೋಲವಲ್ಲದ ಕೇವಲ ವೇದಶಾಸ್ತ್ರ ಪುರಾಣಗಳ ವಚನಗಳಿಂದಲೇ ನಿಗ್ರಹಿಸಿ, ಶ್ರೀ ಹರಿಯೇ ಸರ್ವೋತ್ತಮನು. ಆತನಿಂದ ಸೃಷ್ಟವಾದ ಈ ಬ್ರಹ್ಮಾಂಡವೂ, ಪಂಚ ಭೂತಗಳೂ, ಕಾಲ, ಕರ್ಮಗಳೂ ಸತ್ಯವೇ ಆಗಿರತಕ್ಕವು. ಇದು ಪ್ರತ್ಯಕ್ಷ ಸಿದ್ಧವು. ಸತ್ಯವಾದ ವಸ್ತುವಿನಿಂದ ಮಿಥ್ಯಾತ್ಮಕವಾದ ವಸ್ತುವಿನ ಸೃಷ್ಟಿಯು ಜಗತ್ತಿನಲ್ಲಿ ಕಂಡಿಲ್ಲ. ಭಗವಂತನ ಸೃಷ್ಟಿಯು ಎಷ್ಟೆಷ್ಟೂ ವ್ಯರ್ಥವಾದದ್ದಲ್ಲ. ಸೃಷ್ಟವಸ್ತುಗಳೆಲ್ಲಕ್ಕೂ ಒಂದೊಂದು ಪ್ರಯೋಜನವು ಇದ್ದೇ ಇರುವದು. ಇಂಥ ಸತ್ಯ ತತ್ವಗಳನ್ನು ಪ್ರತಿಪಾದನ ಪೂರ್ವಕವಾಗಿ ಸ್ಥಾಪಿಸಿ, ರುದ್ರದೇವರೇ ಮೊದಲಾದ ದೇವತೆಗಳ ಸಂತತಿಗೆಲ್ಲ ಬೋಧಿಸಿದರು. ॥ ೨೫ ॥

**ಪದ :— ಏಕವಿಂಶತಿ ಕುಭಾಷ್ಯಗಳ ಬೇರನು ತರಿದು ।**
**ಶ್ರೀಕರಾರ್ಚಿತನೊಲುಮೆ ಶಾಸ್ತ್ರ ರಚಿಸಿ ॥**
**ಲೋಕತ್ರಯದೊಳಿದ್ದ ಸುರರು ಆಲಿಸುವಂತೆ ।**
**ಆ ಕಮಲನಾಭ ಯತಿನಿಕರಕೊರೆದ ॥ ೨೬ ॥**

**ಟೀ. ತಾ.** :— ವಾಯುಸತೀರ್ಥದಂತೆ ಕೇವಲ ಅಗ್ರಾಹ್ಯವಾಗಿದ್ದ ದುರ್ಮತಪ್ರವರ್ತಕರ ೨೧ ಕುಭಾಷ್ಯಗಳನ್ನು ಸಕಲ ವೇದ, ಶಾಸ್ತ್ರ, ಪುರಾಣ, ವಚನಗಳಿಂದಲೇ ಖಂಡಿಸಿ, ಶ್ರೀ ಮದ್ವೇದವ್ಯಾಸದೇವರಿಗೆ ಪೂರ್ಣ ಸಮ್ಮತ

ವಾದ ಅಭಿಪ್ರಾಯದಿಂದ, " **ಅಲ್ಪಾಕ್ಷರಂ[೧], ಅಸಂಧಿಗ್ಧಂ[೨], ಸಾರವತ್[೩], ವಿಶ್ವತೋಮುಖಂ[೪], ಅಸ್ತೋಭಂ[೫], ಅನವದ್ಯಂ[೬]**" ಎಂಬ ಶ್ರೀ ಬ್ರಹ್ಮಸೂತ್ರಗಳಿಗಿರುವ ಸಲಕ್ಷಣಗಳುಳ್ಳ, ಹಾಗೂ ಜೀವೇಶ್ವರ ಭೇದವನ್ನು ಪ್ರತಿಪಾದಿಸುವ ಹೊಸದೊಂದು ಶಾಸ್ತ್ರವನ್ನು ನಿರ್ಮಿಸಿ, ಬದರಿಕಾಶ್ರಮವಾಸಿಯಾದ ಶ್ರೀ ಮದ್ವೇದವ್ಯಾಸಾಖ್ಯ ಬಾದರಾಯಣದೇವರಿಗೆ ಸಮರ್ಪಿಸಿ ಶ್ರೀ ಮದಾಚಾರ್ಯರು ಕೃತಾರ್ಥರಾದರು.

ಶ್ರೀಮಧ್ವಾಚಾರ್ಯರಸೂತ್ರಭಾಷ್ಯವು ಸಕಲ ಶ್ರುತಿ, ಸ್ಮೃತಿ, ಶಾಸ್ತ್ರಗಳ ಆಧಾರಕೊಟ್ಟು ಪ್ರತಿಪಾದಿತವಾದುದರಿಂದ, ಅದೇ ಶ್ರೀಹರಿಗೆ ಕೇವಲ ಸಮ್ಮತವಾದದ್ದು. ಅಂತೆಯೇ, ಬಹು ಪರಿಶುದ್ಧವಾದದ್ದು. ಉಳಿದವು ಸರ್ವಥಾ ಅಲ್ಲ. ಏಕೆಂದರೆ—ಶ್ರೀ ಮದ್ಬ್ರಹ್ಮಸೂತ್ರಕಾರರು ಶ್ರೀ ಮದ್ವ್ಯಾಸದೇವರು. ಅವರಲ್ಲಿ ಶಿಷ್ಯತ್ವವಹಿಸಿ ಶಿಕ್ಷಿತರಾಗಿ, ಆ ಸೂತ್ರಗಳ ಅಧ್ಯಯನಮಾಡಿ ಅಭಿಪ್ರಾಯವನ್ನು ಸರಿಯಾಗಿ ಗ್ರಹಿಸಿ, ತಮ್ಮ ೨೨ನೇ ದ್ವೈತಭಾಷ್ಯವನ್ನು ಶ್ರೀ ಮದಾಚಾರ್ಯರು ರಚಿಸಿದರು. ಅಂದ ಬಳಿಕ, ಮೂಲ ಗ್ರಂಥಕಾರರಿಗೆ ಸಾಕ್ಷಾಚ್ಛಿಷ್ಯರಾಗಿ ಅಭ್ಯಾಸಗೈದು ರಚಿಸಿದ ಸೂತ್ರಭಾಷ್ಯವು ಮೂಲಗ್ರಂಥಕ್ಕೆ ಸುಸಮ್ಮತವಾಗಿರುವಲ್ಲಿ ಸಂದೇಹವೇ ಇಲ್ಲ. ಆದರೆ, ಮೂಲ ಗ್ರಂಥಕಾರರ ಅಭಿಪ್ರಾಯವನ್ನೇ ತಿಳಿಯದಿದ್ದು, ತಾವೇ ಸ್ವಯಂ ಆಚಾರ್ಯರಾಗಿ ತಮ್ಮ ದೋಷಯುಕ್ತವಾದ ಜ್ಞಾನಕ್ಕೆ ಗೋಚರಿಸಿದಂತೆ ಊಹಿಸಿ ಬರೆದ ಭಾಷ್ಯಗಳು ಮೂಲಗ್ರಂಥಕಾರರಿಗೆ ಸಮ್ಮತವಾಗಿರಬಹುದೇ ಎಂಬ ಮಾತನ್ನು ಜ್ಞಾನ

---

**ಟೀಪು :—**

೧. **ಅಲ್ಪಾಕ್ಷರಂ :—**ಎಷ್ಟು ಅಕ್ಷರಗಳಿಂದ ವಿವಕ್ಷಿತಾರ್ಥವು ಸಿದ್ಧಿಯಾಗುವದೋ ಅಷ್ಟೇ ಅಕ್ಷರಗಳು.

೨. **ಅಸಂಧಿಗ್ಧಂ :—** ಸಂಶಯಕ್ಕಾಸ್ಪದವಿರದೆ ಇದೇ ಎಂದು ಹೇಳುವ ನಿಶ್ಚಿತಾರ್ಥವು.

೩. **ಸಾರವತ್ :—** ಅನ್ಯ ಯಾತರಿಂದಲೂ ಲಭ್ಯವಾಗದ ವಿಶಿಷ್ಟಾರ್ಥವು.

೪. **ವಿಶ್ವತೋಮುಖಂ :—** ಬಹುಶಾಖಾನಿರ್ಣಾಯಕತ್ವವು.

೫. **ಕೆಸ್ತೋಭಂ :—**ವ್ಯರ್ಥಾಕ್ಷರರಾಹಿತ್ಯವು.

೬. **ಅನವದ್ಯಂ:—** ನಿರೂಪಣೆಯಲ್ಲಿ ಯಾವ ವಿಧದ ಅಪಶಬ್ದಾದಿಗಳಿಲ್ಲದಿರುವದು.

ಶ್ರೇಷ್ಠರೇ ನಿರ್ಣಯಮಾಡಿ ಹೇಳಲಿ. ಮತ್ತೂ ಏನಂದರೆ–ಯಾವದೇ ಗ್ರಂಥದ ಶುದ್ಧಾಶುದ್ಧಿಗಳು ಆ ಗ್ರಂಥಕರ್ತನ ಜ್ಞಾನಾಜ್ಞಾನಗಳ ಬಲವನ್ನವಲಂಬಿಸಿರುವದು ನಿಜವು. ದ್ವೈತಭಾಷ್ಯಕಾರರು ಅಜ್ಞಾನಾದಿ ದೋಷವಿರಹಿತವಾದ ಮಹತತ್ವವೇ ಶರೀರವಾಗುಳ್ಳ ವಾಯುದೇವರ ಅವತಾರರೆಂಬುದು ವೇದ ಪ್ರಮಾಣಗಳಿಂದ ಸಿದ್ಧವಾದದ್ದು. ಮೂಲರೂಪದಲ್ಲೂ ಶ್ರೀ ರಮಾನಾರಾಯಣರಿಂದ ಸಕಲ ವೇದಾರ್ಥಗಳನ್ನು ತಿಳಿದವರು. ಪ್ರಥಮಾವತಾರರಾದ ಆಂಜನೇಯರು–ಹನುಮಂತದೇವರು ಸೂರ್ಯಾಂತರ್ಗತನಾದ ಶ್ರೀ ಲಕ್ಷ್ಮೀ ನಾರಾಯಣನಿಂದ ಸಕಲ ವೇದಾದಿಗಳರ್ಥವನ್ನು ಅವತಾರ ಹಾಗೂ ಯುಗ ಮರ್ಯಾದೆಗಳನ್ನನುಸರಿಸಿ ಪುನಃ ಅಭ್ಯಾಸಗೈದರು. ದ್ವಿತಿಯಾವತಾರರಾದ ಕೌಂತೇಯರು–ಭೀಮಸೇನದೇವರು ಶ್ರೀ ಕೃಷ್ಣದ್ವಯರಿಂದ (ದ್ವೈಪಾಯನ ಕೃಷ್ಣ ಮತ್ತು ಯಾದವ ಕೃಷ್ಣರಿಂದ) ಸಾಕ್ಷಾತ್ತಾಗಿ ಸಕಲ ವೇದ ಶಾಸ್ತ್ರ ಪುರಾಣಗಳ ರಹಸ್ಯಾರ್ಥಗಳನ್ನು ಕೇಳಿದರು. ಮತ್ತು ಅರ್ಜುನದೇವನನ್ನು ಮುಂದೆಮಾಡಿ ತಾವೂ ಶ್ರೀಕೃಷ್ಣಪರಮಾತ್ಮನಿಂದ ಗೀತೋಪದೇಶವನ್ನೂ ತೆಗೆದುಕೊಂಡರು. ತೃತಿಯಾವತಾರರಾದ ವೇದವತಿಪುತ್ರರು–ಶ್ರೀಮದಾಚಾರ್ಯರು ಶ್ರೀ ಮದ್ವೇದವ್ಯಾಸದೇವರಲ್ಲಿ ಅವತಾರ, ಯುಗಗಳ ಮರ್ಯಾದೆಗಳಿಗನುಸಾರವಾಗಿ ಪುನಃ ಸಕಲ ವೇದಶಾಸ್ತ್ರಗಳನ್ನೋದಿ, ತಮ್ಮ ಸ್ವರೂಪಗುಣವಾದ ಸರ್ವಜ್ಞತ್ವವನ್ನು ಜಗತ್ತಿಗೆ ದೃಕ್ಪಡಿಸಿದರು. ಹೀಗೆ ಈ ಅವತಾರತ್ರಯಗಳಲ್ಲಿಯೂ ಮೂಲರೂಪದಂತೆ ಸಾಕ್ಷಾತ್ ಶ್ರೀಹರಿಯಿಂದಲೇ ಶಿಕ್ಷಿತರಾದ ಈ ಸರ್ವಜ್ಞಮೂರ್ತಿಗಳಿಂದ ರಚಿಸಲ್ಪಟ್ಟ ಗ್ರಂಥಗಳು ಕೇವಲ ಪರಿಶುದ್ಧ ಹಾಗೂ ಭಗವತ್ಸಮ್ಮತವಾದವು ಎಂಬುದರಲ್ಲಿ ಅನ್ಯಥಾ ಇಲ್ಲ. ಉಳಿದ ಭಾಷ್ಯಕಾರರ ವಿಚಾರದಲ್ಲಿ ಈ ಯಾವ ಗುಣ, ಧರ್ಮಗಳೂ ಇಲ್ಲದಿರುವದರಿಂದ, ಅವರ ಗ್ರಂಥಗಳೂ ಭಾಷ್ಯಗಳೂ ಕೇವಲ ಅಗ್ರಾಹ್ಯವಾದವೇ ಆಗಿರುವವು. ಯಾಕಂದರೆ ಅವೆಲ್ಲ ಮೂಲ ಗ್ರಂಥಕರ್ತರಾದ ಶ್ರೀ ಮದ್ವೇದವ್ಯಾಸದೇವರ ಅಭಿಪ್ರಾಯಕ್ಕೆ ಭಿನ್ನವಾದ ತರ್ಕ, ಕುತರ್ಕಗಳಿಂದ ಬರೆದವೇ ಆಗಿರುತ್ತವೆ.

ಹೀಗೆ ಶ್ರೀ ಮದಾಚಾರ್ಯರು ಈ ಕುಭಾಷ್ಯಗಳನ್ನು ನಿರಾಕರಿಸುವ ಮೂಲಕ, ಪಂಚಭೇದ, ತಾರತಮ್ಯಗಳ ಶುದ್ಧವಾದ ಪೀಠದಮೇಲೆ ಸಿದ್ಧಾಂತರೂಪದ ತಮ್ಮ ದ್ವೈತಶಾಸ್ತ್ರವನ್ನು ಯಾವಕಾಲಕ್ಕೂ ಯಾರಿಂದಲೂ ಅಲ್ಲಾ

ಡಿಸಲಾಗದಂತೆ ದೃಢವಾಗಿ ಸ್ಥಾಪಿಸಿ, ಆ ತಮ್ಮ ಸಚ್ಛಾಸ್ತ್ರವನ್ನು ಸತ್ಯಲೋಕದ ವರೆಗಿರುವ ದೇವತೆಗಳೂ ಸಹ ಶ್ರವಣಗೈದು ಮೋದಿಸುವಂತೆ, ತಮ್ಮ ನಿಜ ಶಿಷ್ಯರಾದ ಪದ್ಮನಾಭ, ನರಹರಿ, ಮಾಧವ, ಅಕ್ಷೋಭ್ಯತೀರ್ಥರಿಗೂ, ಉಡುಪಿಯ ವಿಷ್ಣುತೀರ್ಥಾದಿ ಅಷ್ಟಯತಿಗಳಿಗೂ, ಸತ್ಯತೀರ್ಥಾದಿ ಮಿಕ್ಕ ಮೌನೀಂದ್ರರಿಗೂ ಮತ್ತು ತ್ರಿವಿಕ್ರಮ, ನಾರಾಯಣಪಂಡಿತಾಚಾರ್ಯವರ್ಯ ರಿಗೂ ಬೋಧಿಸಿ ಜಗನ್ಮಾನ್ಯರಾಗಿ ಮೆರೆದರು.

**ಪದ :— ಬದರಿಕಾಶ್ರಮಕೆ ಪುನರಪಿ ಪೋಗಿ ವ್ಯಾಸಮುನಿ ।**
**ಪದಕೆರಗಿ ಸಕಲ ವೇದಾರ್ಥಗಳನು ॥**
**ಪದುಮನಾಭಿನ ಮುಖದಿ ತಿಳಿದು ಬ್ರಹ್ಮತ್ವಯೈ ।**
**ದಿದ ಮಧ್ವಮುನಿರಾಯಗಭಿನಮಿಪೆನು ॥ ೨೭ ॥**

**ಟೀ. ತಾ. :—** ಶ್ರೀಮದಾಚಾರ್ಯರು ೨ನೇ ಸಲ ಮಹಾ ಬದರಿಯ ಯಾತ್ರೆಗೆ ತಮ್ಮ ವಾಯುವೇಗದಿಂದ ಹೋಗಿ, ಅಲ್ಲಿ ಮುನಿಶ್ರೇಷ್ಠರಿಂದ ಪರಿವೃತನಾಗಿ ವೇದೋಕ್ತ ತತ್ವಗಳನ್ನುಪದೇಶಿಸುತ್ತ ಜಿತಾಸನದ ಮೇಲೆ ವಿರಾಜಿಸುತ್ತ, ರಮಾಬ್ರಹ್ಮಾದಿ ಜಗತ್ತಿಗೆಲ್ಲ ಪರಾತ್ಪರ ಗುರುವಾದ ಶ್ರೀ ಮದ್ವೇದವ್ಯಾಸದೇವರನ್ನು ಕಣ್ದಣಿಯದಲೆ ನೋಡಿ, ಅವರ ಚರಣಾರವಿಂದ ಗಳ ಮೇಲೆ ತಮ್ಮ ಅತಿ ಪವಿತ್ರವಾದ ತನುವನ್ನಿಡಾಡಿ, ಅವರ ವರ, ಅಭಯ ಮುದ್ರಾ ಹಸ್ತಗಳಿಂದ ಬಹು ಪ್ರೇಮಪೂರ್ವಕ ಉಧೃತರಾಗಿ, ಕೆಲವು ಕಾಲ ಅಲ್ಲಿ ವಾಸಿಸಿ, ಅವರಿಂದ ಸಕಲವೇದ. ಶಾಸ್ತ್ರಗಳ ಹೆಚ್ಚಿನಾರ್ಥವನ್ನು ಗ್ರಹಣ ಮಾಡಿ ತಮ್ಮ ಅಸಾಧಾರಣವಾದ ಸರ್ವಜ್ಞತ್ವದಿಂದ ಸಿದ್ಧಾಂತರೂಪದ ದ್ವೈತ ಶಾಸ್ತ್ರವನ್ನು ವಿರಚಿಸಿ ಅದರ ಪ್ರತಿಫಲವಾಗಿ ಬ್ರಹ್ಮಪದವನ್ನು ಸಂಪಾದಿಸಿದ ಶ್ರೀಮನ್ಮಧ್ವಮುನೀಶ್ವರರಿಗೆ ದಂಡವತ್ಪ್ರಣಾಮಗೈಯುವೆನು. ॥ ೨೭ ॥

**ಪದ :— ಜಯ ಜಯತು ದುರ್ವಾದಿ ಮತತಿಮಿರಮಾರ್ತಾಂಡ ।**
**ಜಯ ಜಯತು ವಾದಿಗಜ ಪಂಚಾನನ ॥**
**ಜಯ ಜಯತು ಚಾರ್ವಾಕ ಗರ್ವಪರ್ವತ ಕುಲಶ ।**
**ಜಯ ಜಯತು ಜಗನ್ನಾಥ ಮಧ್ವನಾಥಾ ॥ ೨೮ ॥**

**ಟೀ. ತಾ.** :—ಇಲ್ಲಿಯ ವರೆಗೆ ಶ್ರೀಮದಾಚಾರ್ಯರ ಮಹಾ ಮಹಿಮೆಗಳನ್ನು ವರ್ಣಿಸಿ, ಈಗ ೨ ನುಡಿಗಳಿಂದ ಅವರ ವಾದಿನಿಗ್ರಾಹಕ ಮಹಾ ಶಕ್ತಿಯನ್ನು ಶ್ಲಾಘಿಸುತ್ತಾರೆ. ಆ ಮಹಾತ್ಮರಲ್ಲಿ ಜಗದ್ಗುರುತ್ವ, ಜಗನ್ನಿಯಾಮಕತ್ವ, ಜಗದುದ್ಧಾರಕತ್ವಗಳ ಏಕೀಕರಣದಿಂದ, ರಾಜರಾಜೇಶ್ವರನ ಸನ್ನಿಧಿಯಲ್ಲಿ ಭಟ್ಟಂಗಿಗಳು ಅವನ ಬಿರುದಾವಳಿಗಳನ್ನು ಹೊಗಳುವಂತೆ, ಸುರಸಾರ್ವಭೌಮರಾದ ಈ ಮಹಂತರ ಮಹಾ ಸನ್ನಿಧಾನದಲ್ಲಿ ಶ್ರೀ ಶ್ರೀಪಾದರಾಜ ಯತಿಗಳು "**ಜಯಜಯತು**" ಎಂದು ಭಟ್ಟಂಗಿಯನ್ನು ಚತುರ್ವಾರ ಉಗ್ಗಡಿಸಿ ಹೊಗಳಿದ್ದಾರೆ. ಅದರ ಅಭಿಪ್ರಾಯವೇನೆಂದರೆ–ಒಂದೇ ಪದವನ್ನು ಒಮ್ಮೆ ಹೇಳುವದು ಸಾಮಾನ್ಯಾರ್ಥದಿಂದಲೂ, ೨ ಸಲ ಹೇಳುವದು ಆದರಾರ್ಥದಿಂದಲೂ, ೩ ಸಲ ಹೇಳುವದು ನಿಶ್ಚಿತ, ಪ್ರಮಾಣಾರ್ಥದಿಂದಲೂ, ನಾಲ್ಕು ಸಲ ಹೇಳುವದು ಮಹಪುರುಷಾರ್ಥದಿಂದಲೂ ಎಂದು ತಿಳಿಯತಕ್ಕದ್ದು ಈ ಪದವು ಇಲ್ಲಿ ನಾಲ್ಕು ಸಲ ಹೇಳಲ್ಪಟ್ಟ ಕಾರಣ, ಅದರಿಂದ ವರ್ಣಿತರಾದ ಶ್ರೀಮದಾಚಾರ್ಯರ ಕಥಾಪಠಣದಿಂದ ಸುಜೀವರಿಗೆ ಯೋಗ್ಯವಾದ ಜಯರೂಪದ ಮೋಕ್ಷಪ್ರಾಪ್ತಿಯುಂಟಾಗುವದೆಂದೂ, ಅಂಥ ಮೋಕ್ಷಪ್ರದತ್ವವು ಈ ಮಹಾತ್ಮರಲ್ಲೇ ಉಂಟೆಂಬುದೂ ದ್ಯೋತಕವಾಗುವದು. ಶ್ರೀಮದಾಚಾರ್ಯರು ತಮ್ಮ ಅಸದೃಶ ಜ್ಞಾನ, ಭಕ್ತಿ, ವೈರಾಗ್ಯಾದಿ ಅತಿಶ್ರೇಷ್ಠ ಗುಣಗಳಿಂದ ಇಡೀ ಬ್ರಹ್ಮಾಂಡದಲ್ಲೇನೆ ಪೂರ್ಣ ಜಯಶೀಲರಾದವರು. ದುರ್ವಾದಿಗಳ ೨೧ ಕುಮತಗಳೆಂಬ ಕತ್ತಲೆಯ ಸಮೂಹವನ್ನು ನಿಲ್ಲದೋಡಿಸಿದ ಪ್ರಖರ ವಿಜ್ಞಾನ ಭಾಸ್ಕರರು. ತಮ್ಮ ಸತ್ಸಿದ್ಧಾಂತದ ವಾದವನ್ನು ಪ್ರತಿಭಟಿಸಲುಬಂದ ದಿಗ್ಗಜಗಳಂತಿರುವ ವಾದಿಸಮೂಹವನ್ನು ನಿಗ್ರಹಿಸುವಲ್ಲಿ ಪಂಚಾನನ ಸದೃಶರಾಗಿದ್ದವರು. ಸರ್ವಕ್ಕೂ ನಾಸ್ತಿ ನಾಸ್ತಿಯೆಂದು ಹೇಳುತ್ತಿದ್ದ ನಾಸ್ತಿಕವಾದವೆಂಬ ಪರ್ವತವನ್ನು ಸಹಸ್ರಶಃ ಛೇದಿಸುವಲ್ಲಿ ವಜ್ರಾಯುಧದಂತಿಹರು. ಈ ಜಗತ್ತಿನ ಈಶತ್ವ, ವಶತ್ವ, ನಿಯಮನತ್ವ, ಪಾಲನತ್ವ, ಗತಿಪ್ರದತ್ವಾದಿಗಳು ಈ ಮಹಾತ್ಮರಲ್ಲೂ ಕಾಣುತ್ತಿರುವ ಕಾರಣ '**ಜಗನ್ನಾಥ**' ಎಂಬ ಸಾರ್ವಭೌಮತ್ವದ ಶ್ರೇಷ್ಠ ಬಿರುದು ಇವರಿಗೂ ಅನುರೂಪವಾದದ್ದು. ವೇದಪುರುಷನು ಈ ದೇವತಾಶ್ರೇಷ್ಠರ ಮೂಲ ಹಾಗೂ ಅವತಾರತ್ರಯಗಳ ನಾಮ್ನ ಮತ್ತು ಮಹ ಮಹಾತ್ಮ್ಯಗಳನ್ನು "**ಪಂಚಚರ್ಾತ್ಮಕ ಬಳಿತ್ಥಾಸೂಕ್ತ**"

ದಲ್ಲಿ ಸ್ಪಷ್ಟವಾಗಿ ವರ್ಣಿಸಿರುವಂತೆ, ಇವರ ಪ್ರಥಮಾವತಾರದ ನಾಮವಾದ "**ಹನುಮಂತ**" ಎಂಬ ಪದವು, "**ನಿಸ್ಸಂದೇಹಾತ್ಮಕ ಹಾಗೂ ಬಹು ಸಮೀಚೀನವಾದ ಜ್ಞಾನಪೂರ್ಣಾರ್ಥ**" ದ್ಯೋತಕವಾಗಿಯೂ, ದ್ವಿತಿಯಾವತಾರದ ನಾಮವಾದ "**ಭೀಮಸೇನ**" ಎಂಬ ಪದವು, "**ಸಕಲ ವೇದ, ಇತಿಹಾಸ, ಪುರಾಣ, ಪಂಚರಾತ್ರ್ಯಾದಿ ಶ್ರೀವಿಷ್ಣುಪರಾರ್ಥ ಸಚ್ಛಾಸ್ತ್ರಗಳನ್ನು ಸರ್ವದಾ ವಿಚಾರ ಮಾಡುತ್ತ ದುಷ್ಟನಿಗ್ರಹ, ಶಿಷ್ಟಪರಿಪಾಲನಕರ್ತಾರ್ಥ**" ದ್ಯೋತಕವಾಗಿಯೂ, ತೃತಿಯಾವತಾರದ ನಾಮವಾದ "**ಮಧ್ವ**" ಎಂಬ ಪದವು, "**ಅಸದೃಶ ಪ್ರಕಾಶಮಾನ ಹಾಗೂ ಮೋಕ್ಷಪ್ರದ ಶಾಸ್ತ್ರಕಾರಾರ್ಥ**"ದ್ಯೋತಕವಾಗಿಯೂ ಪ್ರತಿಪಾದ್ಯವಾಗಿದ್ದು ಸಕಲ ಜೀವರ ಸಂರಕ್ಷಣೆಯು ಇವರ ಕರ್ತೃತ್ವಕ್ಕೇನೆ ಅಧೀನವಾದಕಾರಣ '**ನಾಥ**' ಪದವು ಶ್ರೀ ಹರಿಯಂತೆ ಇವರಲ್ಲೂ ಅನ್ವರ್ಥಕವಾದದ್ದೆಂದು ಇವರಿಗೆ "**ಮಧ್ವನಾಥಾ**" ಎಂಬ ಪದಪ್ರಯೋಗವನ್ನು ಮಹಾ ಜ್ಞಾನಿಗಳಾದ ಈ ಗ್ರಂಥಕರ್ತರು ಮಾಡಿರುವದಕ್ಕೆ ಅಭಿಪ್ರಾಯವು. || ೨೮ ||

**ಪದ :— ತುಂಗಕುಲ ಗುರುವರನ ಹೃತ್ಕಮಲದೊಳು ನೆಲಸಿ |**
**ಭಂಗವಿಲ್ಲದ ಸುಖವ ಸುಜನಕೆಲ್ಲ ||**
**ಹಿಂಗದೆ ಕೊಡುವ ಗುರುಮಧ್ವಾಂತರ್ಯಾಮಿ ಶ್ರೀ |**
**ರಂಗವಿಠ್ಠಲನೆಂದು ನೆರೆನಂಬಿರೋ || ೨೯ ||**

**ಟೀ. ತಾ.** :– ಈ ಪೃಥ್ವಿಯಮೇಲಿನ ಯಾವತ್ತೂ ಮತಗಳಲ್ಲೇನೆ ಅತಿ ಕ್ಷೇಮಕರವಾದ ಮತ್ತು ಸತ್ಯವಾದ, ಅಂತೆಯೇ ಉತ್ತಮವಾದ ಸಿದ್ಧಾಂತವೆನಿಸಿದ ದ್ವೈತಶಾಸ್ತ್ರ (ಮತ) ಸ್ಥಾಪಕರಾದ, ಶ್ರೀ ಮನ್ಮಧ್ವಾಚಾರ್ಯರ ಪವಿತ್ರವಾದ ಹೃತ್ಕಮಲಮಧ್ಯದಲ್ಲಿ ನಿತ್ಯವಾಸಮಾಡಿದ ಶ್ರೀರಮಾರಮಣನಾದ '**ರಂಗವಿಠ್ಠಲಾತ್ಮಕ ಹರಿಯು**', ಶ್ರೀವಾಯುದೇವರೇ ನಮ್ಮ ನಿಜಜನಕರು, ಗತಿಗೋತ್ರರು, ಅನಿಮಿತ್ತಬಾಂಧವರು ಎಂದು ದೃಢಮನಸಿನಿಂದ ನಂಬಿ ಭಜಿಸುವ ಸುಜೀವರನ್ನು, ಈ ಜನನ ಮರಣಾಖ್ಯವಾದ ದುಃಖಮಯ ಸಂಸಾರ ಬಂಧನದಿಂದ ಬಿಡಿಸಿ, ನಿರ್ದುಷ್ಟವಾದ ಸುಖಸಂಪೂರ್ಣಸ್ಥಾನವೆನಿಸುವಂಥ ಮೋಕ್ಷವನ್ನು ಅವರಿಗೆ ಅನುಗ್ರಹಿಸುವನು. ಈ ಮಾತಿಗೆ, ವಾಯುದೇವರನ್ನು

ನೇಬಿ ಪರಮಪುರುಷಾರ್ಥವನ್ನು ಪಡೆದ ಸಕಲ ಭಗವದ್ಭಕ್ತರೂ ಸಾಕ್ಷಿಯಾಗಿ ರುವರು. ಆದ್ದರಿಂದ, ಇಂಥ ಮಹಾತ್ಮರನ್ನು ತಪ್ಪದೆ ಪ್ರತಿ ಮುಹೂರ್ತದ ಲ್ಲಿಯೂ ಧ್ಯಾನಮಾಡುವದು ಮುಮುಕ್ಷುಗಳ ಮುಖ್ಯ ಸಾಧನವಾದುದರಿಂದ, ಈ ದೇವತಾಸಾರ್ವಭೌಮರ ಧ್ಯಾನಶ್ಲೋಕವು ಇಲ್ಲಿ ಕೊಡಲಾಗಿದೆ.

**ಧ್ಯಾನಶ್ಲೋಕ :—**

**" ಯೋ ವಿಪ್ರಲಂಭವಿಪರೀತಮತಿ ಪ್ರಭೂತ |**
**ವಾದಾನ್ನಿರಸ್ಯ ಕೃತವಾನ್ಭುವಿ ತತ್ತ್ವವಾದಂ ||**
**ಸರ್ವೇಶ್ವರೋ ಹರಿರಿತಿ ಪ್ರತಿಪಾದಯಂತ |**
**ಮಾನಂದತೀರ್ಥಮುನಿವರ್ಯಮಹಂ ನಮಾಮಿ ||೧||**

ಶ್ರೀಗುರುಮಧ್ವೇಶಾರ್ಪಣಮಸ್ತು.

## ಫಲಶ್ರುತಿ

ಶ್ರೀಮದ್ಧರಿದಾಸಕೂಟದ ಆದಿ ಕವಿಗಳ ಮುಕುಟಮಣಿಯಾದ ಶ್ರೀ ಶ್ರೀಪಾದರಾಜಯತೀಶ್ವರರು ರಚಿಸಿದ ಈ ಮಧ್ವನಾಮಕ್ಕೆ ಭಗವದಪರೋಕ್ಷಿ ಗಳಾದ ಶ್ರೀಮಜ್ಜಗನ್ನಾಥದಾಸರಾಯರು ರಚಿಸಿರುವ ಫಲಶ್ರುತಿಯು.

**ಪದ :— ಸೋಮ ಸೂರ್ಯೋಪರಾಗದಿ ಗೋಸಹಸ್ರಗಳ |**
**ಭೂಮಿದೇವರಿಗೆ ಸುರನದಿಯ ತಟದಿ ||**
**ಶ್ರೀಮುಕುಂದಾರ್ಪಣವೆನುತ ಕೊಟ್ಟ ಫಲವಕ್ಕು |**
**ಈ ಮಧ್ವನಾಮ ಬರೆದೋದಿದವಗೆ || ೩೦ ||**

**ಟೀ. ತಾ. :—** ಚಂದ್ರ, ಸೂರ್ಯಗ್ರಹಣಗಳೆಂಬ ಮಹಾ ಪರ್ವಣಿ ಕಾಲಗಳಲ್ಲಿ, ಗೋ, ಭೂ, ಹಿರಣ್ಯ, ವಸ್ತ್ರಾದಿಗಳ ದಾನದಿಂದ ಮಹತ್ಫಲ ವುಂಟೆಂಬುದು ಶಾಸ್ತ್ರೋಕ್ತವಚನವು. ಅಂಥ ಪ್ರಸಂಗಗಳಲ್ಲಿ ಸಹಸ್ರ ಒಳ್ಳೇ

ಪುಷ್ಟವಾದ ಕರುಸಹಿತ ಗೋವುಗಳನ್ನು ವೇದಾಧ್ಯಯನ ಸಂಪನ್ನರಾದ ಸಾಧು ಬ್ರಾಹ್ಮಣರಿಗೆ **"ಶ್ರೀವಿಷ್ಣು ಪ್ರೇರಣಯಾ ಶ್ರೀವಿಷ್ಣು ಪ್ರೀತ್ಯರ್ಥಂ"** ಎಂಬ ಅನುಸಂಧಾನದಿಂದ, ಲೋಕಪಾವನಿ ಹಾಗೂ ಮಹಾ ಮಂಗಲಸ್ವರೂಪಿಣಿಯಾದ ಭಾಗೀರಥಿ (ಗಂಗಾ) ನದಿಯ ತೀರದಲ್ಲಿ ಶ್ರೀಕೃಷ್ಣಾರ್ಪಣ ಪೂರ್ವಕವಾಗಿ ದಾನಮಾಡಿದ ಮಹಾ ಪುಣ್ಯಾಂಶದಷ್ಟು ಫಲವು, ಈ ಮಧ್ವನಾಮವನ್ನು ಸದ್ಭಕ್ತಿಭಾವನೆಯು ವಿಶ್ವಾಸದಿಂದ ನಿತ್ಯದಲ್ಲೂ ನೆರೆಹೊರೆಯೂ ಕೇಳ್ವಂತೆ ಗಟ್ಟಿಯಾಗಿ ಪಠಿಸುವ ಸುಜೀವರಿಗೆ ಸತ್ಯವಾಗಿ ಲಭಿಸುವದು ಏಕೆಂದರೆ—ಯಾವ ಕರ್ಮಜದೇವತಾಗಣಪ್ರವಿಷ್ಟರಾಗಿದ್ದು, ಬಹು ಪುರಾತನದವರೆನಿಸಿದ ಧ್ರುವಮಹರಾಜರ ಅಂಶದಿಂದ, ಬ್ರಹ್ಮಾವಿಷ್ಟರಾಗಿ ಅವತರಿಸಿದ ಶ್ರೀ ಶ್ರೀಪಾದರಾಯರ ಶುದ್ಧವಾಕ್ಸುಧೆಯಿಂದ ವಿರಚಿತವಾದ, ವಾಯುದೇವರ ಮಹಾತ್ಮ್ಯವರ್ಣನೆಯ ಈ ಶ್ರೇಷ್ಠ ಕವನದಲ್ಲಿ, ಅವತಾರತ್ರಯ ಸಹಿತರಾದ ಪ್ರಧಾನ ವಾಯುದೇವರು ಪೂರ್ಣ ಸನ್ನಿಹಿತರಾಗಿ ನೆಲೆಸಿಹರು. ಇಂಥ ಭವತಾರಕವಾದ ಪದ್ಯವನ್ನು ತ್ರಿಕರ್ಣಶುದ್ಧಿಯಿಂದ ಪಾಡುವ ಸುಜೀವರಿಗೆ ಮಹಾ ದುರ್ಲಭವಾದ ಮೋಕ್ಷವೇ ಪ್ರಾಪ್ತವಾಗುತ್ತಿರುವಲ್ಲಿ, ಸಹಸ್ರ ಗೋದಾನಗಳ ಫಲವು ಲಭಿಸುವದೆಂದು ಹೇಳಿದ್ದು ಹೆಚ್ಚಿನದಲ್ಲ.

**ಪದ :— ಪುತ್ರರಿಲದವರು ಸತ್ಪುತ್ರರೈದುವರು ಸ ।**
**ರ್ವತ್ರದಲಿ ದಿಗ್ವಿಜಯವಾಹುದು ಸದಾ ॥**
**ಶತ್ರುಗಳು ಬೀಳ್ವರಪಮೃತ್ಯು ಬರಲಂಜುವದು ।**
**ಸೂತ್ರನಾಮಕನ ಸಂಸ್ಮೃತಿ ಮಾತ್ರದಿ ॥ ೩೧ ॥**

**ಟೀ. ತಾ. :—** ಸಕಲ ಜೀವರಾಶಿಗಳಲ್ಲಿದ್ದು ಅವರವರ ಸ್ವರೂಪಕ್ಕೆ ತಕ್ಕಂತೆ ಹಂಸಮಂತ್ರಜಪವನ್ನು ಆಯಾ ಜೀವರ ಆಜನ್ಮಮರಣಪರ್ಯಂತ ಅಖಂಡವಾಗಿ ಏಕಪ್ರಕಾರ ಮಾಡುತ್ತ, ಜಗತ್ಸೂತ್ರವನ್ನು ಹಿಡಿದು ಭವಾಖ್ಯ ನಾಟಕದಲ್ಲಿ ನರಗೊಂಬೆಗಳನ್ನು ನಾನಾವಿಧವಾಗಿ ಕುಣಿಸ್ಯಾಡುವ ಸೂತ್ರನಾಮಕ ಪ್ರಾಣದೇವರ ನಿತ್ಯಸ್ಮರಣೆಯ ಪುಣ್ಯದಿಂದ, ಸುತವಿಹೀನರಾದವರಿಗೆ ಪಿತರನ್ನು ಸದ್ಗತಿಗೆ ಕಳಿಸತಕ್ಕಂಥ ಬಹು ಯೋಗ್ಯ ಪುತ್ರರು ಜನಿಸುವರು. ಅಥವಾ—ಸರ್ವಜೀವರಲ್ಲೂ ತಾವಿದ್ದು ಆ ಜೀವರೊಡನೆ ಶ್ರೀ ಹರಿಯ ಸಹಿತಾಗಿ

ತಾವೂ ಜನಿಸುವ ವ್ಯಾಜದಿಂದ ( ಹ. ಕ. ಸಾರ ಸಂ. ೨,೧೨- ಶ್ಲೋ. ೪,೫೧) ಆ ಪಿತರಾದ ಸುಜೀವರಿಗೆ ತಾವೇ ಪುತ್ರರೆನಿಸಿ, ತಮ್ಮ ಸಚ್ಛಾಸ್ತ್ರವೆಂಬ ತೀರ್ಥದ ಸ್ನಾನ, ಪ್ರಾಶನಗಳನ್ನಿತ್ತು ಅವರನ್ನುದ್ಧಾರಗೈದು ತನ್ಮೂಲಕ ಪುನ್ನಾಮ ನರಕವನ್ನು ತಪ್ಪಿಸಿ ಮೋಕ್ಷವನ್ನೀವರು. ಹೀಗೆ ಶ್ರೀಮದಾಚಾರ್ಯರ ಪರಮಾನುಗ್ರಹಕ್ಕೆ ಪಾತ್ರರಾದ ಅವರ ಭಕ್ತಮಹಾಶಯರಿಗೆ ಐಹಿಕವೇನು ! ಪಾರತ್ರಿಕವೇನು ! ಸರ್ವತ್ರದಲ್ಲೂ ದಿಗ್ವಿಜಯವೇ-ಸುಖಸಾಮ್ರಾಜ್ಯದ ಭೋಗವೇ ಸಹೈವಸಿದ್ಧವಾಗಿ ಲಭಿಸುವದು. ( ಹ. ಕ. ಸಾರ ೨-೧ ) ಆದುದರಿಂದ, ಗರುಡದೇವರ ಗೃಹದಲ್ಲಿದ್ದವನಿಗೆ ಉರುಗನ ಭಯವುಂಟೆ:? ಎಂಬಂತೆ ವಾಯುದೇವರ ಭಕ್ತರಿಗೆ ಎಂದಿಗಾದರೂ ವೈರಿಗಳ ಭಯವು ಇದ್ದೀತೇ ? ಸರ್ವಥಾ ಇರಲಾರದು. “ **ಅರಿಗಳೇ ಸಖರಕ್ಕು, ಅತಿ ವಿಷಾಮೃತವಕ್ಕು । ಉರಗ ಪೂಮಾಲ್ಯಕಕ್ಕು ಉರಿ ತಣ್ಣಗಕ್ಕು ॥ ಶರಧಿ ಗೋಷ್ಪದವಕ್ಕು ಶರಘಾತ ತೃಣವಕ್ಕು । ನರಹರಿಯ ನಾಮವನು ನಂಬಿ ಪಠಿಪರಿಗೆ** ” ಎಂದು ಶ್ರೀಮದ್ವಿಜಯದಾಸವರ್ಯರು ಹಾಡಿದ ಹಿರಿದುಕ್ತಿಯಂತೆ, ವೈರಿಗಳೇ ಇಲ್ಲದಿರುಹರು. ಇದ್ದುದಾದರೆ ಅವರು ಬಾಳದೆ ಬಿದ್ದು ಹೋಗುವರು. ಇನ್ನು ಅಧ್ಯಾತ್ಮದೃಷ್ಟಿಯ ಅಂತರಂಗದ ವೈರಿಗಳಾದ ಕಾಮಾದಿಗಳ ಷಡ್ವಿಕಾರಗಳೂ, ಈಷಣತ್ರಯಗಳೂ, ಅಹಂಮಮಕಾರಗಳೂ, ಸುಜೀವರ ಉಧ್ಧೃತಿಗೆ ಪ್ರತಿಬಂಧಕ ಸಾಮಗ್ರಿಗಳೇ ಆಗಿದ್ದಾಗ್ಯೂ, ಅವೆಲ್ಲವೂ, ಅನಿಲದೇವರ ಒಲುಮೆಯ ಮಹಾ ಪ್ರಸಾದರೂಪದ ಪ್ರಚಂಡವೇಗವುಳ್ಳ ವಾಯ್ವಾಸ್ತ್ರದಿಂದ, ದಶದಿಕ್ಕುಗಳಿಗೆ ಹಾರಿಹೋಗುವವು. ಶ್ರೀಹರಿ ವಾಯುಗಳ ಸದ್ಭಕ್ತರಿಗೆ ಪ್ರಾರಬ್ಧವಶದಿಂದ ಘಟಿಸುವ ದುಷ್ಕರ್ಮಗಳ ದೋಷಮೂಲಕವಾದ ಅಪಮೃತ್ಯುವೂ ಕೂಡ ಪರಿಹಾರವಾಗುವದಷ್ಟೇ ಅಲ್ಲದೆ, ಮೋಕ್ಷಾಖ್ಯ ಪರಮಪುರುಷಾರ್ಥರೂಪದ ಮಹದೈಶ್ವರ್ಯವೂ ಲಭಿಸುವದು. ಈ ಮಾತಿನ ನಿದರ್ಶನಕ್ಕೆ ಪುರಾಣಪ್ರಸಿದ್ಧಿಯ ಅಜಾಮಿಳನೆಂಬ ವಿಪ್ರೋತ್ತಮನೂ ಹಾಗೆಯೇ ಈ ಪದ್ಯದ ಫಲಶ್ರುತಿಕಾರರೂ ಸಾಕ್ಷಿಯಾಗಿರುವರು. ಆದುದರಿಂದಲೇ, ಶ್ರೀಮಜ್ಜಗನ್ನಾಥದಾಸವರ್ಯರು ತಮಗೆ ಪ್ರಾಪ್ತವಾದ ಅಪಮೃತ್ಯುವಿನ ಪರಿಹಾರಕ್ಕಾಗಿ ರುದ್ರಾದಿ ಅನ್ಯ ದೇವತೆಗಳನ್ನು ಪ್ರಾರ್ಥಿಸದೆ “ **ಅಪಮೃತ್ಯು ಪರಿಹರಿಸು ಅನಿಲದೇವ ॥** ” ಎಂದು ಭಕ್ತಿಭಾವದಿಂದ ಅಪಮೃತ್ಯುವಿಗೆ ಮೃತ್ಯುಸ್ವರೂಪರಾದ ವಾಯುದೇವರನ್ನೇ

ಮೊರೆಹೊಕ್ಕು ಆರಾಧಿಸಿ ಆ ಮಹದ್ವಿಪತ್ತಿನಿಂದ ಪಾರಾದರು. ಇಷ್ಟೇ ಅಲ್ಲ. ಮಹಾ ಭಯಂಕರರಾದ ಯಮಭಟರೂ ಕೂಡ ವಾಯುಭಕ್ತರ ಸಮೀಪದಲ್ಲಿ ಹಾಯಲು ಹೆದರುವರು ಮರಣಕಾಲದಲ್ಲಿ ಶ್ರೀಹರಿ ವಾಯುಗಳ ಸ್ಮರಣೆಯು ಧ್ಯಾನಕ್ಕೆ ಒದಗದಿರುವದೂ, ಅವರ ನಾಮಗಳು ಜಿಹ್ವೆಗೆ ಬಾರದಿರುವದೂ, ಒಂದು ವಿಧದ ಅಪಮೃತ್ಯುವೆಂದೇ ಹೇಳಬಹುದು. ಅದಕ್ಕೇನೆ ದುರ್ಮರಣ ವೆಂದೂ ಅನ್ನಬಹುದು. ಆದಕಾರಣದಿಂದ, ಶ್ರೀಹರಿವಾಯುಗಳ ಪಾದಪದ್ಮ ಸ್ಮರಣೆಯುಪೂರ್ವಕವಾಗಿ ಅವರ ನಾಮೋಚ್ಚಾರಣೆಯನ್ನು ಗೈಯುತ್ತ ಪ್ರಾಣೋತ್ಕ್ರಮಣವಾಗುವದೇ ಶ್ರೀಹರಿವಾಯುಗಳ ಶರಣರ ಸುಲಕ್ಷಣವು. ಅಂತೆಯೇ, ಈ ಮಹದ್ಭಾಗ್ಯವನ್ನು ತಮಗೆ ಕೊನೆಯ ಸಮಯದಲ್ಲಿ ಅನು ಗ್ರಹಿಸೆಂದು ಶ್ರೀಪುರಂದರದಾಸಮಹರಾಯರು ಶ್ರೀಹರಿಯನ್ನು **"ಕರು ಣಿಸೋ ಕೃಷ್ಣ ಕರುಣಿಸೋ। ಯನ್ನ । ಮರಣಕಾಲದಿ ನಿನ್ನ ಸ್ಮರಣೆ ಬರುವಂತೆ ॥"** ಎಂದು ಕಡುದೈನ್ಯದಿಂದ ಪ್ರಾರ್ಥಿಸಿದರು. ಆದರೆ, ಈ ನಾಮಸ್ಮರಣೆ, ಉಚ್ಚಾರಣೆಗಳ ಭಾಗ್ಯವು ಸರ್ವರಿಗೂ ಲಭ್ಯವಾಗದೆ, ಪಾರಬ್ಧ ಬತ್ತಿದ ಪುಣ್ಯಾತ್ಮರಿಗಷ್ಟೇ ದೊರೆಯತಕ್ಕದ್ದಾಗಿದೆ. ಈ ಮಾತಿಗೆ ಅಜಾಮಿಳ ನೆಂಬ ಬ್ರಾಹ್ಮಣೋತ್ತಮನೇ ಪ್ರಬಲ ಸಾಕ್ಷಿಯಾಗಿರುವನು.

**ಪದ :— ಶ್ರೀಪಾದರಾಜರುಸುರಿದ ಮಧ್ವನಾಮ ಸಂ।**
**ತಾಪವನು ಕಳೆದು ಸೌಖ್ಯವನೀವುದು ॥**
**ಶ್ರೀಪತಿ ಜಗನ್ನಾಥವಿಠ್ಠಲನ ತೋರಿ ಭವ।**
**ಕೂಪಾರದಿಂದ ಕಡೆಹಾಯಿಸುವದು ॥ ೩೨ ॥**

**ಟೀ. ತಾ.** :— ಶತಸಂಖ್ಯಾಕರಾದ ಪುಣ್ಯಶ್ಲೋಕ ಆದಿ ಮಹರಾಯ ರಲ್ಲಿ ಆದಿಯವರಾದ ಧ್ರುವರಾಜರ ಅಂಶದಿಂದ ಬ್ರಹ್ಮಾವಿಷ್ಟರಾಗಿ ಅವತರಿಸಿದ ಶ್ರೀ ಶ್ರೀಪಾದರಾಜ (ಲಕ್ಷ್ಮೀನಾರಾಯಣ) ಯತಿರಾಜರು, ಮಹಾಪರೋಕ್ಷಿಗ ಗಳಾಗಿ ವಾಯುದೇವರ ಅಸದೃಶವಾದ ಮಾಹಾತ್ಮ್ಯವರ್ಣನ ರೂಪದ ಈ ಪ್ರಾಕೃತ–ಕನ್ನಡ- ಪವಮಾನಸ್ತುತಿಯನ್ನು, ಗೀರ್ವಾಣಭಾಷೆಯ ಪರಿಜ್ಞಾನ ವಿರದ ಶ್ರೀಹರಿ ವಾಯುಗಳ ಭಕ್ತರೋದ್ಧಾರಕ್ಕಾಗಿ ಸುಹೃದಯಾಂತಃಕರಣ ದಿಂದ ವಿರಚಿಸಿದರು. ಆದುದರಿಂದ, ಭಗವದ್ಭಕ್ತರಾದವರು ಪ್ರತಿದಿನದಲ್ಲಿ

ತ್ರಿಕಾಲಗಳಲ್ಲೂ ತಪ್ಪದೆ ದೇವವಾಣಿಯ ಈ ಪದ್ಯವನ್ನು ಭಕ್ತಿಪೂರ್ವಕವಾಗಿ ಪಠಿಸುವದರಿಂದ, ಐಹಿಕದಲ್ಲಿ ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕಗಳೆಂಬ ತಾಪತ್ರಯಗಳು ನಿವಾರಣವಾಗಿ, ಪುರುಷಾರ್ಥಸಾಧನವು ಕೈಗೂಡಿ ಪ್ರಾರಬ್ಧ ಭೋಗಾನಂತರ ಸ್ವಬಿಂಬಾತ್ಮಕ "**ಜಗನ್ನಾಥ ವಿಠ್ಠಲ**"ನ ಸಂದರುಶನವಾಗಿ ಜನನಮರಣಲಕ್ಷಣದ ಈ ಸಂಸಾರಸಾಗರೋತ್ತಾರಣದದ್ವಾರ ಮೋಕ್ಷಪ್ರಾಪ್ತಿಯಾಗುವದು.

**ವಿಶೇಷಾಂಶ :**— ಪ್ರಸ್ತಾವನೆಯಲ್ಲಿ ನಿರೂಪಿಸಿದಂತೆ, ಬ್ರಹ್ಮದೇವರ ಸಾಕ್ಷಾತ್ಪ್ರಪೌತ್ರರೂ, ಭಗವದ್ಭಕ್ತಾಗ್ರೇಸರರೂ ಆದ ಧ್ರುವಮಹರಾಯರ ಅವತಾರರಾದ ಶ್ರೀಪಾದರಾಜರ ಸೇವೆಯ ಲಾಭವು ತಮಗೆ ಸುದೈವದಿಂದ ಲಭಿಸಿ, ತನ್ಮೂಲಕವಾಗಿ ಶ್ರೀಹರಿ ವಾಯು ಗುರುಗಳ ಅನುಗ್ರಹವು ತಮ್ಮಲ್ಲಿ ಅಧಿಕವಾಗಲಿ, ಎಂಬ ಶ್ರೇಯೋಭಿಲಾಷೆಯಿಂದಲೇ ಶ್ರೀಮಜ್ಜಗನ್ನಾಥದಾಸರಾಯರು ಪ್ರಾಕೃತಪದ್ಯರೂಪದ ಈ ವಾಯುಸ್ತುತಿಗೆ ಫಲಶ್ರುತಿಯನ್ನು ರಚಿಸಿ, ಶ್ರೀ ಶ್ರೀಪಾದರಾಜರಂತರ್ಗತ ವಾಯ್ವಾಂತರ್ಯಾಮಿ "ಶ್ರೀ **ಜಗನ್ನಾಥ ವಿಠ್ಠಲ**" ಗರ್ಪಿಸಿ ಕೃತಾರ್ಥರಾದರು. || ೩೨ ||

ಶ್ರೀಗುರುಮಧ್ವೇಶಾರ್ಪಣಮಸ್ತು

## ಪರಿಶಿಷ್ಟ ೧.

# ವಾಯುದೇವರ ಪ್ರಸಿದ್ಧರೂಪ, ನಾಮಗಳು

ಈ ಬ್ರಹ್ಮಾಂಡದೊಳಗೆ ಸೃಷ್ಟರಾದ ಅನಂತಜೀವರ ಚತುರ್ವಿಧ ಶರೀರಗಳಲ್ಲೂ ಅನೇಕ ರೂಪಗಳಿಂದಿರುವದರಿಂದ, ಶ್ರೀಹರಿ ರಮಾರೂಪಗಳ ಅನಂತತ್ವದ ತರುವಾಯದಲ್ಲಿ ಶ್ರೀವಾಯುದೇವರರೂಪಗಳೂ ಅನಂತವಾಗಿಯೇ ಇರುವವು. ಅಂಥವುಗಳಲ್ಲಿ ಜಗತ್ಪಾಲಕತ್ವದಿಂದ ಪ್ರಾಮುಖ್ಯವಾದ "**ಪ್ರಾಣಾದಿ ಪಂಚ, ನಾಗಾದಿಪಂಚ**"- ಈ ದಶರೂಪಗಳೂ ಹಾಗೂ ಜಗತ್ತಿನ ಧಾರಣಾದಿಗಳನ್ನು ಮಾಡಿರುವ ಕೇವಲ ಶ್ರೇಷ್ಠವಾದ "**ವಾಯುಕೂರ್ಮಾದಿಪಂಚ**" ರೂಪಗಳೂ–ಹೀಗೆ, ಒಟ್ಟು ಪಂಚದಶರೂಪಗಳು ಸುಪ್ರಸಿದ್ಧವಾಗಿರುವವು. ಈ ಪ್ರಾಣಾದಿಪಂಚ, ನಾಗಾದಿಪಂಚರೂಪಗಳು ಪ್ರಾಣಿಸಮೂಹದ ಭೌತಿಕ ಶರೀರಗಳಲ್ಲಿ ಸರ್ವವಿಧದ ಅಂತರ್ಬಾಹ್ಯ ವ್ಯಾಪಾರಗಳಿಗೂ, ಪಂಚವಿಧದ ಅವಿದ್ಯಾ, ಕುಮೋಹಗಳನ್ನು ಸುಜೀವರಿಗೆ ಬಿಡಿಸುವಂಥ, ದುರ್ಜೀವರಿಗೆ ಬಂಧಿಸುವಂಥ ಕ್ರಿಯೆಗಳಿಗೂ ಕಾರಣವಾಗಿಹವು. ಈ ಜಗತ್ತಿನ ಧಾರಣಾದಿಗಳನ್ನು ಮಾಡಿರುವ ವಾಯುದೇವರ "**ಸೂತ್ರ, ಕೂರ್ಮ, ಶ್ವಾಸ, ಅಣೋರಣೀಯಾನ್, ಮಹತೋ ಮಹಿಯಾನ್**" ನಾಮಕರೂಪಗಳ ವಿಸ್ತಾರ ವಿವರಣೆಯು ೧೫ನೇ ಪುಟದಲ್ಲಿ ಆಗಿರುವದು.

ಪ್ರಾಣಿಗಳ ಸ್ವರೂಪ ಶರೀರಗಳಲ್ಲಿ ಯಾವಾಗಲೂ ಇರತಕ್ಕ ಬಿಂಬನಾದ ಶ್ರೀಹರಿಯನ್ನು ಸೇವಿಸುತಿದ್ದು, ಕೊನೆಗೆ ಆ ಜೀವರಿಗೆ ಸರಿಯಾದ ಗತಿಗಳನ್ನೀಯುವ, ಲಿಂಗಶರೀರದಲ್ಲಿ ಬ್ರಹ್ಮ, ವಾಣಿ, ಭಾರತಿಯರನ್ನೊಡಗೊಂಡಿರುವ, ಲಿಂಗಬಾಹ್ಯದಲ್ಲಿರುವ ದೇವತೆಗಳಿಗಾವಾಸಸ್ಥಾನವಾದ ಅನಿರುದ್ಧ ಶರೀರದಲ್ಲಿ ರುದ್ರಾದಿ ತತ್ವೇಶರಿಗೆ ನಿಯಾಮಕರಾಗಿರುವ, ಮತ್ತು ಸರ್ವ ಪ್ರಾಣಿಗಳ ಬಾಹ್ಯ ಭೌತಿಕದೇಹಗಳದಲ್ಲಿದ್ದು, ಅಲ್ಲಿರುವ ಚತುರ್ವಿಂಶತಿ ತಾತ್ವಿಕ ದೇವ, ಭೃತ್ಯರಿಗೆ ನಿಯಮನವಮಾಡುತ್ತ, ಆ ದೇಹಿಗಳಿಂದ ಅವರವರ ಸಾಧನಗಳನ್ನು ಮಾಡಿಸುವ ವಾಯುದೇವರು ಕ್ರಮವಾಗಿ '**ಮಾತರಿಶ್ವ, ಸೂತ್ರ, ಪವಮಾನ,**' ಮತ್ತು '**ಮುಖ್ಯಪ್ರಾಣ**' ರೆಂದು ಕರೆಸುವರು. ಜೀವರನ್ನು ಬಾಹ್ಯಶರೀರದಲ್ಲಿ

ಹೊಗಿಸುವ ಹಾಗೆಯೇ ಹೊರಗೆ ಹೊರಡಿಸುವ ಮತ್ತು ಸಮಸ್ತ ಜಗತ್ತಿಗೆ '**ಚೇಷ್ಟಾಪ್ರದ**' ಅರ್ಥಾತ್, ಚಲನವಲನಾದಿ ಸರ್ವಕ್ರಿಯಾಕಾರಕರೂಪವು '**ಪ್ರಾಣ**' ನಾಮಕವೆಂದೂ, ಜೀವಕೋಟಿಯ '**ಧಾರಣಾಪ್ರದ**' ಅರ್ಥಾತ್, ಸಂರಕ್ಷಕ ರೂಪವು '**ಧರ್ಮ**' ನಾಮಕವೆಂದೂ, ಈ ಜಗತ್ತಿಗೆ '**ಸತ್ತಾಪ್ರದ**' ಅರ್ಥಾತ್, ಕ್ಷೇಮವನ್ನುಂಟುಮಾಡುವ ರೂಪವು '**ವಾಯು**' ನಾಮಕವೆಂದೂ, ಸಮಸ್ತಜೀವರಿಗೆ ಅವರವರ ಯೋಗ್ಯ '**ಗತಿಪ್ರದ**' ಅರ್ಥಾತ್, ಚಿರಸುಖ, ಸುಖದುಃಖ, ದುಃಖಸ್ಥಾನದಾಯಕ ರೂಪವು '**ಮುಕ್ತಿ–ಭಕ್ತಿ**' ನಾಮಕ ವೆಂದೂ ಕರೆಸುವವು.

ಹೀಗೆ, ಈ ಬ್ರಹ್ಮಾಂಡದ ಸ್ಥಿತಿಕಾಲದಲ್ಲಿರತಕ್ಕ ವಾಯುದೇವರ ಸರ್ವ ಕಾರ್ಯರೂಪಗಳು ಮಹಾಪ್ರಳಯವಾಗಲು ಮೂಲರೂಪದಲ್ಲಿ ಐಕ್ಯವಾಗು ವವು. ವಾಯುದೇವರ ಮೂಲರೂಪಕ್ಕೂ ಅವತಾರರೂಪಗಳಿಗೂ ಕಿಂಚಿದ್ಭೇದ ವುಂಟು. ಅವು ಯುಗಧರ್ಮಗಳಿಗನುಸಾರವಾಗಿ "**ಇಚ್ಛಾಶಕ್ತಿಃ ಪ್ರಾಯಶೋ ಮಾರುತಸ್ಯ**" (ಶ್ರೀಮದ್ಭಾರತ ತಾತ್ಪರ್ಯ ನಿರ್ಣಯ) ಎಂಬ ಶ್ರೀಮದಾಚಾರ್ಯರ ಉಕ್ತಿಯಂತೆ ಅಷ್ಟಷ್ಟು ಗುಣ ಧರ್ಮಗಳಿಂದ ಪ್ರಕಾಶಮಾನವಾಗುವವು.

ವಾಯುದೇವರ ಮೂಲ ಹಾಗೂ ಅವತಾರರೂಪಗಳ ನಾಮಗಳು ಬಹು ವಾಗಿದ್ದು, ಅವುಗಳಲ್ಲಿ ಪ್ರಸಿದ್ಧವಾದವುಗಳನ್ನು ಮಾತ್ರ ನಿತ್ಯಪಠಣಕ್ಕಾಗಿ ಇಲ್ಲಿ ನಿರೂಪಿಸಿದೆ. ಅವುಗಳಲ್ಲೂ ಹೆಚ್ಚು ಪ್ರಸಿದ್ಧವಾದವುಗಳನ್ನು ದಪ್ಪಾ ಕ್ಷರಗಳಿಂದ ತೋರಿಸಿದೆ. ಆ ವಿವರ:– ಅಗ್ನಿಜಾಸಂಗ, ಅಜಸಮಧನ್ಯ, **ಅಣುಮಹದ್ರೂಪ**, **ಅನಿದ್ರ**, ಅನಿಮಿಷೇಶ, **ಅನಿಲ**, ಅನುಮಾನಯತಿ, **ಅಪರಬ್ರಹ್ಮ**, **ಅಪಾನ**, ಅಭಾನವಪ್ರತಿಮ, ಅಮಿತವಿಕ್ರಮ, **ಅಮೃತ**, **ಅಲವಬೋಧ**, ಅವ್ಯಯಧಿಪತಿ, **ಅಸುಪತಿ**, ಆಖಣಾಶ್ಮಸಮ, **ಆದಿ ಗೋಪಾ**, ಆನಂದ, **ಆನಂದತೀರ್ಥ**, **ಆಂಜನೇಯ**, **ಇಂದ್ರುಪದ ಭೋಕ್ತ**, ಈರ, **ಉದಾನ**, **ಉದ್ಗೀಥ**, ಋಜು, **ಋಜುಗಣೇಶ**, ಕಪಿವರ, **ಕರಣನಿಯಾಮಕ**, **ಕಲಿಭಂಜನ**, ಕವಿ, **ಕವಿಗೇಯ**, ಕಾಳಿರಮಣ, ಕಿರ್ಮಿರಧ್ವಂಸೀ, ಕೀಚಕಾಂತಕ, **ಕೂರ್ಮ**, ಕೌಂತೇಯ, **ಕೃಕಳ**, ಕೃಷ್ಣಸೇವಾಂಗ, ಕೃಷ್ಣೇಶಾ, ಗತಿಪ್ರದಾ, ಗದಾಪಾಣಿ, **ಗಂಧವಾಹಾ**, **ಗರಳಭುಕ್**, ಗಾಯನಾಚಾರ್ಯ, ಗೀರ್ವಾಣಸೇನಾಪತಿ, ಗುಣಪೂರ್ಣ,

ಗುರುವರ, ಗೋಜ, **ಘನ್ನವೈಷ್ಣವ, ಚತುರಧೀ,** ಚತುರ್ದಶಲೋಕೇಶ, ಚಿತ್ತ, **ಚೇತನಚೈತನ್ಯ,** ಚೇತನಾಚೇತನವಿಶಿಷ್ಟ, **ಜಗಚ್ಛಕ್ತಿ,** ಜಗತ್ಪ್ರಾಣ, ಜಗದ್ಗುರು, ಜಡಚೇತನನಿಲಯ, ಜಾನ, ಜಿತಕಾಮ, ಜಿತಮಿತ್ರ, ಜೀವಾಭಿಮಾನಿ, ಜೀವೇಶ, ಜ್ಞಾನ, ತತ್ವಜ್ಞ, **ತ್ರಯಿಮಯ,** ತ್ರಿಭುವನೇಶ, ತ್ರಿರವತಾರಾತ್ಮಕ, ತ್ರೈಲೋಕಾಚಾರ್ಯ, **ದಕ್ಷಿಣಾಕ್ಷಿವಾಸ, ದಗ್ಧಲಿಂಗ ದಭ್ರಚೇತನ, ದಶಪ್ರಮತಿ,** ದಿವಿಜೇಂದ್ರ, **ದುರಾಗಮಧ್ವಸ್ತ,** **ದೇವದತ್ತ,** ದೇವೇಶ, ದೋಷವರ್ಜಿತ, ದ್ವಾತ್ರಿಂಶಲ್ಲಕ್ಷಣೋಪೇತ, ದ್ರೌಪದಿಕಾಂತ, **ಧನಂಜಯ,** ಧನಂಜಯಕೇತನ, **ಧೃತಿ,** ನಂದ, **ನಭಸ್ವತ್, ನಾಗ,** ನಿರಂಜನ, ನಿರ್ಭಯ, ನೀತಭಕ್ತಿಜ್ಞಾನಬಲಪೂರ್ಣ, ಪರಮಗುರು, **ಪರಮೇಷ್ಠಿಪದಾರ್ಹ,** ಪರಿಶುದ್ಧಾತ್ಮ, **ಪರಿಸರ, ಪವನ,** ಪವನಸುಕುಮಾರ, **ಪವಮಾನ,** ಪಿಂಗಾಕ್ಷ, ಪುಷ್ಟಿಬುದ್ಧಿ, ಪೂರ್ಣ, **ಪೂರ್ಣಪ್ರಜ್ಞ,** ಪೂರ್ಣಬೋಧ, ಪೂರ್ವದೇವ, **ಪೃಷದಶ್ವ,** ಪ್ರಚುರಧೀ, ಪ್ರಜಾಪತಿ, ಪ್ರಜ್ಞ, **ಪ್ರಥಮಾಂಗ,** ಪ್ರಥುಧೀ, ಪ್ರಧಾನವಾಯು, **ಪ್ರಭಂಜನ,** ಪ್ಲವಂಗನಾಥ, **ಪ್ರಾಣ,** ಪ್ರಾಣಪಂಚಕ, ಬಕಧ್ವಂಸಿ, ಬಲ, ಬುದ್ಧಿದೇವ, **ಬೃಹತಿ,** ಬ್ರಹ್ಮಪದಭೋಕ್ತ, **ಭಕ್ತಿ,** ಭಗವತ್ಕಾರ್ಯಸಾಧಕ, **ಭರತ,** ಭವರೋಗಭೇಷಜ, ಭಾಗವತೋತ್ತಮ, **ಭಾರತೀಶ, ಭಾವೀಬ್ರಹ್ಮ,** ಭೀಮ, **ಭೀಮಸೇನ,** ಭೂತತ್ರಯವಪುಸ, **ಮಧ್ವ,** ಮನೋಜವ, ಮಂಜುಳಮೂರ್ತಿ, **ಮರುತ,** ಮರುತಾತ್ಮಜ, **ಮಹತತ್ವಶರೀರ,** ಮಹಾಗುರು, ಮಹಾಧ್ಯಾತ, ಮಹಾನ್ಮರುತ, ಮಹಾಪ್ರಭು, ಮಹಾಬಲ, ಮಹಾಮತಿ, **ಮಹಾವ್ಯಾಕರಣಾಂಬೋಧಿ,** ಮಹಾಹೃತ, ಮಹೌಜ, **ಮಾತರಿಶ್ವ,** ಮಾಧ್ವಗೇಹ, **ಮಾರುತ,** ಮರುತಾತ್ಮಜ, **ಮಾರುತಿ, ಮುಕ್ತಿ,** ಮುಕ್ತಿಪ್ರದ, ಮುಖ್ಯಪ್ರಾಣ, ಮೂರವತಾರಿ, ಮೂಲಗುರು, **ಮೇಧಾ,** ಯತೀಶ್ವರ, ಯೋಗ, **ಯೋಗಾಧ್ವರ್ಯ,** ರಾಮಸೇವಕ, ರಾಮಕಾರ್ಯಾಸಕ್ತ, ರಾಮಾಯಣಕರ್ತ, **ರೋಚನ,** ರೋಮಕೋಟಿಲಿಂಗ, ಲೋಕಾಧಾರಕ, ವಜ್ರಾಂಗ, ವಾತ, ವಾಯುಕುಮಾರ, **ವಾಸುದೇವ,** ವಿಜಾತ, ವಿಜಿತಾತ್ಮ, ವಿಜ್ಞಾತ, **ವಿಜ್ಞಾನತತ್ವಮಾನಿ,** ವಿಜ್ಞಾನಿ, ವಿಭೀಷಣ, ವಿಭು, ವಿಮುಕ್ತಿಗ, **ವಿಶ್ವಚೇಷ್ಟಕ,**

ವಿಶ್ವವಿತು, **ವಿಷಭೋಕ್ತೃ**, **ವಿಷ್ಣುಭಕ್ತ**, ವೀತಭಯ, **ವೃಕೋದರ**, ವೃಜನನಾಶನ, **ವೈರಾಗ್ಯ**, ವೈರಾಗ್ಯನಿಧಿ, ವೈಷ್ಣವಾಗ್ರಣಿ, **ವೈಷ್ಣವಾಚಾರ್ಯ**, **ವ್ಯಾನ**, **ವ್ಯಾಸಶಿಷ್ಯ**, **ಶತಾನಂದ**, **ಶರ್ವಪಿತ**, ಶಂತನುಜ, ಶೀತಾಸಂಶೋಧಕ, **ಶೀತಾಶೋಕಾಪಹರಣ**, **ಶುಚಿ**, **ಶುಚಿಷದ್ಧ್ಯೋತ**, **ಶ್ವಸನ**, ಶ್ವಾಸಪತಿ, ಶ್ರೀಶಸದನ, **ಸಂಕರ್ಷಣಭವ**, **ಸತ್ವಪ್ರಚುರ**, ಸತ್ವಾತ್ಮಕಶರೀರ, ಸದಮಲಲಕ್ಷಣ, **ಸದಾಗತಿ**, **ಸಂಜೀವ**, ಸಪ್ತವಿಂಶತಿರೂಪಕ, **ಸಮಾನ**, ಸಮಸಮವರ್ತಿ, ಸತ್ಪ್ರಭಾವ, **ಸಮೀರ**, ಸದ್ವೈಷ್ಣವಾಚಾರ್ಯ, ಸಮೀರಕುಮಾರ, **ಸಮೀರಣ**, **ಸಂಮೋದ**, **ಸರ್ವಜ್ಞ**, ಸರ್ವಚೇತಸ, ಸಶಾಸ್ತ್ರವಕ್ತ, **ಸಾಮಗ**, **ಸುಖತೀರ್ಥ**, ಸುಖ, **ಸುರಗುರು**, ಸುರಪಕ್ಷ, ಸುರರಕ್ಷ, ಸುರಸಾರ್ವಭೌಮ, ಸುರಾಧ್ಯಕ್ಷ, ಸುಹೃತ್ಪ್ರಿಯ, **ಸೂತ್ರನಾಮಕ**, **ಸ್ಮೃತಿ**, **ಸ್ವರವರ್ಣವೇದಸ್ಥ**, ಸ್ವಾಮಿಕಾರ್ಯಧುರಂಧರ, **ಸ್ಥಿತಿ**, ಹನುಮ, **ಹನುಮಂತ**, ಹಂಸರಾಟ್, ಹರಪಿತ, **ಹರಿ**, ಹರಿಕಾರ್ಯಪ್ರವರ್ತಕ, ಹರಿಗೀತಾಚಾರ್ಯ, ಹರಿದಾಸವರ, ಹರಿಪ್ರತಿಬಿಂಬ, ಹರಿಪ್ರಥಮಾಂಗ, **ಹರಿಮತೀ**, ಹಿರಣ್ಯವದನ.

ಶ್ರೀಗುರುಮಧ್ವೇಶಾರ್ಪಣಮಸ್ತು.

## ಪರಿಶಿಷ್ಟ ೨.

# ಜೀವಕೋಟಿಯಲ್ಲಿ ವಾಯುದೇವರ ಶ್ರೇಷ್ಠತ್ವವು.

ವಾಯುದೇವರು ಜೀವಕೋಟಿಪ್ರವಿಷ್ಟರೆನಿಸಿದಾಗ್ಯೂ, ಈಶನಾದ ಶ್ರೀಹರಿಯ ಪ್ರಥಮಾಂಗರೂ, ಅರ್ಥಾತ್, ಸಾಕ್ಷಾತ್ ಪ್ರತಿಬಿಂಬರೂ ಆದುದರಿಂದ, ಅವರ ರೂಪ, ಗುಣ, ವ್ಯಾಪಾರಗಳು ಅವರ ಪ್ರತ್ಯಕ್ಷಬಿಂಬನಾದ ಶ್ರೀಹರಿಯ ರೂಪ, ಗುಣ, ಕ್ರಿಯೆಗಳ (ವಿಷಮ) ಲಾಕ್ಷಣಿಕ ಸಾಮ್ಯತ್ವವುಳ್ಳವು ಆಗಿವೆ. ಅದರಿಂದಲೇ, ಅವರು ಈಶಕೋಟಿಯ ಶ್ರೀಹರಿ ರಮಾದೇವಿಯರಿಗೂ ಜೀವಕೋಟಿಯ ರುದ್ರಾದಿದೇವತೆಗಳಿಗೂ ಮಧ್ಯಸ್ಥಿಗರಾಗಿ, ಆ ಜೀವಕೋಟಿಯ ಜೀವರಿಂದ ಅವರವರ ಸಾಧನಗಳನ್ನು ಮಾಡಿಸಿ, ಈಶಕೋಟಿಯವರಿಂದ ಅವರ ಗತಿಗಳನ್ನು ಕೊಡಿಸುತ್ತಾರೆ; ತಥಾ ಕೊಡುತ್ತಾರೆ. ಇಂಥ ಅಸದೃಶ ಮಹಿಮೋಪೇತರಾದ ವಾಯುದೇವರ ಅನೇಕ ಲೋಕವಿಲಕ್ಷಣ ವ್ಯಾಪಾರಗಳಲ್ಲಿ ಅಲ್ಪಮತಿಗೆ ಸ್ಫೂರ್ತಿಯಾದಷ್ಟರ ವಿವರಣೆಯು :—

(೧) ವಾಯುದೇವರ ಶರೀರವು ಶ್ರೀಹರಿಯ ಪರತತ್ವ, ಶ್ರೀರಮಾದೇವಿಯ ಅವ್ಯಕ್ತತತ್ವಗಳಿಂದುತ್ಪನ್ನವಾದ ಮಹತತ್ವದಿಂದ ನಿರ್ಮಿತವಾಗಿದ್ದು, ಆ ತತ್ವಕ್ಕೆ ಇವರೇ ಅಭಿಮಾನಿಗಳಾಗಿರುವರು. ಅಷ್ಟೇ ಅಲ್ಲದೆ, ನಿಯಾಮಕರೂ ಆಗಿರುವರು. ಅಂತೆಯೇ, ಇವರ ಶರೀರವು ಇವರ ಪೂರ್ಣ ಆಧೀನದಲ್ಲಿಯೇ ಇದ್ದು, ಇವರ ಇಚ್ಛೆಗೆ ಪೂರ್ಣ ಅನುಕೂಲವಾಗಿರುತ್ತದೆ. ಆದಕಾರಣ, ಇವರು ಸದಾ ಪೂರ್ಣ ತೃಪ್ತರೂ, ನಿರ್ದೋಷರೂ, ಸರ್ವಜ್ಞರೂ ಆಗಿದ್ದು, ಶ್ರೀಹರಿಯ ಸಮೀಚೀನ ಜ್ಞಾನದಿಂದ ಬಾಹ್ಯ ಪದಾರ್ಥಗಳಲ್ಲಿ ಎಷ್ಟೆಷ್ಟೂ ದೃಷ್ಟಿಯಿರದೆ, ಸರ್ವದಾ ಅಂತರ್ಮುಖಿಗಳಾಗಿ ಶ್ರೀಹರಿಯಧ್ಯಾನದಿಂದ ತೃಪ್ತರಾಗಿರುವರು. ಹೀಗೆ ಅವಧೂತಶ್ರೇಷ್ಠರಾದುದರಿಂದ, ಇವರ ಶರೀರದ ಮಹತತ್ವವು ವಿಜ್ಞಾನತತ್ವವೆನಿಸುತ್ತದೆ. ಮತ್ತು ಈ ವಿಜ್ಞಾನಪೂರ್ಣರಾದುದರಿಂದಲೇ, ಶ್ರೀಹರಿಯ ಮಂತ್ರಿತ್ವ, ಬ್ರಹ್ಮಾಂಡದ ಪ್ರಭುತ್ವಗಳು ಇವರಿಗೆ ಲಭಿಸಿರುತ್ತವೆ. ಇವರ ಅನುಗ್ರಹದಿಂದೇ ಅವಧೂತ ಧರ್ಮವು ಯೋಗ್ಯ ಜೀವರಿಗೆ ಸಿದ್ಧಿಯೈದುವದು. ವಿಜ್ಞಾನತತ್ವಕ್ಕೂ ಇವರೇ ಅಭಿಮಾನಿಗಳಾದುದರಿಂದ, ಅದಾದರೂ ಈ ಮಹಾತ್ಮರ ಪರಮಾನುಗ್ರಹದಿಂದಲೇ ಸುರರಿಗೆ ಲಭಿಸುವದು.

(೨) ಸ್ವತಃ ತಾವು ಮುಕ್ತರಾಗದೆ ಇರುವಾಗ್ಗೇನೆ, ಕಡಿಮೆಯ ಜೀವರ ಸಾಧನವನ್ನು ಪೂರ್ತಿಗೈಸಿ ಅವರಿಗೆ ಮುಕ್ತಿಯನ್ನೀಯುವರು.

(೩) ಯದ್ಯಪಿ ದಗ್ಧಪಟದಂತಾಗಿದ್ದರೂ, ಇನ್ನೂ ಸಂಪೂರ್ಣವಾಗಿ ಕಡೆಗಾಗದಿರುವ ತಮ್ಮ ಲಿಂಗದೇಹ ಸಹಿತರಾಗಿಯೇ ಅನ್ಯ ಜೀವರ ಸ್ವರೂಪ ದೊಳಗೆ ಶ್ರೀಹರಿಯ ಸೇವಾರ್ಥವಾಗಿ ಪ್ರವೇಶಿಸಿರುವರು. ಇದು ಅತಿ ವಿಚಿತ್ರವಾದ ಸಂಗತಿಯು. ಹೀಗಿರಲು ಶ್ರೀಹರಿಯ ಅನುಗ್ರಹವೇ ಕಾರಣವು.

(೪) ಇವರು ರುದ್ರಾದಿ ತತ್ವೇಶರಂತೆ ಇಂದ್ರಿಯಾಭಿಮಾನಿಗಳಷ್ಟೇ ಆಗಿರದೆ, ಯಾವತ್ತೂ ಜೀವಸ್ವಾಮಿತ್ವದ ಅಧಿಕಾರದಿಂದ ಸರ್ವೇಂದ್ರಿಯಗಳ ಸ್ವತಂತ್ರ ನಿಯಾಮಕರೂ ಆಗಿದ್ದಾರೆ. ಬರೇ ಅಭಿಮಾನತ್ವದಲ್ಲಿ ಫಲದಾತೃತ್ವ ಶಕ್ತಿಯಿರುವದಿಲ್ಲ. ಆದರೆ, ಪೂರ್ಣ ಸ್ವಾಮಿತ್ವಪೂರ್ವಕವಾದ ನಿಯಾಮಕತ್ವ ದಲ್ಲಿ ಫಲದಾತೃತ್ವಶಕ್ತಿಯೂ ಇರುವದು.

(೫) ಇವರ ಮೂಲ ಹಾಗೂ ಅವತಾರಗಳ ಶರೀರಗಳು ಶುಕ್ಲ ಶೋಣಿತ ಸಂಬಂಧ ರಹಿತವಾದವು. ಇವರು ಭೂತತ್ರಯ ವಪುಷರು. ಈ ಮಾತಿನ ನಿದರ್ಶನಾರ್ಥವಾಗಿ–ಮಹಾ ಪುಷ್ಟಾಂಗರಾದ ಶ್ರೀಮದಾಚಾರ್ಯರು ಓರ್ವ ಚಿಕ್ಕಬಾಲಕನ ಹೆಗಲಮೇಲೆ ಹತ್ತಿಕೊಂಡು ಹೋದರೆಂದು ಶ್ರೀಸುಮ ಧ್ವಿಜಯ ಮಹಾಕಾವ್ಯದಲ್ಲಿ ನಿರೂಪಿಸಿರುವದು ಸಾಕ್ಷಿಯಾಗಿದೆ. ಆದರಿಂದ, ಇವರು ಪರಶುಕ್ಲತ್ರಯರೆನಿಸುವರು. ಪರ ಅಂದರೆ ಶ್ರೇಷ್ಠ, ಶುಕ್ಲ ಅಂದರೆ ಕಾಂತಿ; ಪರಶುಕ್ಲ ಅಂದರೆ ಶ್ರೇಷ್ಠವಾದ ತೇಜಸ್ಸುಳ್ಳ; ಅರ್ಥಾತ್, ಸತ್ವ ಪ್ರಾಚುರ್ಯದ ಶರೀರವುಳ್ಳವರೆಂಬಭಿಪ್ರಾಯವು. ಪರಶುಕ್ಲತ್ರಯರು ಅಂದರೆ ೧. ಶ್ರೀರಮಾದೇವಿಯರು, ೨. ವಾಯುದೇವರು. ೩. ಭಾರತಾದೇವಿಯರು. ಶ್ರೀಹರಿಗೆ ಪ್ರತಿಬಿಂಬರಾದುದರಿಂದ, ಬಿಂಬನಂತೆ ಕಿಂಚಿನ್ನ್ಯೂನವಾದ ಅವ ಯವ ಸೌಂದರ್ಯವುಳ್ಳವರು. ಅಂತೆಯೇ ದ್ವಾತ್ರಿಂಶತ್ಸಲ್ಲಕ್ಷಣೋಪೇತರಾಗಿ ರುವರು ಶ್ರೀಹರಿಯಂತೆ ಚತುರ್ಭುಜಗಳಿದ್ದು ಅವುಗಳಲ್ಲಿ ಶಂಖ, ಚಕ್ರ, ಗದಾ, ವೇದಗಳನ್ನು ಧರಿಸಿದ್ದಾರೆ. ಪರಬ್ರಹ್ಮನ ಪ್ರತಿಬಿಂಬರೂ, ಪ್ರಥ ಮಾಂಗರೂ ಆದುದರಿಂದ, ಅಪರಬ್ರಹ್ಮರೆನಿಸಿ ರುದ್ರಾದಿ ಜಗತ್ತಿಗೆ ಪ್ರತ್ಯಕ್ಷ ಬ್ರಹ್ಮಸ್ವರೂಪರೇ ಆಗಿರುತ್ತಾರೆ. ಅಂತೆಯೇ, "**ತ್ವಮೇವ ಪ್ರತ್ಯಕ್ಷಂ**

**ಬ್ರಹ್ಮಾಸಿ। ತ್ವಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ"** ಎಂದು ವೇದದಲ್ಲಿ ಘಂಟಾಘೋಷವಾಗಿರುವದು. ಇವರಿಗೆ ಗರ್ಭವಾಸದ ದುಃಖವೂ ಇಲ್ಲ. ಅಂತೆಯೇ ಅಯೋನಿಜರೆನಿಸುವರು. ಈ ವಚನಕ್ಕೆ ಶ್ರೀಮದಾಚಾರ್ಯರು ಹೇಗೆ ಅವತರಿಸಿದರು ? ಎಂಬ ಶ್ರೀಸುಮಧ್ವವಿಜಯದ ವಿವರಣವನ್ನು ಉದಾಹರಿಸಬಹುದು. ಇವರ ಶರೀರದೊಳಗಿನ ಸತ್ವಾದಿ ತ್ರಿಗುಣಗಳಿಗೂ ಬ್ರಹ್ಮಾಂಡೋತ್ಪತ್ತಿಗೆ ಕಾರಣವಾದ ಗುಣತ್ರಯಗಳಿಗೂ ಅತ್ಯಂತ ಭೇದವಿರುವದು. ಇವರ ಶರೀರಗತಗುಣಗಳು ಅತಿಸೂಕ್ಷ್ಮ, ಶುದ್ಧವಾದವು. ಹಾಗೆ ಬ್ರಹ್ಮಾಂಡಕ್ಕೆ ಕಾರಣವಾದ ಗುಣಗಳಲ್ಲ. ಇವರಿಗೆ ಈ ಗುಣಗಳು ಬಂಧಕವಾಗಿರದೆ ಸಹಾಯಕವಾಗಿರುವವು. ಹೀಗಿರುವದರಿಂದೇ, ಇವರ ಶರೀರವು ಲೋಕವಿಲಕ್ಷಣವಾದದ್ದು. ಈ ಜಗತ್ತಿನಲ್ಲಿ ಮಾಡತಕ್ಕ ತಮ್ಮ ವ್ಯಾಪಾರಗಳನ್ನು ಈ ಗುಣತ್ರಯದ ಕಟ್ಟಿನಿಂದ ಮಾಡುತ್ತಿರದೆ, ಕೇವಲ ಶ್ರೀರಮಾನಾರಾಯಣರ ಪ್ರೀತ್ಯರ್ಥವಾಗಿಯೇ ಆಯಾಸವಿಲ್ಲದೆ ಮಾಡುತ್ತಿರುವರು.

(೬) ಇವರು ಅವತಾರಗಳಲ್ಲಿಯೂ ತಮ್ಮ ಮೂಲರೂಪದ ಗುಣಗಳನ್ನೆಲ್ಲ ತೋರಬಲ್ಲರು. ಜರಾಸಂಧನ ಸಂಹಾರಸಮಯದಲ್ಲಿ ಭೀಮಸೇನದೇವರು ತಮ್ಮ ಮೂಲರೂಪದ ಬಲವನ್ನು ತೆಗೆದುಕೊಂಡು ಆ ದೈತ್ಯನನ್ನು ಸಂಹರಿಸಿದರೆಂದು ಶ್ರೀಮದ್ಭಾ. ತಾ. ನಿರ್ಣಯದ ಉಕ್ತಿಯುಂಟು. ಆದರೆ, ಯುಗಪರತ್ವದಿಂದ, ಅವತಾರಗಳಲ್ಲಿ ಮೂಲರೂಪದ ಗುಣಗಳ ಅನವಶ್ಯಕವಾಗಿರುವ ಕಾರಣ, ಅವನ್ನು ಕಿಂಚಿನ್ನ್ಯೂನವಾಗಿ ತೋರುವರು. ಈ ಮಾತಿಗೆ ಶ್ರೀಮದಾಂಜನೇಯರ ಹಾಗೂ ಭೀಮಸೇನದೇವರ ಮಧ್ಯದಲ್ಲಿ ಅಜ್ಞಜನಮೋಹನಾರ್ಥವಾಗಿ ತೋರಿದ ಶಕ್ತಿಪ್ರಯೋಗವೇ ದೃಷ್ಟಾಂತವಾಗಿದೆ.

(೭) ಇವರು ಮಾಡತಕ್ಕ ವಿಶಿಷ್ಟ ವ್ಯಾಪಾರಗಳನ್ನೂ ಸ್ವಪ್ರಯೋಜನಾಪೇಕ್ಷೆಯಿಂದ ಮಾಡದೆ, " **ನಾಹಂ ಕರ್ತಾ ಹರಿಃ ಕರ್ತಾ** " ಎಂಬ ತತ್ವವನ್ನು ಪ್ರತ್ಯಕ್ಷವಾಗಿ ಬಿಂಬಪ್ರತಿಬಿಂಬ ರೂಪಗಳಿಂದ ಕಾಣುತ್ತ, ಅಂತೇ ಮಾಡಿದ್ದೆಲ್ಲವನ್ನೂ "**ಶ್ರೀವಿಷ್ಣು ಪ್ರೇರಣಯಾ ಶ್ರೀವಿಷ್ಣು ಪ್ರೀತ್ಯರ್ಥಂ**" ಎಂಬ ಪೂರ್ಣ ಅನುಸಂಧಾನದಿಂದ ಶ್ರೀಹರಿಗೆ ಸಮರ್ಪಿಸಿ, ತಾವು ನಿಷ್ಕಾಮಕರಾಗಿರುವರು. ಇದರಿಂದೇ, ಇವರು ಸರ್ವಜ್ಞರೂ, ಅಯೋಗ್ಯೇಚ್ಛಾರಹಿತರೂ ಎನಿಸಿ ಸಮಸ್ತ ಜಗತ್ತಿನಿಂದ ಮಾನ್ಯರಾಗಿಹರು.

(೮) ಇವರ ಸ್ವರೂಪಕ್ಕೆ ಜೀವಾಚ್ಛಾದಿಕಾ, ಪರಮಾಚ್ಛಾದಿಕಗಳೆಂಬ ಅಜ್ಞಾನ ಲಕ್ಷಣದ ಪಡದೆಗಳು ಇರುವದಿಲ್ಲ. ದಗ್ಧಲಿಂಗರಾದುದರಿಂದ ಜೀವಾಚ್ಛಾದಿಕವೆಂಬ ಅಜ್ಞಾನದ ತೆರೆಯು ಹರಿದುಹೋಗಿರುವದು. ಜಾತಾಪರೋಕ್ಷಿಗಳಾದುದರಿಂದ ಪರಮಾಚ್ಛಾದಿಕಾಖ್ಯ ತೆರೆಯೂ ಬಯಲಾಗಿ, ಇವರಿಗೆ ಶ್ರೀಹರಿಯು ಸರ್ವದಾ ಪ್ರತ್ಯಕ್ಷನಾಗಿರುವನು. ಮತ್ತು ಸರ್ವದಾ ಶ್ರೀಹರಿಯ ಸನ್ನಿಧಾನವಿಶೇಷ ಪಾತ್ರತ್ವದಿಂದ, ಶುದ್ಧ ಸತ್ವಗುಣಪ್ರಾಚುರ್ಯರಾದ ಇವರಿಗೆ ಅಜ್ಞಾನ, ಸಂಶಯ (ಮೋಹ) ಜ್ಞಾನ, ವಿಪರೀತಜ್ಞಾನ, ಭಯ, ಶೋಕಾದಿಗಳು ಯಾವಕಾಲಕ್ಕೂ, ಎಂಥ ಪ್ರಸಂಗಗಳಲ್ಲೂ ಬಾರವು. ಇವರು ತಮ್ಮ ಬಾಹ್ಯಶರೀರದಲ್ಲಿ ಪೂರ್ಣ ಪ್ರಕಾಶಯುತ ವ್ಯಾಪ್ತಿರೂಪದಿಂದಲೂ, ಲಿಂಗದೇಹದಲ್ಲಿ ಅಣುಸ್ವರೂಪದಿಂದಲೂ ಇದ್ದು ಜ್ಞಾನಾನಂದಾದಿಗಳು ಯಾವಾಗ್ಯೂ ತಿರೋಧಾನವಾಗದೆ ಇರುತ್ತಾರೆ.

(೯) ಅಧಿಕಸಾಧನದಿಂದ ಅಧಿಕ ಫಲಪ್ರಾಪ್ತಿಯು ಕಂಡಿರುವದರಿಂದ, ಇವರು ಜೀವಕೋಟಿಯೊಳಗೆ ಕೇವಲ ಶ್ರೇಷ್ಟರೆಂಬುದು ಅವರ ೨೦೦ ಬ್ರಹ್ಮಕಲ್ಪಗಳ ಸಾಧನದಿಂದಲೇ ಸ್ಪಷ್ಟವಾಗುವದು.

(೧೦) ಇವರು ಬ್ರಹ್ಮಪಟ್ಟದ ಅಪೇಕ್ಷೆಯಿಂದ ಭಗವಂತನನ್ನು ಭಜಿಸಿ ಅದನ್ನು ಪಡೆಯುವದಿಲ್ಲ. ಆದರೆ, ಅದು ಕೇವಲ ಶ್ರೀರಮಾನಾರಾಯಣರ ಪರಮಾನುಗ್ರಹದಿಂದಲೇ ಅಪ್ರಾರ್ಥಿತವಾಗಿ ಪ್ರಾಪ್ತವಾಗುವದು. ಬ್ರಹ್ಮಾಂಡದೊಳಗೆ ಈ ಪದವಿಗೆ ಸದೃಶವಾದ ಹೆಚ್ಚಿನ ಸೌಭಾಗ್ಯವು ಮತ್ತೊಂದಿಲ್ಲ. ಹೀಗಿದ್ದಾಗ್ಯೂ, ಇದನ್ನೂ ಕೂಡ ಅವರು ಅಪೇಕ್ಷಿಸದೆ ಇರುವದರಿಂದ ಅವರಂಥ ನೈಷ್ಠಿಕ ವಿರಕ್ತರು ಮತ್ತ್ಯಾರೂ ಶ್ರೀಹರಿಯ ಸೃಷ್ಟಿಯಲ್ಲಿ ಇಲ್ಲವೆಂದೇ ಅಭಿಪ್ರಾಯವು. ರುದ್ರಾದಿ ಶ್ರೇಷ್ಠದೇವತೆಗಳಿಗೆ ದೃಢವೈರಾಗ್ಯವು ಇವರನುಗ್ರಹದಿಂದಲೇ ಪ್ರಾಪ್ತವಾಗುವದು.

(೧೧) ಶ್ರೀರಮಾತ್ಮಕವಿರಜಾಸ್ನಾನವು ಇವರಿಗೆ ಒಟ್ಟಿಗೆ ತ್ರಿವಾರ ಲಭಿಸುವದರಿಂದ, ಶ್ರೀರಮಾದೇವಿಯರ ಅನುಗ್ರಹವು ಬಹು ಹೆಚ್ಚಾಗಿ, ಅದರಿಂದೇ ಶ್ರೀರಮಾಲಿಂಗಿತನಾದ ಶ್ರೀಹರಿಯ ಸರ್ವಾಂಗಸಾಯುಜ್ಯಭೋಗವನ್ನು ಭೋಗಿಸುವರು. ಸರ್ವಾಂಗಸಾಯುಜ್ಯಭೋಗವೆಂದರೆ:— ಪರಮಾತ್ಮನ

ಅಂಗಾಂಗಗಳಲ್ಲಿದ್ದುಕೊಂಡು ತದ್ವಾರ ತಮ್ಮ ನೈಜ ಸುಖಾನುಭವವನನ್ನನು ಭವಿಸೋಣವು. ಮುಕ್ತಬ್ರಹ್ಮರು ತಮ್ಮ ಸರ್ವೇಂದ್ರಿಯಗಳ ಭೋಗಗಳನ್ನು ಮೂಲಬಿಂಬನಾದ ಶ್ರೀಹರಿಯ ಆಯಾ ಇಂದ್ರಿಯಗಳ ಭೋಗದ್ವಾರ ತಂತಮ್ಮ ಯೋಗ್ಯತಾನುಸಾರವಾಗಿ ಭೋಗಿಸುವರು. ಮಿಕ್ಕ ಮುಕ್ತತತ್ವೇಶರು ತಮ್ಮ ತಮ್ಮ ತತ್ವಸ್ಥಾನಗಳಲ್ಲಿದ್ದು ತಂತಮ್ಮ ಸುಖಗಳನ್ನಷ್ಟೇ ಭೋಗಿಸುವರು. ಉಳಿದ ಭೋಗಗಳು ಇವರಿಗಿಲ್ಲ. ಇವರದು ಸಾಯುಜ್ಯಭೋಗವೆನಿಸುವದು.

(೧೨) ವಾಯುದೇವರ ಹಾಗೂ ಇವರ ನೀತ ಸತಿಯಾದ ಭಾರತಾ ದೇವಿಯರ ದಾಂಪತ್ಯವು ಶ್ರೀರಮಾನಾರಾಯಣರಂತೆಯೇ ವ್ಯತ್ಯಾಸ ಹೊಂದ ದಂಥಾದ್ದು. ಅದು ಅವತಾರಗಳಲ್ಲಿಯೂ ಸಹ ವ್ಯತ್ಯಾಸವೈದುವದಿಲ್ಲ. ಮತ್ತು ತಾರತಮ್ಯ ಕ್ರಮದಲ್ಲಿಯೂ ಈ ಸತಿಪತಿಯರ ಮಧ್ಯದಲ್ಲಿ ಅನ್ಯರಿಗೆ ಸ್ಥಾನವಿರದೆ ಪತಿಯ ಕೆಳಗೇನೆ ಈ ಸತಿಯರಿಗೆ ಸ್ಥಾನವುಂಟು. ಇದೇ ನೀತದಾಂಪತ್ಯವೆನಿ ಸುವದು. ಹೀಗಿರಲು ಈ ಸತಿ ಪತಿಯರ ಶರೀರಗಳ ನಿರ್ಮಾಣದ ತತ್ವವು ಒಂದೇ ಆಗಿರುವದೇ ಮುಖ್ಯ ಕಾರಣವು. ಇಂಥ ದಾಂಪತ್ಯವು ರುದ್ರಾದಿ ಮಿಕ್ಕ ದೇವತೆಗಳದಲ್ಲ. ಈ ತಾರತಮ್ಯದ ಕ್ರಮವು ಈ ದಂಪತಿಗಳಲ್ಲಿಲ್ಲ ಅವರಿಗೆ ಅವತಾರಗಳಲ್ಲಿ ದೋಷಮೂಲಕ ಒಮ್ಮೊಮ್ಮೆ ಅನ್ಯಸಂಬಂಧವಾಗು ವದುಂಟು. ಈ ಮಾತಿಗೆ ಶಚ್ಯಾದಿದೇವಿಯರು ದೃಷ್ಟಾಂತರು.

(೧೩) ಬಿಂಬನ ಗುಣ. ರೂಪ, ಕ್ರಿಯೆಗಳ ಸಾದೃಶ್ಯವು ಪ್ರತಿಬಿಂಬ ನಲ್ಲಿ ಯತ್ಕಿಂಚಿತ್ತಾದರೂ ಇರುವದು ಅನುಭವಸಿದ್ಧವಾಗಿದ್ದು " **ವಿಶ್ವವ್ಯಾಪಕ ಹರಿಗೆ ತಾ ಸಾ । ದೃಶ್ಯರೂಪವ ಧರಿಸಿ ಪವನ** " ಎಂದು ವಾಯು ದೇವರ ವಿಷಯವಾಗಿ ಹೇಳಿದ ಶ್ರೀಜಗನ್ನಾಥದಾಸರಾಯರ ಉಕ್ತಿಯಂತೆ, ಈ ಜಗತ್ತಿನ ವ್ಯಾಪಾರಗಳಲ್ಲಿ ಕಾಣತಕ್ಕ ಈ ಉಭಯತರ ಕ್ರಿಯಗಳ ಸಾಮ್ಯತ್ವವು ಬಹುವಾಗಿರುವದು.

ಇದೇ ವಿಷಯವಾಗಿ ಮಹಾಜ್ಞಾನಿಗಳಾದ ಶ್ರೀ ವ್ಯಾಸರಾಯರ ಪ್ರೀತಿಗೆ ಕೇವಲ ಪಾತ್ರರಾಗಿದ್ದ ಕನಕದಾಸರು " **ಅರಸಿನಂತೆ ಬಂಟನು । ಹನುಮ ರಾಯ । ಧೊರೆಯಂತೆ ಮಹಧೀರನು॥** " ಎಂಬ ಪದ್ಯವನ್ನು ರಚಿಸಿದ್ದು, ಅದರಲ್ಲಿ ಶ್ರೀಹರಿ ವಾಯುದೇವರ ಬಿಂಬ ಪ್ರತಿಬಿಂಬ ಕ್ರಿಯಗಳ ಸಾಮ್ಯವನ್ನು ಸರಸವಾಗಿ ವರ್ಣಿಸಿದ್ದಾರೆ.

# ಶ್ರೀಹರಿ ವಾಯುದೇವರ ಕ್ರಿಯಾಸಾಮ್ಯತ್ವ.

| | ಬಿಂಬನಾದ ಭಗವಂತನ ವ್ಯಾಪಾರಗಳು. | ಪ್ರತಿಬಿಂಬರಾದ ವಾಯುದೇವರ ವ್ಯಾಪಾರಗಳು. |
|---|---|---|
| ೧. | ಜೀವರ ( ಸೂಕ್ಷ್ಮ ) ಸೃಷ್ಟಿ, ಸ್ಥಿತಿ, ಲಯ ಕರ್ತನು. | ಜೀವರ (ಸ್ಥೂಲ) ಸೃಷ್ಟಿ, ಸ್ಥಿತಿ, ಲಯ ಕರ್ತರು. |
| ೨. | ಅಣೋರಣೀಯಾನ್ ಮಹತೋ ಮಹೀಯಾನ್ | ಅಣೋರಣೀಯಾನ್ ಮಹತೋ ಮಹೀಯಾನ್. |
| ೩. | ಅನಂತಕೋಟಿ ಬ್ರಹ್ಮಾಂಡಗಳ ನಾಯಕನು. | ಪ್ರಕೃತ ಬ್ರಹ್ಮಾಂಡದ ನಾಯಕರು. |
| ೪. | ಒಂದೊಂದು ರೋಮಕೂಪದಲ್ಲಿ ಕೋಟಿ ಬ್ರಹ್ಮಾಂಡಗಳನ್ನು ಧರಿಸಿಹನು. | ಒಂದೊಂದು ರೋಮದಿಂದ ಕೋಟಿಲಿಂಗಗಳನ್ನು ಧರಿಸಿದರು. |
| ೫. | ಅನಂತ ಬ್ರಹ್ಮಾಂಡಗಳ ಅಶೇಷವಿಶೇಷ ಜ್ಞಾನಪೂರ್ಣ | ಪ್ರಕೃತ ಬ್ರಹ್ಮಾಂಡದ ಅಶೇಷವಿಶೇಷ ಜ್ಞಾನಪೂರ್ಣ. |
| ೬. | ಕೂರ್ಮನಾಗಿ ಮಹಶೇಷಗಾಧಾರನಾಗಿಹನು. | ಕೂರ್ಮರಾಗಿ ಹರಿಕೂರ್ಮಗೆ ಪೀಠರಾಗಿರುವರು. |
| ೭. | ಕಾಲ ಕಾಲಗಳಲ್ಲಿ ಧರ್ಮಸ್ಥಾಪನೆಗೈಯ್ವನು. | ಕಾಲ ಕಾಲಗಳಲ್ಲಿ ಶ್ರೀಹರಿಮತ ಸ್ಥಾಪನೆಗೈಯ್ವರು. |
| ೮. | ಸಮುದ್ರವನ್ನು ಹೊಕ್ಕು ವೇದವನ್ನು ತಂದನು. | ಸಮುದ್ರವನ್ನು ಹಾರಿ ಚೂಡಾರತ್ನವನ್ನು ತಂದರು. |
| ೯. | ಹತವೀರ್ಯರಾದ ಸುರರಿಗೆ ಅಮೃತವನ್ನುಣಿಸಿದನು. | ಮೃತರಾದ ಕಪಿಗಳನ್ನು ಸಂಜೀವಿನಿಯಿಂದ ಬದುಕಿಸಿದರು |
| ೧೦. | ವನಚರವಾದ ವರಹರೂಪವನ್ನು ತಾಳಿದನು. | ವನಚರವಾದ ಕಪಿರೂಪವನ್ನು ಧರಿಸಿದರು. |
| ೧೧. | ನೃಸಿಂಹನಾಗಿ ಹಿರಣ್ಯಕಶ್ಯಪನ ಉದರ ಬಗೆದನು. | ಭೀಮರಾಗಿ ದುಶ್ಯಾಸನನ ಉದರ ಬಗೆದರು. |
| ೧೨. | ವಾಮನನಾಗಿ ಭೂಮಿಯನ್ನು ಯಾಚಿಸಿದನು. | ಭೀಮಸೇನರಾಗಿ ಅನ್ನವನ್ನು ಯಾಚಿಸಿದರು. |
| ೧೩. | ನೈಷ್ಠಿಕ ಬ್ರಹ್ಮಚರ್ಯದ ಪರಶುರಾಮದೇವರು. | ನೈಷ್ಠಿಕ ಬ್ರಹ್ಮಚರ್ಯದ ಹನುಮಂತದೇವರು. |

| | | |
|---|---|---|
| ೧೪. | ಭೂಮಿಜೆಯಾದ ಶ್ರೀಸೀತಾದೇವಿಯ ಪತಿಯು. | ಅಗ್ನಿಜಳಾದ ಶ್ರೀದ್ರೌಪದಾದೇವಿಯರ ಪತಿಗಳು. |
| ೧೫. | ಪರಶುರಾಮದೇವರು ಹಾಗೂ ರಾಮದೇವರು ತಮ್ಮ ತಮ್ಮೊಳಗೆ ಕಪಟ ಯುದ್ಧವನ್ನು ಮಾಡಿದರು. | ಆಂಜನೇಯರು ಹಾಗೂ ಭೀಮಸೇನದೇವರು ತಂತಮ್ಮೊಳಗೆ ಕಪಟ ಶಕ್ತಿಯಾಟವನ್ನು ಆಡಿದರು. |
| ೧೬. | ಭ್ರಾತೃ ಸತಿಸಹಿತ ಶ್ರೀರಾಮದೇವರು ವನವಾಸಿಯಾಗಿದ್ದರು. | ಭ್ರಾತೃಗಳು ಸತಿಸಹಿತ ಭೀಮಸೇನದೇವರು ವನವಾಸಗೈದರು. |
| ೧೭. | ಮಂದರಾದ್ರಿಯನ್ನು ಕಿರಿಬೆರಳಿಂದೆತ್ತಿ ಹಿಡಿದನು. | ದ್ರೋಣಾದ್ರಿಯನ್ನು ಒಕ್ಕೈಯಿಂದ ನೆಗಹಿ ತಂದರು. |
| ೧೮. | ಮಹಾ ಕಾಳಿಸರ್ಪನ ಹೆಡೆಯನ್ನು ತುಳಿದನು. | ಮಹಾ ಸರ್ಪಗಳ ಹೆಡೆಗಳನ್ನು ತುಳಿದೊರಸಿದರು. |
| ೧೯. | ದಹಿಸುವ ಕಾಡಾಗ್ನಿಯನ್ನು ನುಂಗಿದನು. | ದಹಿಸುವ ಕಾಲಕೂಟವನ್ನು ಅರಗಿಸಿಕೊಂಡರು. |
| ೨೦. | ಕಲಿಯಂಶದ ಕಂಸಾದಿಗಳನ್ನು ಮರ್ದಿಸಿದನು. | ಕಲಿಯಂಶದ ದುರ್ಯೋಧನಾದಿಗಳನ್ನು ಮರ್ದಿಸಿದರು. |
| ೨೧. | ಕರಡಿಯ ಸಹವಾಸಮಾಡಿ ಮಗನನ್ನು ಪೆತ್ತನು. | ರಾಕ್ಷಸಿಯ ಸಹವಾಸಮಾಡಿ ಮಗನನ್ನು ಪಡೆದರು. |
| ೨೨. | ಮುನಿವೇಷವನ್ನು ತಾಳಲು ವೇದವ್ಯಾಸನಾದನು. | ಸನ್ಯಾಸವನ್ನು ವಹಿಸಲು ಮಧ್ವಾಚಾರ್ಯರಾದರು. |
| ೨೩. | ವೇದವ್ಯಾಸನಾಗಿ ವೇದವಿಭಾಗಮಾಡಿ ಬ್ರಹ್ಮಸೂತ್ರ, ಭಾರತ, ಭಾಗವತಾದಿ ಸಚ್ಛಾಸ್ತ್ರ ರಚಿಸಿದನು. | ಮಧ್ವಾಚಾರ್ಯರಾಗಿ ಕುಮತಗಳ ವಿಧ್ವಂಸಮಾಡಿ ಸೂತ್ರಭಾಷ್ಯ, ನಿರ್ಣಯಾದಿ ಸದ್ಗ್ರಂಥಗಳನ್ನು ರಚಿಸಿದರು. |

ಶ್ರೀಮದ್ರಾಮಾಯಣ, ಭಾರತಾದಿ ಪುರಾಣಗಳ ಮಾರ್ಮಿಕ ವಿಮರ್ಶೆಯಿಂದ, ಶ್ರೀಹರಿ ವಾಯುದೇವರ ಮಧ್ಯದ ಕ್ರಿಯಾಸಾಮ್ಯಗಳು ಇನ್ನೂ ಅನೇಕವಾಗಿ ಕಾಣಬರುವವು. ಆದರೆ, ಗ್ರಂಥ ವಿಸ್ತಾರದ ಭಯದಿಂದ ಇಲ್ಲಿಗೇನೆ ಈ ವಿಷಯವನ್ನು ನಿಲ್ಲಿಸಿದೆ.

ಶ್ರೀಗುರುಮಧ್ವೇಶಾರ್ಪಣಮಸ್ತು.

## ಪರಿಶಿಷ್ಟ ೩.

# ಶ್ರೀಮದಾಚಾರ್ಯವರ್ಯರು ವಿರಚಿಸಿದ ಮೂಲ ೩೭ ಮಹದ್ಗ್ರಂಥಗಳ ಅತಿ ಸಂಕ್ಷೇಪ ವಿಷಯನಿರೂಪಣ

( ಈ ಗ್ರಂಥಗಳು ಅವುಗಳ ರಚನೆಯ ಕ್ರಮವನ್ನನುಸರಿಸಿ ಇಲ್ಲಿ ಹೇಳಲ್ಪಟ್ಟಿವೆ. )

ಶ್ರೀಮದಾಚಾರ್ಯರು ಸ್ವಕಲ್ಪನೆಯ ಶಬ್ದಗಳಿಂದಲ್ಲದೆ, ಕೇವಲ ವೇದಾದಿ ಸಚ್ಛಾಸ್ತ್ರ ವಚನಗಳಿಂದಲೇ ತಮ್ಮ ಮೂಲ ಮೂವತ್ತೇಳು ಗ್ರಂಥಗಳನ್ನೂ ರಚಿಸಿ, ಅಂಥ ಪ್ರತಿಯೊಂದರಿಂದಲೂ ಶ್ರೀಹರಿಸರ್ವೋತ್ತಮತ್ವಪೂರ್ವಕವಾಗಿ, " **ಶ್ರೀಮನ್ಮಧ್ವಮತೇ ಹರಿಃ ಪರತರಃ** " ಎಂಬ ಶ್ಲೋಕದಲ್ಲಿ ಹೇಳಿದ ತತ್ವಗಳನ್ನೊಳಗೊಂಡ ದ್ವೈತಸಿದ್ಧಾಂತವನ್ನು, ಅದ್ವೈತಾದಿ ೨೧ ಕುಮತಗಳ ಖಂಡನಪೂರ್ವಕವಾಗಿ, ಪ್ರತಿಪಾದನಗೈದು ಸುಭದ್ರವಾಗಿ ಸ್ಥಾಪಿಸಿದರು. ಇವರ ಈ ಮಹದ್ಗ್ರಂಥಗಳು ರುದ್ರಾದಿದೇವತೆಗಳಿಂದಲೂ ಪೂಜ್ಯವಾಗಿದ್ದು, ಅವುಗಳ ರಚನೆಯ ಕ್ರಮ, ಹೆಸರು, ಶ್ಲೋಕ ಸಂಖ್ಯಾ, ಆಯಾ ಗ್ರಂಥಗಳ ಸಂಕ್ಷೇಪ ವಿಷಯನಿರೂಪಣಗಳು ಇಲ್ಲಿ ಕೊಡಲ್ಪಟ್ಟಿವೆ. ಆ ವಿವರ :—

| ಕ್ರಮ. | ಗ್ರಂಥ | ಶ್ಲೋ. ಸಂಖ್ಯಾ | ಕ್ರಮ. | ಗ್ರಂಥ | ಶ್ಲೋ. ಸಂಖ್ಯಾ |
|---|---|---|---|---|---|
| ೧. | ಗೀತಾ ಭಾಷ್ಯ. | ೧೩೮೫ | ೫. | ಪ್ರಮಾಣಲಕ್ಷಣ. | ೫೪ |
| ೨. | ಬ್ರಹ್ಮಸೂತ್ರ ಭಾಷ್ಯ. | ೨೧.೫೦ | ೬. | ಕಥಾಲಕ್ಷಣ. | ೩೫ |
| ೩. | ಅಣುಭಾಷ್ಯ. | ೩೩ | ೭ | ಉಪಾಧಿಖಂಡನ. | ೨೧ |
| ೪. | ಅನುವ್ಯಾಖ್ಯಾನ. | ೧೯೫೫ | ೮. | ಮಾಯಾವಾದಖಂಡನ. | ೨೦ |

| ಕ್ರಮ | ಗ್ರಂಥ | ಶ್ಲೋ. ಸಂಖ್ಯಾ | ಕ್ರಮ | ಗ್ರಂಥ | ಶ್ಲೋ. ಸಂಖ್ಯಾ |
|---|---|---|---|---|---|
| ೯. | ಪ್ರಪಂಚಮಿಥ್ಯಾತ್ವಾನುಮಾನಖಂಡನ. | ೧೧ | ೨೪. | ಷಟ್ಪ್ರಶ್ನೋಪನಿಷದ್ಭಾಷ್ಯಾ. | ೪೪ |
| ೧೦. | ತತ್ವಸಂಖ್ಯಾನ. | ೧೧ | ೨೫. | ತಳವಕಾರೋಪನಿಷದ್ಭಾಷ್ಯಾ. | ೪೭ |
| ೧೧. | ತತ್ವವಿವೇಕಾ. | ೧೩ | ೨೬. | ಗೀತಾತಾತ್ಪರ್ಯನಿರ್ಣಯ. | ೧೩೦೦ |
| ೧೨. | ತತ್ವದ್ಯೋತ. | ೧೨೩ | ೨೭. | ನ್ಯಾಯವಿವರ್ಣ. | ೫೧೨ |
| ೧೩. | ಕರ್ಮನಿರ್ಣಯ. | ೨೬೮ | ೨೮. | ನೃಸಿಂಹನಖಸ್ತುತಿ. | ೫ |
| ೧೪. | ವಿಷ್ಣುತತ್ವವಿನಿರ್ಣಯ. | ೫೪೦ | ೨೯. | ಯಮಕಭಾರತ. | ೧೦೪ |
| ೧೫. | ಋಗ್ಭಾಷ್ಯಾ. | ೮೭೫ | ೩೦. | ದ್ವಾದಶಸ್ತೋತ್ರ. | ೧೭೪ |
| ೧೬. | ಐತರೇಯೋಪನಿಷದ್ಭಾಷ್ಯಾ. | ೧೭೦೦ | ೩೧. | ಕೃಷ್ಣಾಮೃತಮಹಾರ್ಣವ. | ೨೮೬ |
| ೧೭. | ತೈತ್ತರೇಯೋಪನಿಷದ್ಭಾಷ್ಯಾ. | ೨೬೫ | ೩೨. | ತಂತ್ರಸಾರ. | ೪೬೨ |
| ೧೮. | ಬೃಹದಾರಣ್ಯಕೋಪನಿಷದ್ಭಾಷ್ಯಾ. | ೧೯೦೦ | ೩೩. | ಸದಾಚಾರಸ್ಮೃತಿ. | ೪೪ |
| ೧೯. | ಈಶಾವಾಸ್ಯೋಪನಿಸದ್ಭಾಷ್ಯಾ. | ೫೬ | ೩೪. | ಶ್ರೀಮದ್ಭಾಗವತತಾತ್ಪರ್ಯ. | ೪೩೦೦ |
| ೨೦. | ಕಾಠಕೋಪನಿಷದ್ಭಾಷ್ಯಾ. | ೧೭೧ | ೩೫. | ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ. | ೬೬೧೬ |
| ೨೧. | ಛಾಂದೋಗ್ಯೋಪನಿಷದ್ಭಾಷ್ಯಾ. | ೧೨೫೦ | ೩೬. | ಯತಿಪ್ರಣವಕಲ್ಪ. | ೨೮॥ |
| ೨೨. | ಅಥರ್ವಣೋಪನಿಷದ್ಭಾಷ್ಯಾ. | ೧೨೧ | ೩೭. | ಜಯಂತಿನಿರ್ಣಯ. | ೧೭॥ |
| ೨೩. | ಮಾಂಡೂಕೋಪನಿಷದ್ಭಾಷ್ಯಾ. | ೧೨೯ | ೩೭. | ಒಟ್ಟು ಶ್ಲೋಕಸಂಖ್ಯಾ:— | ೨೭,೦೧೬ |

## ಗ್ರಂಥಗತ ವಿಷಯ ಸಂಕ್ಷೇಪ ನಿರೂಪಣ

೧. **ಗೀತಾಭಾಷ್ಯ :**— ಇದೇ ಶ್ರೀಮದಾಚಾರ್ಯರ ಪ್ರಥಮ ಗ್ರಂಥವು. ಇದು ಭಗವದ್ಗೀತೆಗೆ ವ್ಯಾಖ್ಯಾನರೂಪವಾಗಿದ್ದು, ಸತ್ಕರ್ಮಗಳದ್ವಾರ ಮನಶುದ್ಧಿ, ತದ್ವಾರ ಭಕ್ತಿ, ವೈರಾಗ್ಯ, ಪರಮಾತ್ಮನ ರೂಪ ಚಿಕಿತ್ಸಾ, ಶಾಸ್ತ್ರ ಜನ್ಯ ಪರಮಾತ್ಮನ ಪರೋಕ್ಷಜ್ಞಾನ, ಅಪರೋಕ್ಷಜ್ಞಾನ, ಹೀಗೆ ಒಂದರಿಂದ ಮತ್ತೊಂದು ಈ ಕ್ರಮದಿಂದ ಕ್ರಮೇಣ ಲಭ್ಯವಾಗಿ, ಅವು ಅಭಿವೃದ್ಧಿಯೈದಿದ ಬಳಿಕ, ಪರಮಾತ್ಮನ ವಿಶೇಷಾನುಗ್ರಹರೂಪದ ಪ್ರಸಾದದಿಂದ, ಮೋಕ್ಷಪ್ರಾಪ್ತಿ ಯಾಗುವದೆಂಬ ವಿಷಯವು ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿರುತ್ತದೆ.

೨. **ಸೂತ್ರಭಾಷ್ಯ :**— ಭಗವಾನ್ ಶ್ರೀಮದ್ವೇದವ್ಯಾಸದೇವರು ರಚಿಸಿದ ೫೬೪ ಬ್ರಹ್ಮಸೂತ್ರಗಳಿಗೆ, ಅನ್ಯರು ರಚಿಸಿದ ೨೧ ಕುಭಾಷ್ಯಗಳ ಖಂಡನ ಪೂರ್ವಕವಾಗಿ, ಯಥಾರ್ಥವಾದ ದ್ವೈತವಾದವೇ ಸಿದ್ಧಾಂತ ರೂಪ ವಾದದ್ದೆಂದು ಜ್ಞಾನಶ್ರೇಷ್ಠರು ಮೆಚ್ಚುವಂತೆ ರಚಿಸಿದ ಉದ್ಗ್ರಂಥವಿದು.

೩. **ಅಣುಭಾಷ್ಯ :**— ಸೂತ್ರಗಳ ವಿಷಯಗಳನ್ನು ಅತಿ ಸಂಕ್ಷೇಪ ವಾಗಿ ರಚಿಸಿ, ನಿತ್ಯಪಾರಾಯಣಕ್ಕೆ ಅನುಕೂಲಮಾಡಿದ್ದು, ಅದರ ಒಂದೊಂದು ಪದದಿಂದಲೂ ಅನೇಕ ಸೂತ್ರಾರ್ಥಗಳು ಕ್ರೋಢೀಕರಿಸಲ್ಪಟ್ಟು ಬಹು ಚಮ ತ್ಕಾರದಿಂದ ನಿರೂಪಿತವಾಗಿರುವವು.

೪. **ಅನುವ್ಯಾಖ್ಯಾನ :**—ಬ್ರಹ್ಮಸೂತ್ರಗಳ ವಿಷಯಗಳನ್ನೇ ಹೆಚ್ಚು ವಿಶದಪಡಿಸಿ, ಪರಮತಖಂಡನಪೂರ್ವಕವಾಗಿ ಸ್ವ (ದ್ವೈತ) ಮತವನ್ನು ಪ್ರತಿಪಾದಿಸಿ ಸಿದ್ಧಮಾಡಿ ತೋರಿಸಿದ್ದಾರೆ ಇದು ಅರ್ಥಗಾಂಭೀರ್ಯದಿಂದ ಅತಿ ಗಹನವಾದ ಗ್ರಂಥವಾದುದರಿಂದಲೇ, ಇದಕ್ಕೆ ಟೀಕಾರೂಪವಾಗಿ " **ಶ್ರೀಮನ್ನ್ಯಾಯಸುಧಾ** " ಎಂಬ ಬೃಹದ್ಗ್ರಂಥವು ಶ್ರೀಮಜ್ಜಯ ತೀರ್ಥಾಖ್ಯ ಟೀಕಾಚಾರ್ಯರಿಂದ ರಚಿಸಲ್ಪಟ್ಟಿತು.

೫. **ಪ್ರಮಾಣಲಕ್ಷಣ :**- ಬ್ರಹ್ಮಾಂಡದಲ್ಲಿ ಪ್ರತ್ಯಕ್ಷವಾಗಿ ಕಾಣತಕ್ಕ ವಸ್ತುತ್ರಯಗಳಾದ **ಈಶ, ಜೀವ, ಜಡ**ಗಳ ನಿಜ ಸ್ವರೂಪಜ್ಞಾನವಾಗಲಿಕ್ಕೆ **ಆಗಮ, ಅನುಮಾನ, ಪ್ರತ್ಯಕ್ಷ,** ಈ ಮೂರು ಪ್ರಮಾಣಗಳ ಆಧಾರವು ಅತ್ಯವಶ್ಯಕವಾದದ್ದು. ಈ ಪ್ರಮಾಣಗಳಲ್ಲಿ ಸ್ವತಂತ್ರವಾದ ಆಗಮ (ವೇದ)

ದಿಂದೇ ನಿಶ್ಚಯವಾದ ಜ್ಞಾನವು ಲಭಿಸುವದು. ಇದಕ್ಕೆ ಅನ್ಯ ಪ್ರಮಾಣಗಳ ಸಹಾಯ ಬೇಕಾಗಿಲ್ಲ. ಅಂತೇ, ಇದು ಅತಿ ಶ್ರೇಷ್ಠವಾದದ್ದೆನಿಸುತ್ತದೆ. ಆದರೆ, ಅನುಮಾನ, ಪ್ರತ್ಯಕ್ಷಗಳು ಸ್ವತಂತ್ರ ಪ್ರಮಾಣಗಳೆನಿಸುವದಿಲ್ಲ. ಅವು ಆಗಮದ ಸಾಪೇಕ್ಷಸಹಾಯಕವಾದವು. ಆಗಷ್ಟೇ, ಅವು ನಿಶ್ಚಾಯಿಕವಾಗಿ ಗ್ರಹಿಸಲ್ಪಡುವವು. ಆಗಮದ ಅನುಕೂಲತೆಯಿಲ್ಲದಿರಲು ಇವು ಅಗ್ರಾಹ್ಯಗಳೇ ಸರಿ.

೬. **ಕಥಾಲಕ್ಷಣ** :— ಈ ಗ್ರಂಥವು ಭಾಗತ್ರಯಗಳುಳ್ಳದ್ದು. ೧ನೇ **ವಾದಕಥಾ** ಎಂಬುದು, ಗುರು ಶಿಷ್ಯರ ಪ್ರಶ್ನೋತ್ತರ ರೂಪವಾಗಿದ್ದು, ಕೇವಲ ಶ್ರೀವಿಷ್ಣು (ಪರ) ತತ್ವನಿರ್ಣಯಕ್ಕಾಗಿಯೇ ಮಾಡಲ್ಪಡುವ ವಾದವು. ೨ನೇ **ಜಲ್ಪಕಥಾ** ಎಂಬುದರಲ್ಲಿ, ನ್ಯಾಯಾನ್ಯಾಯದ ವಿಚಾರವೇನಿರದೆ, ಕೇವಲ ಜಯಪ್ರಾಪ್ತಿಗಾಗಿಯೇ ಮಾಡುವ ವಾದವು. ೩ನೇ **ವಿತಂಡಕಥಾ** ಎಂಬುದು, ಸ್ವಮತವನ್ನು ಹೇಳದೆ ವಾದಿಯ ಮತವನ್ನು ಮಾತ್ರ ನಿಗ್ರಹಿಸುವ ವಾದವು. ಇದನ್ನೇ ಪಾಖಂಡಿಯು ತನ್ನ ಮತಸ್ಥಾಪನೆಗಾಗಿ ಅನುಸರಿಸಿರುವನು.

೭. **ಉಪಾಧಿಖಂಡನ** :— ಜೀವತ್ವವೆಂಬ ಉಪಾಧಿಯ ಮೂಲಕ, ಒಂದೇ ವಸ್ತುವಾದ ಬ್ರಹ್ಮನು ಜೀವ, ಜಡಾತ್ಮಕ ಭಿನ್ನರೂಪನಾಗಿ ಕಾಣುತ್ತಾನೆ. ಆ ಉಪಾಧಿ ನಾಶದಿಂದ ಆ ಭಿನ್ನತ್ವವೂ ನಾಶ ಹೊಂದುವದು. ಆದರಿಂದ, ಭೇದವು ವ್ಯಾವಹಾರಿಕವೇ ವಿನಾ ಸತ್ಯವಾದದ್ದಲ್ಲ, ಎಂದು ವಾದಿಯ ಮತವು. ಆದರೆ, ಉಪಾಧಿಯು ಸತ್ಯವಾಗಿದ್ದ ಭೇದವನ್ನಷ್ಟೇ ಮಾತ್ರ ತೋರಿಸಬಲ್ಲದೇ ವಿನಾ, ಇರದಿದ್ದ ಭೇವವನ್ನು ಹೊಸದಾಗಿ ಹುಟ್ಟಿಸಲಾರದೆಂದೂ, ಈಶ, ಜೀವ, ಜಡಾತ್ಮಕ ಪ್ರಪಂಚವೆಲ್ಲ ಕೇವಲ ಸತ್ಯವಾದದ್ದೆಂದೂ, ಇವುಗಳ ಮಧ್ಯದಲ್ಲಿ ಭೇದವು ಸರ್ವದಾ ಇರತಕ್ಕದ್ದೇ ಪ್ರತ್ಯಕ್ಷ ಸಿದ್ಧವಾದದ್ದೆಂದೂ ಪ್ರತಿಪಾದಿಸುವ ಮೂಲಕವಾಗಿ, ಅದ್ವೈತಮತವನ್ನು ಸಂಪೂರ್ಣವಾಗಿ ಖಂಡಿಸಿದ್ದಾರೆ.

೮. **ಮಾಯಾವಾದಖಂಡನ** :— **"ಬ್ರಹ್ಮನೊಬ್ಬನೇ ಸತ್ಯ, ಮಿಕ್ಕಾದ್ದೆಲ್ಲ ಮಿಥ್ಯ"** ಎಂದೂ, ಆ ಬ್ರಹ್ಮನು ನಿರಾಕಾರ, ನಿರ್ಗುಣ, ನಿಷ್ಕ್ರಿಯ, ನಿರವೇದ್ಯ, ಅನಿರ್ವಾಚ್ಯ, ಅತಏವ, ಬೌದ್ಧಮತದ ಶೂನ್ಯಸದೃಶ

ನಾದವನೆಂದೂ ಹೇಳುವ ಅದ್ವೈತಮತದ ಶುಷ್ಕವಾದವನ್ನು ಪೂರ್ಣ ಖಂಡಿಸಿ, ಬ್ರಹ್ಮನಂತೆ ಜೀವರೂ, ಜಡಗಳೂ ಸತ್ಯ ಹಾಗೂ ನಿತ್ಯವಾದವೆಂದೇ ಪ್ರತಿಪಾದಿಸಿ ಸಿದ್ಧಮಾಡಿರುವರು.

೯. **ಪ್ರಪಂಚಮಿಥ್ಯಾತ್ವಾನುಮಾನಖಂಡನ** :— ವಾದಿ (ಅದ್ವೈತಿ) ಯು ಮೇಲೆ ಹೇಳಿದಂತೆ ತನ್ನ ಮತವನ್ನು ವಿವಿಧ ಅನುಮಾನ ಗಳಿಂದ ಹೇಳಲ್ಹೋದದ್ದನ್ನು ಸಚ್ಛಾಸ್ತ್ರ ವಚನಗಳಿಂದೇ ಪೂರ್ಣ ಖಂಡಿಸಿ, ಸತ್ಯನಾದ ಬ್ರಹ್ಮನ ಸೃಷ್ಟಿಯು ಸರ್ವಥಾ ಮಿಥ್ಯಾ ಆಗಿರದೆ ಸತ್ಯ ಹಾಗೂ ಪೂರ್ಣ ಪ್ರಯೋಜಕವಾದದ್ದೆಂದು ಸಿದ್ಧಮಾಡಿರುವರು. ಅನುಮಾನವು ಮನಸ್ಸಿಗೆ ತೋಚಿದಂತೆ ಊಹಿಸಲು ಶಕ್ಯವಾಗಿರುವದರಿಂದ, ಅದು ಸ್ವತಂತ್ರ ಪ್ರಮಾಣವಲ್ಲ. ಆಗಮಸಾಪೇಕ್ಷಿತವಾದುದರಿಂದ ಅದು ಅಸಮರ್ಥ ಪ್ರಮಾಣ ವಾಗಿರುವದು. ಅಂತೇ, ಅದು ಆಗಮದ ಸಹಾಯವಿಲ್ಲದೆ ಅಗ್ರಾಹ್ಯವು.

೧೦. ೧೧. ೧೨. **ತತ್ವಸಂಖ್ಯಾನ, ತತ್ವವಿವೇಕ, ತತ್ವದ್ಯೋತ** :- ಇವು ಮೂರೂ ಗ್ರಂಥಗಳಿಂದ, ಸತ್ಯವಾದ ಈ ಪ್ರಪಂಚವು ೨೪ ತತ್ವಗಳಿಂದ ಪೂರ್ಣವಾಗಿದ್ದು, ಆ ತತ್ವಗಳ ವರ್ಣನೆಯದ್ವಾರ ಅವುಗಳಲ್ಲಿ ಪೂರ್ಣ ಸ್ವತಂತ್ರ, ಅತಏವ, ಕೇವಲ ಸ್ವತಂತ್ರವಾದ ತತ್ವವು "**ಪರಾಖ್ಯ ಶ್ರೀಮಹಾ ವಿಷ್ಣುತತ್ವವೇ**" ಎಂದು ಸಿದ್ಧಮಾಡಿ ತೋರಿಸಿದ್ದಾರೆ.

೧೩. **ಕರ್ಮನಿರ್ಣಯ** :— ಯಜ್ಞ, ಯಾಗಾದಿ ನಿತ್ಯ ಹಾಗೂ ನೈಮಿತ್ತಿಕ ಸದಾಚಾರಗಳ ವಿಧ್ಯುಕ್ತ ವರ್ಣನೆಯು ಈ ಗ್ರಂಥವಲ್ಲಿದೆ.

೧೪. **ವಿಷ್ಣುತತ್ವನಿರ್ಣಯ** :— ಶ್ರೀಮನ್ನ್ಯಾಯಸುಧಾದಂತೆ ಇದರಲ್ಲಿ ೨೧ ಕುಮತಗಳ ಖಂಡನೆಯ ಮೂಲಕ ಶ್ರೀಮಹಾವಿಷ್ಣುಸರ್ವೋತ್ತಮತ್ವಾದಿ ದ್ವೈತಮತದ ಸಿದ್ಧಾಂತವನ್ನು ನಿರ್ಣಾಯಕವಾಗಿ ಸ್ಥಾಪಿಸಿದ್ದಾರೆ. ಅಂತೆಯೇ ಈ ಗ್ರಂಥವು '**ಅಣುಸುಧಾ**' ಎಂದು ಕರೆಸುತ್ತದೆ.

೧೫. **ಋಗ್ಭಾಷ್ಯ** :— ಋಗ್ವೇದದೊಳಗಿನ ಮುಖ್ಯ ಮುಖ್ಯ ಭಾಗ ಗಳಿಗೆಲ್ಲ ದ್ವೈತವೇ ಕೇವಲ ಸತ್ಯವಾದ ಅರ್ಥವೆಂದೂ ಋಗ್ವೇದವು ಶ್ರೀಹರಿ ಸರ್ವೋತ್ತಮತ್ವವನ್ನೇ ಪ್ರತಿಪಾದಿಸುವದೆಂದೂ ಸಿದ್ಧಮಾಡಿ ತೋರಿಸಿದ್ದಾರೆ.

೧೬. **ಐತರೇಯೋಪನಿಷದ್ಭಾಷ್ಯ**:— ಶ್ರೀಹರಿಯು ಮಾಡುವ ತಾರತಮ್ಯ, ಪಂಚಭೇದಯುತ ಸೃಷ್ಟಿ, ಸ್ಥಿತಿ, ಲಯಗಳ ವಿಸ್ತಾರ ವರ್ಣನೆಯು ಈ ಗ್ರಂಥವಲ್ಲಿದೆ. **ಈ ಗ್ರಂಥವನ್ನು ತ್ರಿಕರ್ಣಶುದ್ಧನಾಗಿ ಅರಣ್ಯ ಅಥವಾ ದೇವಾಲಯಗಳಲ್ಲಿ ಅಧ್ಯಯನ ಮಾಡತಕ್ಕದ್ದು.** ನಿದಾನ ಇದರ **ಅರಣ್ಯ** ಭಾಗವನ್ನಾದರೂ ಹೀಗೆ ಪಠಣಗೈಯತಕ್ಕದ್ದು. ಇಲ್ಲವಾದರೆ, ಮಹಾನರ್ಥವು ಸಂಭವಿಸುವದು "**ಬ್ರಾಹ್ಮಣ**" ಭಾಗಕ್ಕೆ ಅಷ್ಟು ನಿರ್ಬಂಧದ ಕಟ್ಟುನಿಟ್ಟು ಇಲ್ಲ. **ಇದರ ಪಠಣವನ್ನು ಗರ್ಭಿಣಿಸ್ತ್ರೀಯರು ಕೇಳತಕ್ಕದ್ದಲ್ಲ. ಕೇಳಿದ ಪಕ್ಷದಲ್ಲಿ ಗರ್ಭಸ್ರಾವದ ಭಯವುಂಟು.**

೧೭. **ತೈತ್ತರೇಯೋಪನಿಷದ್ಭಾಷ್ಯ**:— ಶ್ರೀಹರಿಯು ಪಂಚಾಶದ್ವರ್ಣ, ಸುಸ್ವರ, ಉದಾತ್ತ, ಅನುದಾತ್ತ, ಪ್ರಚಯ, ಸ್ವರಿತ, ಸಂಧಿ, ವಿಸರ್ಗ, ಬಿಂದು, ನಾದ, ಘೋಷಗಳಲ್ಲಿಯೂ, ಭೂಃ, ಭುವಃ, ಸ್ವಃ ಹಾಗೆಯೇ ಭೂರ್ಭುವಸ್ವಹಾದಿಗಳಲ್ಲಿಯೂ, ಅನ್ನಮಯಾದಿ ಪಂಚ ಕೋಶಗಳಲ್ಲಿಯೂ, ತನ್ನಾಮ, ತದ್ರೂಪ, ತಚ್ಛಬ್ದವಾಚ್ಯನಾಗಿರುವನು. ಸರ್ವಮುಕ್ತ ಜೀವರ ಆನಂದದಲ್ಲಿ ತಾರತಮ್ಯವಿದೆ ಎಂದು ಸಿದ್ಧಮಾಡಿ, ಕೈಮುತ್ಯನ್ಯಾಯದಿಂದ ಈ ಜಗತ್ತಿನ ಜೀವರ ಆನಂದದಲ್ಲಿಯೂ ಆ ತಾರತಮ್ಯ ವುಂಟೆಂದು ತೋರಿಸಿ, ಶ್ರೀರಮಾದಿ ತೃಣಾಂತ ಜಗತ್ತಿನ ಆನಂದವೆಲ್ಲವನ್ನೂ ಕೂಡಿಸಿ ತೂಗಿ ನೋಡಿದರೆ, ಅದು ಶ್ರೀಹರಿಯ ಅನಂತಾಂಶದ ಆನಂದದಲ್ಲಿ ಏಕಾಂಶಕ್ಕೂ ಕೂಡ ಸಮವಾಗಲಾರದೆಂದು ಸಿದ್ಧಮಾಡಿ, ಇಂಥ ಅಖಂಡ ಹಾಗೂ ಅಪ್ರಾಕೃತವಾದ ಆನಂದವು ಶ್ರೀಹರಿಯುಸ್ವರೂಪಭೂತ ಗುಣವಾದುದರಿಂದ, ಅದು ಆತನಿಂದೇ ಸಮಸ್ತ ಜೀವರಿಗೂ ದತ್ತವಾಗುವಂಥಾದ್ದು ಎಂಬುದರಿಂದ ಶುದ್ಧಾನಂದವು ಆತನ ಗುಣವೇ ಎಂದು ಸಿದ್ಧಮಾಡಿದ್ದಾರೆ.

೧೮. **ಬೃಹದಾರಣ್ಯಕೋಪನಿಷದ್ಭಾಷ್ಯ**:— ಅದ್ವೈತಿಗಳು ಆದರಿಸುವ "**ಅಹಂ ಬ್ರಹ್ಮಾಸ್ಮಿ, ತತ್ವಮಸಿ**" ಇತ್ಯಾದಿ ಶ್ರುತಿಗಳೂ ಕೂಡ ದ್ವೈತಾರ್ಥವನ್ನೇ ಬೋಧಿಸುವವು. ವಿನಾ ಅದ್ವೈತಾರ್ಥವನ್ನು ಸರ್ವಥಾ ಹೇಳುವದಿಲ್ಲೆಂದು ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸಿದ್ದಾರೆ. ಮತ್ತು ಬ್ರಹ್ಮದೇವರ ವಿರಾಡ್ರೂಪದ ಮೇಲೆ ಸರ್ವ ತತ್ವೇಶರ ಸಾಮರ್ಥ್ಯದ ಪ್ರಯೋಗದಿಂದ, ವಾಯುದೇವರ ಜೀವೋತ್ತಮತ್ವವನ್ನು ಸಿದ್ಧಮಾಡಿ ತೋರಿ

ಸಿದ ಮಹಾಮಹಿಮೆಯು ಈ ಗ್ರಂಥದಲ್ಲಿ ಸವಿಸ್ತಾರವಾಗಿ ನಿರೂಪಿತವಾಗಿದ್ದು, ಉದ್ಗೀಥನಾಮಕ ಈ ವಾಯುದೇವರಲ್ಲಿ ಶ್ರೀಹರಿಯು ತನ್ಮಾಮಕನಾಗಿ ಸಕಲ ದೇವತೆಗಳಿಂದಲೂ ಸ್ತುತ್ಯನಾಗಿರುವನೆಂಬುದನ್ನು ಪ್ರತಿಪಾದಿಸಿದ್ದಾರೆ.

೧೯. **ಈಶಾವಾಸ್ಯೋಪನಿಷದ್ಭಾಷ್ಯ**:— ಜಗದೀಶನಾದ ಶ್ರೀ ಜನಾರ್ದನನಿಗೆ ಈ ಜಗತ್ತು ಆವಾಸಸ್ಥಾನವಾಗಿದೆಯೇ ವಿನಾ ಈ ಜಗತ್ತೇ ಜನಾರ್ದನನಲ್ಲ ಎಂಬ ದ್ವೈತಮತ ಪ್ರತಿಪಾದನಪೂರ್ವಕವಾಗಿ ಅದ್ವೈತ ಮತದ ಖಂಡನ ಮಾಡಿರುವರು ಮತ್ತು ಶ್ರೀಹರಿಯು ಕೊಟ್ಟಷ್ಟರಿಂದೇ ತೃಪ್ತನಾಗಿ ದೃಢ ವೈರಾಗ್ಯದಿಂದ ಆತನನ್ನು ನಿಶ್ಚಲಭಕ್ತಿದ್ವಾರ ಭಜಿಸಿ ಸೇವಿಸಿ, ಮುಕ್ತನಾಗಬೇಕು, ಎಂಬ ನಿರೂಪಣೆಯು ಈ ಗ್ರಂಥದಲ್ಲಿದೆ.

೨೦. **ಕಾಠಕೋಪನಿಷದ್ಭಾಷ್ಯ**:– ನಾಚಕೇತುನಾಮದ ಋಷಿಯು ಯಮದೇವರನ್ನು ಮೆಚ್ಚಿಸಿ, ಅವರಿಂದ ಪರಮಾತ್ಮನ ಸ್ವರೂಪದುಪದೇಶವನ್ನು ಹೊಂದಿ, ಜಗತ್ತಿನಲ್ಲಿ ಅಗ್ನಿಯು ನಾಚಕೇತಾಗ್ನಿ ಎಂದು ಕರೆಸುವಂತೆಯೂ, ಪಿತೃಯಜ್ಞಕ್ರಿಯವು ತನ್ನ ಹೆಸರಿನಿಂದ ಪ್ರಸಿದ್ಧವಾಗಿ ಸಾಂಗವಾಗುವಂತೆಯೂ, ಯಮಾಖ್ಯ ಪಿತೃದೇವರಿಂದ ವರ ಪಡೆದನು. ಅಂತೆಯೇ, ಶ್ರಾದ್ಧಸಮಯದಲ್ಲಿ ಬ್ರಾಹ್ಮಣರು ಈ ಉಪನಿಷತ್ತನ್ನು ಪಠಿಸುವರು. ಈ ನಾಚಕೇತು, ಯಮ ದೇವರ ಸಂವಾದದಿಂದ, ಯೋಗ್ಯ ಜೀವರಿಗಷ್ಟೇ ಈ ಪರತತ್ವ ವಿಷಯ ವನ್ನು ಬೋಧಿಸಬೇಕಾದ್ದು. ಅನರ್ಹರಿಗೆ ಸರ್ವಥಾ ಹೇಳಕೂಡದೆಂದು ಬೋಧ ವಾಗುತ್ತದೆ.

೨೧. **ಛಾಂದೋಗ್ಯೋಪನಿಷದ್ಭಾಷ್ಯ**:—ಇಲ್ಲಿ ವಿವಿಧ ದೃಷ್ಟಾಂತ ಗಳಿಂದ ಶ್ರೀಹರಿಯ ಉಪಾಸನಾ, ಹಾಗೂ ಆತನ ಸರ್ವೋತ್ತಮತ್ವದ ಪ್ರತಿ ಪಾದನಾ, ಇವು ಮಾಡಲ್ಪಟ್ಟಿವೆ. ಪಂಚಭೇದ, ತಾರತಮ್ಯಯುಕ್ತ ಸುಜ್ಞಾನ, ತದ್ವಾರ ಭಕ್ತಿ, ವೈರಾಗ್ಯಗಳು, ತದ್ವಾರ ಭಗವದಪರೋಕ್ಷ, ಅದರಿಂದ ಭಗವದನುಗ್ರಹವಾಗಿ ಮೋಕ್ಷಪ್ರಾಪ್ತಿಯಾಗುವದನ್ನೂ, ಶ್ರೀವಾಯುದೇವರ ಜೀವೋತ್ತಮತ್ವದ ವಿಚಾರಗಳನ್ನೂ ಬಹು ಚನ್ನಾಗಿ ವರ್ಣಿಸಿದ್ದಾರೆ.

೨೨. **ಅಥರ್ವಣೋಪನಿಷದ್ಭಾಷ್ಯ**:– ಇದು ಷಟ್ಖಂಡಗಳುಳ್ಳದ್ದು. ವೇದಾದಿ ಸಕಲ ಸಚ್ಛಾಸ್ತ್ರಗಳೂ ಶ್ರೀಹರಿಯನ್ನೇ ಪ್ರಾಮುಖ್ಯತ್ವೇನ ಪ್ರತಿ ಪಾದಿಸುವವೆಂದೂ, ಮತ್ತು ಸರ್ವ ಅಕ್ಷರವಾಚ್ಯ ಶ್ರೀಹರಿಯ ಯಥಾರ್ಥ

ಜ್ಞಾನವೇ ಮೋಕ್ಷಕ್ಕೆ ಮೂಲ ಸಾಧನವೆಂದೂ ಸ್ಥಾಪಿಸಿರುವದೇ ಪರವಿದ್ಯವೆನಿಸುವದು. ಇವೇ ಶಾಸ್ತ್ರಗಳು ಅನ್ಯರನ್ನು ಮುಖ್ಯತ್ವೇನ ಪ್ರತಿಪಾದಿಸುವ ಪಕ್ಷದಲ್ಲಿ,ಅದು ಅಪರವಿದ್ಯವೆನಿಸುವದು. ಇದು ಯಥಾರ್ಥವಾದದ್ದಲ್ಲ. ಇದನ್ನೇ ಶ್ರೀಹರಿಪರಮಾಡಿ ಹೇಳಿದ ಪಕ್ಷದಲ್ಲಿ, ಆಗ್ಗೆ ಅದು ಪರ (ಶ್ರೇಷ್ಠ) ವಿದ್ಯವೆನಿಸುವದು. ಪರಮಾತ್ಮನ ಅವಯುವಗಳಿಂದ ವಿವಿಧ ಸೃಷ್ಟಿಯು; ಆತನ ನಾಮ, ರೂಪ, ಗುಣ, ಕ್ರಿಯಗಳಿಗೂ ಆತನಿಗೂ ಅತ್ಯಂತ ಅಭೇದವು; ಆತನಿಗೂ ಸಕಲ ಜೀವ, ಜಡಗಳಿಗೂ ಅತ್ಯಂತ ಭೇದವು; ಗರುಡ, ಶೇಷ ಮಾರ್ಗಗಳ ಮುಕ್ತಿಯ ಕ್ರಮ ಹಾಗೂ ಆಯಾ ಅಧಿಕಾರಿಗಳ ವರ್ಣನ; ತ್ರಿವಿಧ ಜೀವರ ಗತಿಗಳ ವರ್ಣನ; ಬಿಂಬಾಪರೋಕ್ಷದ ವರ್ಣನ; ಇವೆಲ್ಲ ವಿಷಯಗಳು ಈ ಗ್ರಂಥದಲ್ಲಿ ಸವಿಸ್ತಾರವಾಗಿ ಪ್ರತಿಪಾದಿತವಾಗಿವೆ.

೨೩. **ಮಾಂಡೂಕ್ಯೋಪನಿಷದ್ಭಾಷ್ಯ**:- ಪ್ರಾಮುಖ್ಯವಾದ ಜಾಗ್ರತ್ಸ್ವಪ್ನ ಸುಷುಪ್ತ್ಯವಸ್ಥಾತ್ರಯಗಳಲ್ಲಿ ವಿಶ್ವ, ತೈಜಸ, ಪ್ರಾಜ್ಞನಾಮಕ ಶ್ರೀಹರಿಯ ರೂಪಗಳ ವ್ಯಾಪಾರವರ್ಣನೆಯು, ಮತ್ತು ನಾಲ್ಕನೆಯ ತುರ್ಯಾವಸ್ಥೆಯಲ್ಲಿ ತುರ್ಯನಾಮಕ ಹರಿಯೇ ಮೋಕ್ಷಪ್ರದನೆಂದು ಇವರಲ್ಲಿ ಪ್ರತಿಪಾದ್ಯವಾಗಿದೆ.

೨೪. **ಷಟ್ಪ್ರಶ್ನೋಪನಿಷದ್ಭಾಷ್ಯ**:—ಬ್ರಹ್ಮಾಂಡದ ಸೃಷ್ಟಿ; ದೇವತಾ ಸಂಖ್ಯಾ; ವಾಯುದೇವರುತ್ಪತ್ತಿ; ಪ್ರಾಣಿಗಳ ಸುಪ್ತಿಕಾಲದಲ್ಲಿ ಸಂರಕ್ಷಕರು ಯಾರೆಂಬ ವಿಚಾರವು; ಓಂಕಾರ ಪ್ರತಿಪಾದ್ಯನಾದ ಶ್ರೀಹರಿಯ ಜ್ಞಾನದ ಫಲವು; ಷೋಡಶ ಕಲಾಯುಕ್ತವಾದ ಲಿಂಗ ಹಾಗೂ ಜೀವಸ್ವರೂಪ; ಹೀಗೆ ಆರು ವಿಷಯಗಳ ವರ್ಣನೆಯು ಸಿದ್ಧಾಂತರೀತ್ಯಾ ಇಲ್ಲಿ ಮಾಡಲ್ಪಟ್ಟಿದೆ.

೨೫. **ತಳವಕಾರೋಪನಿಷದ್ಭಾಷ್ಯ**:— ಯಕ್ಷಪ್ರಶ್ನೆಯ ನೆವದಿಂದ ಇಂದ್ರದೇವರಿಗೆ ಉಮಾದೇವಿಯುಪದೇಶ; ಶ್ರೀವಾಯುದೇವರ ಜೀವೋತ್ತಮತ್ವವನ್ನು ಸಿದ್ಧಮಾಡಿ ತೋರಿಸಿದ ಕ್ರಮವು; ಹಾಗೆಯೇ ಶ್ರೀಹರಿಸರ್ವೋತ್ತಮತ್ವದ ಪ್ರತಿಪಾದನೆಯು ಈ ಗ್ರಂಥದಲ್ಲಿ ಮಾಡಿದೆ.

೨೬. **ಗೀತಾತಾತ್ಪರ್ಯನಿರ್ಣಯ**:— ಭಗವದ್ಗೀತೆಯಲ್ಲಿ ಪ್ರತಿಪಾದಿತವಾದ ವಿಷಯಗಳನ್ನೇ ಹೆಚ್ಚು ವಿಸ್ತಾರಮಾಡಿ ಇದರಲ್ಲಿ ಹೇಳಿದ್ದಾರೆ.

೨೭. **ನ್ಯಾಯವಿವರಣ**:-ಬ್ರಹ್ಮಸೂತ್ರಗಳಲ್ಲಿ ಪೂರ್ವಪಕ್ಷ ಅಂದರೆ, ಶಂಕಾರೂಪದ, ಉತ್ತರಪಕ್ಷ ಅಂದರೆ, ಸಿದ್ಧಾಂತರೂಪದ ಸೂತ್ರಗಳು ಹೀಗೇ

ಇರತಕ್ಕವು ಎಂದು ನಿರ್ಣಯಮಾಡಿ ಈ ಗ್ರಂಥದಲ್ಲಿ ನಿರೂಪಿಸಿದ್ದಾರೆ.

೨೮. **ಶ್ರೀನೃಸಿಂಹನಖಸ್ತುತಿ**:-ಮಹಾ ದುಷ್ಟ ದೈತ್ಯಧ್ವಂಸಕವಾದ ಶ್ರೀಲಕ್ಷ್ಮೀನೃಸಿಂಹದೇವರ ವಜ್ರಸದೃಶ ನಖಗಳ ಮಹಾ ಶೌರ್ಯದ ವರ್ಣನೆಯೂ, ತತ್ಸ್ಮರಣೆಯಿಂದ ಆಧ್ಯಾತ್ಮಿಕ ಆದಿಭೌತಿಕ ತಾಪಗಳ ವಿನಾಶವೂ, ಭವಜನ್ಯ ದುರಿತಗಳ ಪರಿಹಾರವೂ ಆಗಿ, ಐಹಿಕ, ಪಾರತ್ರಿಕಗಳ ವಿವಿಧ ಭೋಗಗಳ ಪ್ರಾಪ್ತಿಯುಂಟಾಗುವದೆಂದು ಇದರಲ್ಲಿ ಹೇಳಿದೆ.

೨೯. **ಯಮಕಭಾರತ**:— ಶ್ರೀಹರಿಯ ಸರ್ವೋತ್ತಮತ್ವವನ್ನು ಸರ್ವರೀತಿಯ ಛಂದಸ್ಸು, ಅಲಂಕಾರಗಳಿಂದ ಶಬ್ದ, ಶಬ್ದಗಳಿಗೂ ಪ್ರಾಸಬದ್ಧವಾಗಿ ರಚಿಸಿ, ತಮಗೆ ಯಮಕ, ಗಮಕಗಳ ಪೂರ್ಣ ಸರ್ವಜ್ಞತೆಯು ಸಹಜವಾಗಿರುವದೆಂಬುದನ್ನು ಸ್ಪಷ್ಟಮಾಡಿ ತೋರಿಸಿದ್ದಾರೆ.

೩೦. **ದ್ವಾದಶಸ್ತೋತ್ರ**:— ಆದ್ಯಂತವಾಗಿ ವಿವಿಧರಾಗ, ತಾಳಗಳಿಂದ ಪರಮಾತ್ಮನ ಪರಮೋತ್ಕರ್ಷವನ್ನು ಪರಿಪರಿಯಾಗಿ ಪ್ರತಿಪಾದಿಸಿದ ದ್ವಾದಶಾಧ್ಯಾಯಗಳುಳ್ಳ ಅತಿ ಸುಂದರ ಹಾಗೂ ಬಂಧುರವಾದ ಗ್ರಂಥವು.

೩೧. **ಶ್ರೀಕೃಷ್ಣಾಮೃತಮಹಾರ್ಣವ**:-ತಿಥಿ, ನಕ್ಷತ್ರಗಳ ನಿರ್ಣಯ ಮೂಲಕವಾಗಿ ಸಕಲ ವಿಧ್ಯುಕ್ತಕ್ರಿಯಗಳ ನಿರೂಪಣೆಯು ಇದರಲ್ಲಿದೆ.

೩೨. **ತಂತ್ರಸಾರ**:— ಶ್ರೀಹರಿಯ ವಿವಿಧ ಪೂಜ್ಯಾದಿ ವಿಧ್ಯುಕ್ತ ಸತ್ಕ್ರಿಯಗಳ ವಿಸ್ತಾರವರ್ಣನೆಯನ್ನು ಇದರಲ್ಲಿ ಮಾಡಿದ್ದಾರೆ.

೩೩. **ಸದಾಚಾರಸ್ಮೃತಿ**:- ಬೆಳಗಿನಿಂದ ರಾತ್ರಿಯವರೆಗೆ ಮಾಡತಕ್ಕ ನಿತ್ಯ, ನೈಮಿತ್ತಿಕ ಕರ್ಮಗಳ ಸಾದ್ಯಂತ ನಿರೂಪಣೆಯು ಇದರಲ್ಲಿ ಮಾಡಿದೆ.

೩೪. **ಶ್ರೀಮದ್ಭಾಗವತತಾತ್ಪರ್ಯನಿರ್ಣಯ**:— ಈ ಗ್ರಂಥಕ್ಕೆ ಅನ್ಯರು ಮಾಡಿದ ಅಪದ್ಧಾರ್ಥಗಳನ್ನು ಖಂಡಿಸಿ, ಪರಿಶುದ್ಧವಾದ ದ್ವೈತಾರ್ಥವನ್ನು ಸಂದಿಗ್ಧ ಶ್ಲೋಕಗಳ ವಿಚಾರದಲ್ಲಿ ಮಾತ್ರ ವಿಸ್ತರಿಸಿ ಹೇಳಿದ್ದಾರೆ.

೩೫. **ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ**:— ಭಾಷಾತ್ರಯ ಹಾಗೂ ದಶಾರ್ಥಗಳುಳ್ಳ ಶ್ರೀಮನ್ಮಹಾಭಾರತ, ರಾಮಾಯಣ, ಹರಿವಂಶಾದಿ ಪುರಾಣಗಳಲ್ಲಿ ಪರಸ್ಪರ ವಿರುದ್ಧವಾಗಿ ತೋರುವ ವಾಕ್ಯಗಳಿಂದ ಬರುವ ಸಂದೇಹಗಳನ್ನೂ, ಮೂಲದಲ್ಲಿರದೆ ಅನ್ಯರಿಂದ ಸ್ವಾರ್ಥಸಾಧನೆಗಾಗಿ ಸೇರಿಸಿದ

ಅಪದ್ಧ ವಾಕ್ಯಗಳನ್ನು ನಿವಾರಿಸಿ, ಸಂಶಯಾರ್ಥಗಳನ್ನು ಸ್ಪಷ್ಟವಮಾಡಿ ನಿರೂಪಿಸಿದ ಅತಿಶ್ರೇಷ್ಠವಾದ ಗ್ರಂಥವು. ಇದರ ಅವಲೋಕನವನ್ನು ಮಾಡದೆ ಪುರಾಣಗಳ ಗರ್ಭಿತವಾದ ಭಾವ ತಿಳಿಯುವದಿಲ್ಲ. ಈ ಗ್ರಂಥವು ಸುರುವಿಗೆ ಸೃಷ್ಟಿಯನ್ನು ವಿವರಿಸುತ್ತ ಸಾಗಿದ್ದರಿಂದ ಸೋತ್ತಮ ಗ್ರಂಥವೆನಿಸುವದು.

**೩೬. ಯತಿಪ್ರಣವಕಲ್ಪ :—** ಸನ್ಯಾಸಿಗಳ ವಿಧ್ಯುಕ್ತ ವ್ರತಧಾರಣ, ಆಚರಣೆಗಳ ವರ್ಣನೆಯನ್ನು ಇದರಲ್ಲಿ ವಿಸ್ತಾರವಮಾಡಿ ವಿವರಿಸಿದ್ದಾರೆ.

**೩೭. ಜಯಂತಿನಿರ್ಣಯ :—** ಶ್ರೀಕೃಷ್ಣಾಷ್ಟಮಿಯ ತಿಥಿನಿರ್ಣಯವನ್ನೂ ಆ ದಿನದ ವಿಧ್ಯುಕ್ತಾಚರಣೆಯನ್ನೂ ಇದರಲ್ಲಿ ಚನ್ನಾಗಿ ನಿರೂಪಿಸಿದ್ದಾರೆ

ಮುಮುಕ್ಷು ಜೀವರ ಉದ್ಧಾರಕ್ಕಾಗಿ ಇಷ್ಟು ಗ್ರಂಥಗಳ ಜ್ಞಾನವು ಸಾಕೆಂದೆಸಿಸಿ, ಶ್ರೀಮತ್ಸರ್ವಜ್ಞಾಚಾರ್ಯರು ಮಹಾ ಪ್ರಮೇಯಯುತವಾದ ಈ ಸದ್ಗ್ರಂಥಗಳನ್ನು ರಚಿಸಿದರು. ಆದರೆ, ಈ ಗ್ರಂಥಗಳು ಸಾಮಾನ್ಯ ಜೀವರಿಗೆ ಬೋಧವಾಗಲಿಕ್ಕಿಲ್ಲೆಂದು ಆಚಾರ್ಯವರ್ಯರ ಅನುಗ್ರಹ ವಿಶೇಷಕ್ಕೆ ಪಾತ್ರರಾದ ಶ್ರೀಮಟ್ಟೀಕಾಚಾರ್ಯರು, ಶ್ರೀಮದ್ವ್ಯಾಸರಾಯರು, ಶ್ರೀಮದ್ರಾಘವೇಂದ್ರಗುರುವರ್ಯಾದ್ಯರು ಇವುಗಳಿಗೆ ಟೀಕಾ, ಟಿಪ್ಪಣಿಗಳನ್ನು ರಚಿಸಿ, ಭಗವದ್ಭಕ್ತರಿಗೆ ಅನರ್ಘ್ಯವಾದ ಉಪಕಾರವನ್ನು ಮಾಡಿರುವರು.

**ವಿಶೇಷಾಂಶ :—** ಶ್ರೀಮದಾಚಾರ್ಯರ ಕಾಲನಿರ್ಣಯವು ಇವೂವರೆಗೂ ಸ್ಪಷ್ಟವಾಗಿ ಆಗದಿರುವದರಿಂದ, ಅವರು ೧೩ನೇ ಶತಮಾನದಲ್ಲಿದ್ದರೆಂದಿಷ್ಟೇ ಈಗ ಹೇಳಬೇಕಾಗಿದೆ. ಅವರು ಆಗಿನ ವಿಳಂಬಿ ಸಂವತ್ಸರದ ಅಶ್ವಿಜ ಶುದ್ಧ ದಶಿಮಿಯ ಶುಭಮುಹೂರ್ತದಲ್ಲ ವತರಿಸಿ, ೭೯ ವರ್ಷ, ೪ ತಿಂಗಳು ಅಂದರೆ, ೨ನೇ ಪಿಂಗಳ ಸಂ. ಮಾಘ ಶು. ೯ ವರೆಗೆ ಈ ಭೂಮಿಯಮೇಲಿದ್ದು, ತಮ್ಮ ಅವತಾರದ ಕಾರ್ಯವನ್ನು ಯಥಾಸಾಂಗಗೊಳಿಸಿ, ಶ್ರೀನರ ನಾರಾಯಣರ ಆವಾಸವಾದ ಬದರಿಕಾಶ್ರಮಕ್ಕೆ ಶ್ರೀಮದ್ವೇದವ್ಯಾಸದೇವರ ಸೇವಾರ್ಥವಾಗಿ ಬಿಜಯಂಗೈದರು. ಈ ಮಹಂತರು ಅದ್ಯಾಪಿ ಅಲ್ಲಿರುವರೆಂದೂ ಇವರು ತಮ್ಮ ಶಿಷ್ಯವೃಂದಕ್ಕೆ "**ಐತರೇಯೋಪನಿಷತ್**" ಪಾಠವನ್ನು ಹೇಳುತ್ತಿರುವಂತೆಯೇ ಅದೃಶ್ಯರಾದರೆಂದೂ ಪ್ರಸಿದ್ಧಿಯುಂಟು.

" **ಪ್ರಕರಣ** " ಅಂದರೆ :— ಯಾವಗ್ರಂಥದ ಅಭ್ಯಾಸದಿಂದ ಹೆಚ್ಚಿನ ಗ್ರಂಥಗಳ ಜ್ಞಾನಕ್ಕೆ ಸಾಧನವಾಗುವದೋ ಅಂಥ ಗ್ರಂಥವು. ಇವು ೧೦ ಗ್ರಂಥಗಳು. ಒಟ್ಟು ಶ್ಲೋಕ ಸಂಖ್ಯಾ :— ೧೦೮೬.

" **ಉಪನಿಷತ್ತು** " ಅಂದರೆ :—ವೇದಗಳೊಳಗಿನ ಪರಮರಹಸ್ಯವಾದ ಪರ ( ಪರಬ್ರಹ್ಮ ) ತತ್ವವನ್ನು ಪ್ರತಿಪಾದಿಸಲು ಹೊರಟ ಶ್ರೇಷ್ಠ ಗ್ರಂಥವು ಇವು ಅನೇಕವಾಗಿದ್ದು, ಅವುಗಳಲ್ಲಿ ಈ ಮೇಲಿನ ೧೦ ಪ್ರಾಮುಖ್ಯವಾದವು.

" **ಭಾಷ್ಯ** " ಅಂದರೆ :—ಮೂಲಗ್ರಂಥದ ವಿಷಯವನ್ನು ಟೀಕಾರೂಪದಿಂದ ಅರ್ಥ ವಿಸ್ತಾರಗೊಳಿಸಿ ನಿರೂಪಿಸುವದು. ಉಪನಿಷದ್ಭಾಷ್ಯಸಹಿತಾಗಿ ಇವು ಒಟ್ಟು ೧೫ ಗ್ರಂಥಗಳು. ಶ್ಲೋಕ ಸಂಖ್ಯೆಯು ೧೨,೦೮೧ ಅದೆ.

" **ನಿರ್ಣಯ** " ಅಂದರೆ :— ಸಂದಿಗ್ಧವಾದ ವಿಷಯದ ಅಭಿಪ್ರಾಯವನ್ನು ನಿರ್ಣಯಿಸಿ ಸಿದ್ಧಾಂತರೂಪದಿಂದ ಸ್ಥಿರವಾಗಿ ಮಂಡಿಸುವದು. ಇವು ಒಟ್ಟು ೩ ಗ್ರಂಥಗಳಿದ್ದು, ಶ್ಲೋಕ ಸಂಖ್ಯಾ-೧೨೨೧೬ ಅದೆ.

" **ಕಲ್ಪ** " ಅಂದರೆ :—ವಿಧ್ಯುಕ್ತನೇಮವು. ಹೀಗೆಯೇ ಇರತಕ್ಕದ್ದೆಂಬ ಬಂಧನ, ಕಟ್ಟಿನಿಂದ ಬದ್ಧವಾದದ್ದು. ಇವು ೨. ಶ್ಲೋಕ ಸಂಖ್ಯಾ-೧೬.

" **ಯಮಕ** " ಅಂದರೆ :— ಬಹುಪ್ರಾಸ, ಅಲಂಕಾರಯುತವಾದ ಶ್ರೇಷ್ಠ ಕಾವ್ಯವು. ಇದು ೧ ಅದೆ. ಶ್ಲೋಕ ಸಂಖ್ಯೆಯು ೧೦೪.

" **ಸ್ತುತಿ, ಸ್ತೋತ್ರ** " ಅಂದರೆ:–ನುತಿಗೆ ಯೋಗ್ಯವಾಗಿರುವ ವಸ್ತುವಿನ ಮಹಾ ಮಹಿಮಾತ್ಮಕ ಗುಣಗಾನವು ಇವು ೨. ಶ್ಲೋಕ ಸಂಖ್ಯಾ-೧೭೯.

" **ತಂತ್ರ** " ಅಂದರೆ :— ವಿಧ್ಯುಕ್ತವಾದ ಶ್ರೀಹರಿಯ ಷೋಡಶೋಪಚಾರ ಪೂಜಾದಿ ಸತ್ಕ್ರಿಯಗಳು. ಇದು ೧. ಗ್ರಂಥ. ಶ್ಲೋಕ ಸಂಖ್ಯಾ ೪೬೨.

" **ಸ್ಮೃತಿ** " ಅಂದರೆ :— ಶ್ರುತಿ ( ವೇದ ) ಗಳನ್ನು ಶ್ರುತಗೈದು ತತ್ಸ್ಮರಣೆಯಿಂದ ಉಲ್ಲೇಖಿಸಿಟ್ಟ ಗ್ರಂಥವು. ಈ ಸ್ಮೃತಿಗಳು ಸ್ವಾಯಂಭುವಾದಿ ಜ್ಞಾನವರ್ಯರಿಂದ ಪ್ರೋಕ್ತವಾದವು. ಇದು ೧. ಶ್ಲೋಕ ಸಂಖ್ಯಾ ೪೪.

**ಶ್ರೀಗುರುಮಧ್ವೇಶಾರ್ಪಣಮಸ್ತು.**

## ಪರಿಶಿಷ್ಟ ೪.

ವಾಯುದೇವರ ಅಗಾಧ ಮಹಿಮೆಗಳನ್ನು ಶ್ರೀಮಜ್ಜಗನ್ನಾಥದಾಸವರ್ಯರು ಶ್ರೀಮದ್ಧರಿಕಥಾಮೃತಸಾರದಲ್ಲಿ ತಮ್ಮ ಅಮೌಲ್ಯವಾದ ಶಬ್ದಸೌಂದರ್ಯ, ಅರ್ಥಗಾಂಭೀರ್ಯ, ಹಾಗೂ ವಾಗ್ಮಾಧುರ್ಯಗಳೊಂದಿಗೆ ಪದ್ಯರೂಪವಾಗಿ ರಚಿಸಿದ್ದು, ಅವುಗಳನ್ನು ಇಲ್ಲಿ ನಿರೂಪಿಸುವದರಿಂದ ಗ್ರಂಥಗತ ಟೀಕಾ ತಾತ್ಪರ್ಯಗಳನ್ನು ಪುಷ್ಟಿಗೈಸಿದಂತಾಗಿ ಬಾಂಧುರ್ಯವು ಹೆಚ್ಚಿ, ಈ ಗ್ರಂಥವನ್ನು ಪಠಿಸುವದರಲ್ಲಿ ಅಧಿಕ ಆದರವು ಉತ್ಪನ್ನವಾಗುವದೆಂದೆಣಿಸಿ ಅವನ್ನು ಇಲ್ಲಿ ನಿರೂಪಿಸಿದ್ದು. ಈ ಪದ್ಯಗಳ ವಿವರವು ಮೂಲ ಗ್ರಂಥದ ಸಂಧಿಗಳ ಕ್ರಮುವನ್ನನುಸರಿಸಿರುವದು.

"ಆರು ಮೂರೆರಡೊಂದು ಸಾವಿರ। ಮೂರೆರಡುಶತ ಶ್ವಾಸ ಜಪಗಳ। ಮೂರುವಿಧ ಜೀವರೊಳಗಬ್ಜಜಕಲ್ಪ ಪರಿಯಂತಾ॥ ತಾ ರಚಿಸಿ ಸತ್ವರಿಗೆ ಸುಖಸಂ। ಸಾರಮಿಶ್ರರಿಗಧಮ ಜನರಿಗ। ಪಾರ ದುಃಖಗಳೀವ ಗುರುಪವಮಾನ ಸಲಹೆಮ್ಮ॥";—"ಕ್ಷಿತಿಯೊಳಗೆ ಮಣಿಮಂತ ಮೊದಲಾ। ದತಿ ದುರಾತ್ಮರು ಒಂದಧಿಕ ವಿಂ। ಶತಿ ಕುಭಾಷ್ಯವ ರಚಿಸೆ ನಡುಮನೆಯೆಂಬ ಬ್ರಾಹ್ಮಣನ॥ ಸತಿಯ ಜಠರದೊಳವತರಿಸಿ ಭಾ। ರತಿರಮಣ ಮಧ್ವಾಭಿಧಾನದಿ। ಚತುರದಶ ಲೋಕದೊಳು ಮೆರದಪ್ರತಿಮಗೊಂದಿಸುವೆ॥";—"ಪೇಳಲೇನು ಸಮೀರ ದೇವನು। ಕಾಳಕೂಟವನುಂಡು ಲೋಕವ। ಪಾಲಿಸಿದ॥";—"ಮಾತರಿಶ್ವನು ದೇಹರಥದೊಳು। ಸೂತನಾಗಿಹ ಸರ್ವಕಾಲದಿ॥";—"ಈ ಶರೀರ ಚತುಷ್ಟಯಗಳೊಳು। ಕೋಶಧಾತುಗ ಭಾರತಿಪತಿ ಪ್ರಾ। ಣೇಶ ಇಪತ್ತೊಂದುಸಾವಿರದಾರುನೂರೆನಿಪ॥ ಶ್ವಾಸರೂಪಕ ಹಂಸಭಾಸ್ಕರ। ಭೇಶರೊಳಗಿದ್ದವರ ಕೈವಿಡಿ। ದೀಸರೋಜಭವಾಂಡದೊಳು ಸರ್ವತ್ರತುಂಬಿಹನು॥";— "ಸ್ತಂಭರೂಪದಲಿಪ್ಪ ದಕ್ಷಿಣ। ಅಂಬಕದಿ ಪ್ರದ್ಯುಮ್ನ ಗುಣರೂ। ಪಾಂಭ್ರಣಿಯು ತಾನಾಗಿ ಇಪ್ಪಳು ವತ್ಸರೂಪದಲೀ॥ ಪೊಂಬಸುರಪದಯೋಗ್ಯ ಪವನ ತ್ರಿ। ಯಂಬಕಾದಿ ಸಮಸ್ತ ದಿವಿಜ ಕ। ದಂಬ ಸೇವಿತನಾಗಿ ಸರ್ವ ಪದಾರ್ಥಗಳ ತೋರ್ಪ॥"; "ಮಧ್ಯನಾಡಿಯು ಮಧ್ಯದಲಿ ಹೃ। ತ್ಪದ್ಮಮೂಲದಿ ಮೂಲಪತಿ ಪದ। ಪದ್ಮಮೂಲದಲಿಪ್ಪ ಪವನನ ಪಾದಮೂಲದಲೀ॥ ಪೊದ್ದಿಕೊಂಡಿಹಜೀವ॥";-"ಈರ

ರಡು ದೇಹಗಳೊಳಿದ್ದು ಸ । ಮೀರದೇವನು ಶ್ವಾಸಜಪ ನಾ । ನೂರಧಿಕವಾಗಿಪ್ಪ ಎಂಭತ್ತಾರುಸಾಹಸ್ರಾ ॥ ತಾ ರಚಿಸುವನು ದಿವಸವಂದಕೆ । ಮೂರುವಿಧ ಜೀವರೊಳಗಿದ್ದು ಖ । ರಾರಿಕರುಣಾಬಲವದೆಂತುಟೊ ಪವನರಾಯನೊಳು ॥";
" ಭಾರತೀಶನು .... ಸರ್ವಜೀವರೊಳಿದ್ದು .... ಅವರವರ ಸಾಧನ । ಪೂರೈಸಿ ಭೂ ನರ್ಕ ಸ್ವರ್ಗವ । ಸೇರಿಸುವ ಸರ್ವಜ್ಞ....॥ ";-" ಚೇತನ । ರಾಶಿಯೊಳು ಜಾಗ್ರತನಾಗಿ....ಪೋಷಿಸುತ ಮೂ । ಲೇಶನಂಘ್ರಿಸರೋಜಮೂಲದಪ್ಪ ಕಾಣಿ ಸದೆ ॥ ";—" .... ಗುರುವರಿಯ .... ದುರಿತಗಳ ಪರಿಹರಿಸುವನು ಚಿಂತಿಸುವ ಸಜ್ಜನರ ॥ .... ತವೋಧಿಕಾರಿಗ । ಳಿರವರಿತು ಸೋಹಮುಪಾಸನೆ ಮಾಳ್ಪ ನವರಂತೆ ॥ ";-"ಅನಿಲದೇವನು ವಾಙ್ಮನೋಮಯ । ನೆನಿಸಿ ಪಾವಕ ವರುಣ ಸಂಕ್ರಂ । ದನ ಮುಖಾದ್ಯರೊಳಿದ್ದು....ನಮ್ಮನು ಸಡಾಸಂತೈಸುವನು.... ";
" ಪರಮವಿಷ್ಣು ಸ್ವತಂತ್ರ ಮಾಯಾ । ತರುಣಿ ವಕ್ಷಸ್ಥಳನಿವಾಸಿಯು । ಸರಸಿ ಜೋದ್ಭವ ಪ್ರಾಣರೀರ್ವರು ಸಚಿವರೆನಿಸುವರು ॥ ";-"ಕಮಲಸಂಭವಪವನರೀ ರ್ವರು । ಸಮರು ಸಮವರ್ತಿಗಳು ರುದ್ರಾ । ದ್ಯಮರಗಣ ಸಂಸೇವಿತ ಪರಬ್ರಹ್ಮ ನಾಮಕರು ॥ ";—" ಮಾತರಿಶ್ವ....ಜೀವರೊಳಗಾವಕಾಲದಲಿ ॥ ನೀತಭಕ್ತಿ ಜ್ಞಾನಬಲರೂಪಾತಿಶಯದಿಂದಿದ್ದು ॥ ";—" ಭಕ್ತಿಯೋಗ್ಯರ ಮಧ್ಯದಲಿ ಸ । ದ್ಭಕ್ತಿ ವಿಜ್ಞಾನಾದಿ ಗುಣದಿಂ । ದುತ್ತಮೋತ್ತಮ ಬ್ರಹ್ಮವಾಯುವಾಣಿಭಾರ ತಿಯು ॥ ";-"ಋಜುಗಣಕೆ ಭಕ್ತ್ಯಾದಿಗುಣ ಸ । ಹಜವೆನಿಸುವವು....ವೃಜಿನ ವರ್ಜಿತರಿವರೊಳಗೆ ತ್ರಿಗು । ಣಜವಿಕಾರಗಳಿಲ್ಲವೆಂದಿಗು ॥ "; — " ( ಶ್ರೀ ಹರಿಯ )....ಅಚ್ಛಿನ್ನ ಭಕ್ತರು ನಾಲ್ವರೆನಿಪರು ಭಾರತಿ ಪ್ರಾಣಾ । ಪೊನ್ನೊಡಲ ವಾಗ್ದೇವಿಯರು.... ॥ "; -" ಹೀನಸತ್ವಕರ್ಮಗಳೆರಡು ಪವ । ಮಾನದೇವನು ಮಾಳ್ಪನಿದಕನು । ಮಾನವಿಲ್ಲ....॥ ";—"ದೇವ ಋಷಿ ಪಿತೃ ನೃಪ ನರರೆನಿಪ। ಐವರೊಳು ನೆಲಸಿರ್ದು ಅವರ ಸ್ವ । ಭಾವಕರ್ಮಪವಮಾಡಿ ಮಾಡಿಪ ಒಂದು ರೂಪದಲಿ ॥ ಭಾವಿಬ್ರಹ್ಮನು ಕೂರ್ಮರೂಪದಿ । ಈವಿರಿಂಚಾಂಡವನು ಬೆನ್ನಿಲಿ। ತಾವಹಿಸಿಲೋಕಗಳ ಪೊರೆವನು ದ್ವಿತಿಯರೂಪದಲೀ ॥ ";—" ಗುಪ್ತನಾಗಿದ್ದ ನಿಲದೇವ ದ್ವಿ । ಸಪ್ತಲೋಕದ ಜೀವರೊಳಗೆ ತ್ರಿ । ಸಪ್ತಸಾವಿರದಾರುನೂರು ಶ್ವಾಸಜಪಗಳನು ॥ ಸುಪ್ತಿ ಸ್ವಪ್ನದಿ ಜಾಗ್ರತೆಗಳಲಿ। ಆಪ್ತನಂದದಿ ಮಾಡಿ ಮಾ

ಡಿಸಿ । ಕ್ಲಪ್ತಭೋಗಗಳೀವ ಪ್ರಾಂತಕೆ ತೃತಿಯ ರೂಪದಲೀ ॥ ";—" ಶುದ್ಧ ಸತ್ವಾತ್ಮಕಶರೀರ....ಲಿಂಗದೇಹವು । ಬದ್ಧವಾಗದು ದಗ್ಧಪಟದೋಪಾದಿ ಇರುತಿಹುದು ॥ ಸಿದ್ಧಸಾಧನ ॥ ";—" ಋಜು ಎಂ । ದೆನಿಸಿ.... ದ್ವಿನವಶೀತಿಯ ಪ್ರಾಂತಭಾಗದಿ । ಅನಿಲಹನುಮದ್ಭೀಮರೂಪದಿ । ದನುಜರೆಲ್ಲರ ಸದದು ಮಧ್ವಾಚಾರ್ಯನೆನಿಸಿದನು ॥ ";—" ವಿಶ್ವವ್ಯಾಪಕಹರಿಗೆ ತಾ ಸಾ । ದೃಶ್ಯರೂಪವ ಧರಿಸಿ ಬ್ರಹ್ಮ ಸ । ರಸ್ವತೀ ಭಾರತಿಗಳಿಂದೊಡಗೂಡಿ ಪವಮಾನಾ ॥ ಶಾಶ್ವತ ಸುಭಕ್ತಿಯಲಿ ಸುಜ್ಞಾ । ನಸ್ವರೂಪನ ರೂಪ ಗುಣಗಳ । ....ಪೊಗಳುವಶ್ರುತಿಗಳೊಳಗಿರ್ದು ॥ ";—" ಖೇಟ ಕುಕ್ಕುಟ ಜಲಟವೆಂಬ ತ್ರಿ । ಕೋಟಿರೂಪವ ಧರಿಸಿ ಸತತ ನಿ । ಶಾಟರನು ಸಂಹರಿಸಿ ಸಲಹುವ ಸಕಲಸಜ್ಜನರಾ ॥ "—"ಈ ಸಮೀರಗೆ ನೂರು ಜನ್ಮ ಮ । ಹಾ ಸುಖಪ್ರಾರಬ್ಧಭೋಗ ಪ್ರ । ಯಾಸವಿಲ್ಲದೆ ಐದುವನು ಲೋಕಾಧಿಪತ್ಯವನು ॥ ";—" ....ತನ್ನೊಶದ ಅಮರರೊಳಿದ್ದು ಮಾಡುವನವರಸಾಧನವ ॥ ....ಪೊಂಬಸುರಪದವೈದುವನು ಗುರುಪವಮಾನ ಸತಿಯೊಡನೆ ॥ ";—" ಅನಿಮಿಷರ ನಾಮದಲಿ ಕರೆಸುವ । ಅನಿಲದೇವನು.... (ಶ್ರೀಹರಿಯುಪಾಸನೆಯು) ಅವ್ಯಕ್ತಾದಿ ಪೃಥ್ವಿಪರ್ಯಂತಗೈಯುವನು॥";—"ಮಹಿತ ಋಜುಗಣಕೆ....ಜ್ಞಾನಭಕುತಿಯು । ದ್ರುಹಿಣಪದಪರ್ಯಂತ ವೃದ್ಧಿಯು । ಬಹಿರುಪಾಸನೆಯುಂಟನಂತರ ಬಿಂಬದರ್ಶನವು ॥ ";— " ....ವಾರಿಜಾಸನ ವಾಯು ವಾಣಿ । ಭಾರತಿಯರಿಗೆ ಮಹಾಪ್ರಳಯದಿ । ಬಾರದಜ್ಞಾನಾದಿದೋಷವು ಹರಿ ಕೃಪಾಬಲದಿ ॥ ";—" ಸತ್ವಸತ್ವ ಮಹಾಸುಸೂಕ್ಷ್ಮವು । ಸತ್ವಸತ್ವಾತ್ಮಕ ಕಳೇವರ । ಸತ್ಯಲೋಕಾಧಿಪನೊಳಗೆ ಅತ್ಯಲ್ಪವೆರಡುಗುಣಾ ॥....ಹರಿಪ್ರೀ । ತ್ಯರ್ಥವಾಗಿ ಜಗದ್ವ್ಯಾಪಾರಗಳಮಾಡುವನು ॥ '';—" ಪ್ರಾಣದೇವನು ತ್ರಿವಿಧರೊಳಗೆ ಪ್ರವೀಣ ತಾನೆಂದೆನಿಸುತ....ಜ್ಞಾನ ಭಕ್ತಿ ಸುರರ್ಗೆ ಮಿಶ್ರ । ಜ್ಞಾನ ಮಧ್ಯಮ ಜೀವರಿಗೆ ಅ । ಜ್ಞಾನ ಮೋಹ ದ್ವೇಷಗಳ ಕೊಡುತಿಪ್ಪ ದೈತ್ಯರಿಗೆ ॥'' "ಮಾರುತನ ಗದೆಯಿಂದ ಲಿಂಗ । ಶರೀರಪೋದಾನಂತರದಿ ತಮೋ । ದ್ವಾರಯ್ದಿ ಸ್ವರೂಪದುಃಖಗಳನುಭವಿಸುತಿಹರು (ದುರ್ಜೀವರು) ॥ ".

ಶ್ರೀಗುರುಮಧ್ವೇಶಾರ್ಪಣಮಸ್ತು.

## ಪರಿಶಿಷ್ಟ ಔ.

ಗಾಯನಾಚಾರ್ಯರೆಂದು ಹೆಸರಾದ ವಾಯುದೇವರ ಮಹಾಮಹಾತ್ಮ್ಯೆಗಳನ್ನು "ಹರಿಗೀತಿರಿಯಂ ಪರಮಾದರತಃ" (ದ್ವಾ. ಸ್ತೋ.) ಎಂಬ ಶ್ರೀಮದಾಚಾರ್ಯರ ಉಕ್ತಿಯಂತೆ, ಗಾನದಿಂದ ಪಾಡುವದು ಅವರಿಗೆ ಬಹು ಪ್ರೀತಿಕರವಾದುದೆಂದು ಭಗವದ್ದಾಸವರ್ಯರು ರಚಿಸಿ ಪಾಡಿರುವ ಕೆಲವು ಸುವ್ವಾಲಿ, ಪದಗಳನ್ನು ಇಲ್ಲಿ ಕೊಟ್ಟಿರುತ್ತದೆ.

ಸುವ್ವಾಲಿ. ರಾಗ. ಪೂರ್ವಿ. ರೂಪಕತಾಳ.

ಗುರುಮಧ್ವರಾಯರ ಭಾಗ್ಯ। ಹರಮುಖ್ಯ ನಿರ್ಜರರಿಂದ। ವರಣೀಸಲಳವಲ್ಲಮ್ಮ। ಸುವ್ವಿಸುವ್ವಾಲಿ॥ ಪ॥ ಇಂದಿರಿಯು ಮೂರು ರೂಪ। ದಿಂದ ತಾನೇ ಪಡಿದ। ಳೆಂದು ವೇದಗಳು ಸಾರುವವು। ಸುವ್ವಿಸುವ್ವಾಲಿ॥ ಮಂದ ಮತಿಗಳವರ। ಮಂದಿಯಂದದಿ ತಿಳಿದು। ಅಂಧಃಕೂಪದೊಳು ಬೀಳುವರು। ಸುವ್ವಿಸುವ್ವಾಲಿ ॥೧॥ ನೂರಾತೊಂಭತ್ತೆಂಟುಕಲ್ಪ। ಘೋರ ತಪವಗೈದು। ಮೂರು ರೂಪಗಳ ತಾಳಿದನು। ಸುವ್ವಿಸುವ್ವಾಲಿ॥ ಮೀರಿ ಈ ಕಲ್ಪವನ್ನು। ವಾರೀಜಾಸನನಾಗಿ। ಈರೇಳು ಲೋಕಗಳಾಳುವನು॥ ಸುವ್ವಿಸುವ್ವಾಲಿ ॥೨॥ ಎಪ್ಪತ್ತೊಂದು ಮಹಾಯುಗಕೆ। ಬಪ್ಪರೊಬ್ಬೊಬ್ಬ ಮನು। ತಪ್ಪದೆ ಲೋಕಗಳಾಳುವರು। ಸುವ್ವಿಸುವ್ವಾಲಿ। ಸುಪ್ರಸಿದ್ಧರಾದ ಈ ದ್ವಿ। ಸಪ್ತ ಮನುಗಳ ಕಾಲ। ಅಪ್ಪಗೆ ಒಂದೇ ದಿವಸವು॥ ಸುವ್ವಿಸುವ್ವಾಲಿ ॥೩॥ ಈ ರೀತಿ ಮಾನದಿಂದ। ನೂರುವತ್ಸರ ಬಾಳಿ। ನಾರಾಯಣನ ನಾಮ ಭಜಿಪನು। ಸುವ್ವಿಸುವ್ವಾಲಿ॥ ಘೋರ ಪ್ರಳಯಕಾಲದಲಿ। ಮಾರರಮಣನ ದಯದಿಂದ। ಬಾರದು ಅಜ್ಞಾನವೀತನಿಗೆ। ಸುವ್ವಿಸುವ್ವಾಲಿ ॥೪॥ ಈತನಲಿ ನಾಲ್ವತ್ತುಕಲ್ಪ। ಓತು ಶಿಷ್ಯತ್ವ ಗೈದು। ಭೂತನಾಥಪರೋಕ್ಷಯೈದಿಹನು। ಸುವ್ವಿಸುವ್ವಾಲಿ॥ ಆತನಿಗೆ ಮುಂದೆ ಶಿರಿ। ನಾಥನ ಪರಿಯಂಕಪದ। ಈತನ (ಮುಂದಿನ) ಕಲ್ಪದಲ್ಲಾಗುವದು। ಸುವ್ವಿಸುವ್ವಾಲಿ ॥೫॥ ಎಲ್ಲದೇವತೆಗಳು। ಬಲ್ಲದ ಗುರುವೆಂದಿವನಲ್ಲಿ ಉಪದೇಶಗೊಂಬುವರು। ಸುವ್ವಿಸುವ್ವಾಲಿ॥ ಖುಲ್ಲ ಮಾಯ್ಗಳ ಗೆದ್ದು। ವಲ್ಲಭ ವೇದವ್ಯಾಸ। ರಲ್ಲಿ ಆದ್ಯಾಪಿ ವಾಸಿಪನು। ಸುವ್ವಿಸುವ್ವಾಲಿ ॥೬॥

ಪಾನೀಯಜಜಾಂಡದೊಳು । ನಾನಾ ಜೀವಿಗಳೊಳು । ತಾನೇ ಚೇತನನಾಗಿ ಹನು । ಸುವ್ವಿಸುವ್ವಾಲಿ ॥ ಏನು ಪೇಳಲಮ್ಮಮ್ಮಾ । ಪ್ರಾಣರಾಯನೊಲಿದ ಮೇಲೆ । ಪ್ರಾಣೇಶವಿಠ್ಠಲ ತಾನೇ ಒಲಿವನು । ಸುವ್ವಿಸುವ್ವಾಲಿ ॥೭॥ ಶ್ರೀಗುರು ಮಧ್ವೇಶಾರ್ಪಣಮಸ್ತು.

ತತ್ವಸುವ್ವಾಲಿ. ರಾಗ-ಶಂಕರಾಭರಣ. ತಾಳ. ಝಂಪೆ.

ತ್ರಿದಶರೊಂದಿತರೂಪ । ಸುದತಿಯಿಂದೊಡಗೂಡಿ । ಪದುಮಜಾಂಡ ದೊಳು ಸರ್ವತ್ರ ॥ ಸರ್ವತ್ರ ಭಕುತರ। ಬದಿಗನಾಗಿದ್ದು ಸಲಹೊವಿ ॥೧॥ ಕೋಟಿ ತ್ರಯ ಸ್ವರೂಪ ದಾಟಿಸು ಭವಾಬ್ಧಿಯ ನಿ । ಶಾಟ ಕುಲವೈರಿ ಭಯಹಾರಿ ॥ ಭಯಹಾರಿ ರಣದೊಳ್ಕಿ । ರೀಟಿಯನು ಕಾಯ್ದೆ ಧ್ವಜನಾಗಿ ॥೨॥ ಮೂರೇಳು ಸಾವಿರದ ಆರುನೂರು ಮಂತ್ರ । ಈರೇಳು ಜಗದ ಜೀವರೊಳು ॥ ಜೀವರೊಳು ಮಾಡಿ ಉ । ದ್ಧಾರಗೈಸುವಿಯೋ ಸುಜನರ ॥೩॥ ಪವಮಾನರಾಯನೇ ತ್ರಿವಿಧ ಜೀವರೊಳಿದ್ದು । ವಿವಿಧವ್ಯಾಪಾರಾ ನೀ ಮಾಡಿ । ನೀ ಮಾಡಿ ಮಾಡಿಸುತ । ಅವರವರ ಗತಿಯ ಕೊಡುತಿಪ್ಪಿ॥೪॥ ಸತ್ಯಲೋಕಾಧಿಪ ಬಳಿತ್ಥಾದಿ ಶ್ರುತಿವಿನುತ। ಮೃತ್ಯುಂಜಯಾದಿ ಸುರಪೂಜ್ಯ ॥ ಸುರಪೂಜ್ಯ ಭಕುತರಪ। ಮೃತ್ಯು ಪರಿಹರಿಸೀ ಸಲಹಯ್ಯ ॥೫॥ ಮಿಶ್ರ ಜೀವರೊಳಿದ್ದು ಮಿಶ್ರ ಜ್ಞಾನವನಿತ್ತು । ಮಿಶ್ರ ಸಾಧನವ ನೀ ಮಾಡಿ ॥ ನೀ ಮಾಡಿ ಮಾಡಿಸುತ । ಮಿಶ್ರ ಗತಿಯನ್ನೇ ಕೊಡುತಿಪ್ಪಿ ॥೬॥ ಅನಿಲದೇವನೆ ದೈತ್ಯ । ದನುಜ ರಕ್ಕಸರೊಳಿ । ದ್ದನುಚಿತೋಚಿತ ಕರ್ಮ ನೀ ಮಾಡಿ ॥ ನೀ ಮಾಡಿ ಮಾಡಿಸುತ । ದಣಿಸುವಿಯೊ ತಮದಿ ದಿವಿಜೇಶ ॥೭॥ ಈ ಶಕ್ತಿ ಲೋಕದೊಳು । ಮೋಶಾದ್ಯರಿಗೆ ಉಂಟೇ? । ವಾಸವಾದ್ಯಮರಾರನುದಿನ ॥ ಅನುದಿನದಲ್ಲಿ ತ್ವ । ದ್ದಾಸ್ಯನೀಡೆಂದು ನುತಿಸೋರು ॥೮॥ ಅಖಣಾತ್ಮನೆ ನಿನ್ನ ಸೋಕಲರಿಯವು ದೋಷ । ಶ್ರೀಕಂಠಮುಖ್ಯ ಸುರರೀಗೆ ॥ ಸುರರಿಗಿಲ್ಲವು ಭಾರ । ತೀಕಾಂತಾನಿನಗೆ ಬಹವೆಂತೋ ॥೯॥ ಮಾತರಿಶ್ವನೆ ಎನ್ನ ಮಾತುಲಾಲಿಸಿ ಜಗ । ನ್ನಾಥ ವಿಠ್ಠಲನ ಮನದಲ್ಲಿ ॥ ಮನದಲ್ಲಿ ತೋರಿ ಭವ । ಭೀತಿಯನು ಬಿಡಿಸೋ ಭವ್ಯಾತ್ಮಾ ॥೧೦॥ ಶ್ರೀಗುರುಮಧ್ವೇಶಾರ್ಪಣಮಸ್ತು.

ತತ್ವಸುವ್ವಾಲಿ. ರಾಗ. ಶ. ಭ. ತಾಳ. ಝಂಪೆ.

ಕಲಿಮುಖ್ಯ ದೈತ್ಯರುಪಟಳವ ಪರಿಹರಿಸು ಮ । ತ್ಕುಲದೈವ ಗುರುವೇ ಕಾರುಣ್ಯ ॥ ಕಾರುಣ್ಯಸಿಂಧು ನಿ । ನ್ನೊಲಿಮೆಯನುನೋಡಿ ಹರಿಕಾಯ್ವ ॥೧॥

ಮಧ್ವಾಖ್ಯ ಎಂಬುವ ಪ್ರಸಿದ್ಧ ಶ್ರುತಿಪ್ರತಿಪಾದ್ಯ । ಮಧ್ವಮುನಿಗೇಯ ತವ ಕೀರ್ತಿ । ತವಕೀರ್ತಿಯನ್ನುರು । ದ್ರಾದ್ಯರಿಗಶಕ್ಯ ತುತಿಸಲ್ಕೆ ॥೨॥ ವಾಯು ಹನುಮದ್ಭೀಮ । ರಾಯ ಮಧ್ವರ ನಾಮ । ಬಾಯೊಳುಳ್ಳವಗೆ ಜನ್ಮಾದಿ ॥ ಜನ್ಮಾದಿ ರೋಗಭಯ । ವೀಯನೆಂದೆಂದೂ ಭಗವಂತಾ ॥೩॥ ಹುಣಸಿ ಬೀಜದಿ ಪಿತನ ಋಣವತಿದ್ದಿದ ಪೂರ್ಣ । ಗುಣವಂತ ಗುರುವೇ ದಯ ಮಾಡು ॥ ದಯ ಮಾಡಿ ನೀಯನ್ನಾ । ಋಣ ಮೂರರಿಂದ ಉದ್ಧರಿಸು ॥೪॥ ಬುದ್ಧಿ ಬಲ ಕೀರ್ತಿ ಪರಿಶುದ್ಧಭಕ್ತಿ ಜ್ಞಾನ । ಸದ್ಧೈರ್ಯಾರ್ಜಾಡ್ಯ ಆಯುಷ್ಯ ॥ ಆಯುಷ್ಯ ನಿತ್ಯ ಅಭಿ । ವೃದ್ಧಿಗೈಸುವಿಯೋ ಪವಮಾನ ॥೫॥ ಮಾತರಿಶ್ವನೆ ನಿನ್ನ ಪ್ರೀತಿ ಯೊಂದೇ ಜಗ । ನ್ನಾಥವಿಠ್ಠಲನ ಕರುಣಕ್ಕೆ ॥ ಕರುಣಕ್ಕೆ ಕಾರಣ್ಯಮ ಯಾತನವು ಬರಲೂ ನಾನಂಜೆ ॥೬॥ ಶ್ರೀಗುರುಮಧ್ವೇಶಾರ್ಪಣಮಸ್ತು.

**ವಿಶೇಷಾಂಶ :—** ೭ನೇ ನುಡಿಯ ಅಭಿಪ್ರಾಯ :— ವಾಯುದೇವರು ಮಧ್ಯಗೇಹಾಚಾರ್ಯರಲ್ಲಿ ಪುತ್ರತ್ವೇನ ಅವತರಿಸಿ, ಸಾಹುಕಾರನ ಸಾಲವನ್ನು ಹುಣಸಿಬೀಜದ ರೂಪದಿಂದಿತ್ತು ತಂದೆಯ ಐಹಿಕ ಋಣವನ್ನೂ, ಪುತ್ರರಾದುದರಿಂದ ಪುನ್ನಾಮನರಕವನ್ನು ಅವರಿಗೆ ತಪ್ಪಿಸಿ ಪಾರತ್ರಿಕ ಋಣವನ್ನೂ ತೀರಿಸಿದಂತೆ, ಈ ಜೀವರಲ್ಲಿದ್ದು ಅವರೊಡನೆ ನೀವೂ ಜನಿಸುವದರಿಂದ ಹೇ, ಸುರಗುರುಗಳೇ ! ನಿಮಗೆ ನಮ್ಮ ಪುತ್ರತ್ವದ ಬಾಂಧವ್ಯವೂ ಪ್ರಾಪ್ತವಾಗಿ ಅಂತೇ, ನಮ್ಮನ್ನೂ ನೀವು ಐಹಿಕ, ಪಾರತ್ರಿಕ ಋಣಗಳಿಂದ ಮುಕ್ತರನ್ನುಮಾಡಿ ಪುನ್ನಾಮನರಕದಿಂದುದ್ಧರಿಸಬೇಕಾದ್ದು ಜಗತ್ಪಿತೃಗಳಾದ ನಿಮ್ಮ ಭಾರವು; ಎಂಬ ಅಭಿಪ್ರಾಯದಿಂದ ಹೀಗೆ ಪ್ರಾರ್ಥಿಸಿದ್ದಾರೆ ದಾಸರಾಯರ ಈ ಅನುಸಂಧಾನವು ಸರ್ವ ಸುಜೀವರ ಅನುಕರಣಕ್ಕೆ ದೃಢವಾಗಿ ಬರಲೆಂಬುದೇ ಅವರಪೇಕ್ಷೆಯು

ಜೀವರಲ್ಲಿದ್ದು ಅವರೊಡನೆ ಶ್ರೀಹರಿಯೂ. " **ಜನರೊಳಗಿದ್ದು ಜನಿಸುವ ಜಗದುದರ ತಾನು** " ಎಂಬ ( ಶ್ರೀಮದ್ಧರಿ. ಕ. ಸಾ. ಸಂ. ೨-೪ ) ವಚನದಂತೆ, ಶ್ರೀಹರಿಯ ಕೇವಲ ಸನ್ನಿಧಾನದಲ್ಲಿ ಸರ್ವದಾ ಸೇವೆಗೈಯುತ್ತಿರತಕ್ಕ ವಾಯುದೇವರೂ ಶ್ರೀಹರಿಯೊಡನೆಯೇ ಜನಿಸಿ ಬರತಕ್ಕವರಾದ್ದರಿಂದ, ಮೇಲೆ ದಾಸರಾಯರು ಹಾಗೆ ಪ್ರಯೋಗಮಾಡಿರುವರು.

**ಶ್ರೀಗುರುಮಧ್ವೇಶಾರ್ಪಣಮಸ್ತು**

# ಮಂಗಲ

ಶಿಷ್ಟಸಾಂಪ್ರದಾಯಕ್ಕನುಗುಣವಾಗಿ ಗ್ರಂಥ ಪರಿಸಮಾಪ್ತಿಯ ಸಮಯದಲ್ಲಿ ಇಷ್ಟದೇವತಾಸ್ತವನರೂಪದ ಮಂಗಲವನ್ನು ಪಾಡುವದು ಆ ಗ್ರಂಥಕಾರನಿಗೂ, ಅದನ್ನು ಪಠಿಸುವವರಿಗೂ ಮಹಾ ಶ್ರೇಯಃಸ್ಕರವಾದುದರಿಂದ, ಈಗ ಈ ಸದ್ಗ್ರಂಥದಿಂದ ಆರಾಧ್ಯರೂ, ಭಕ್ತಜನರ ಇಷ್ಟದೇವತಾಶ್ರೇಷ್ಠರೂ ಆದ ಶ್ರೀಪ್ರಧಾನವಾಯುದೇವರ ಸ್ತುತಿಗೈಯಲು, ಅವರ ತ್ರಿರೂಪಗಳನ್ನೂ ಪ್ರತ್ಯಕ್ಷವಾಗಿ ನೋಡಿ ಭಕ್ತ್ಯಾದರಗಳು ಹೆಚ್ಚಿ ಆನಂದದಿಂದ ವೈಯುಬ್ಬಿ, ಅವರ ಮಹಿಮೆಗಳನ್ನು ಕೊಂಡಾಡಿದ ಶ್ರೀ ಪಂಡಿತಾಚಾರ್ಯವರ್ಯರ ಶ್ರೀಮದ್ವಾಯುಸ್ತುತಿಯ ಶ್ಲೋಕದ್ವಯಗಳನ್ನೇ ನಾನು ಇಲ್ಲಿ, ಸೋತ್ತಮರ ಉಚ್ಛಿಷ್ಟವು ಸ್ವಾವರರಿಗೆ ಮಹಾಪ್ರಸಾದವೆನಿಸುವದರಿಂದ, ಪುನಶ್ಚರಣಗೈದು ಕೈಕೊಂಡಿದ್ದ ಗ್ರಂಥವನ್ನು ನಿರ್ವಿಘ್ನದಿಂದ ಕೊನೆಗಾಣಿಸಿದ ಪರಮಾನುಗ್ರಹರೂಪದ ಉಪಕಾರಾತಿಶಯಕ್ಕಾಗಿ, ಶ್ರೀಹರಿ. ವಾಯು. ಗುರುವರ್ಯರ ಪಾದಪದ್ಮಗಳಲ್ಲಿ ನನ್ನ ತನು ಮನಗಳನ್ನು ದೃಢವಾಗ್ಯರ್ಪಿಸಿ ಕೃತಾರ್ಥನಾಗುವೆನು.

**" ಮಾತರ್ಮೇ ಮಾತರಿಶ್ವನ್ ಪಿತರತುಲಗುರೋ ಭ್ರಾತರಿಷ್ಟಾಪ್ತಬಂಧೋ । ಸ್ವಾಮಿನ್ ಸರ್ವಾಂತರಾತ್ಮನ್ನಜರ ಜರಯಿತರ್ಜನ್ಮಮೃತ್ಯಾಮಯಾನಾಂ ॥ ಗೋವಿಂದೇ ದೇಹಿ ಭಕ್ತಿಂ ಭವತಿ ಚ ಭಗವನ್ನೂರ್ಜಿತಾಂ ನಿರ್ನಿಮಿತ್ತಾಂ । ನಿರ್ವ್ಯಾಜಾಂ ನಿಶ್ಚಲಾಂ ಸದ್ಗುಣ ಗಣ ಬೃಹತೀಂ ಶಾಶ್ವತೀ ಮಾಶು ದೇವ " ॥೧॥**

**" ವಂದೇ ತಂ ತ್ವಾ ಸುಪೂರ್ಣಪ್ರಮತಿಮನುದಿನಾ ಸೇವಿತಂ ದೇವವೃಂದೈಃ। ವಂದೇ ವೃಂದಾರುಮೀಶೇ ಶ್ರೀಯ ಉತ ನಿಯತಂ ಶ್ರೀಮದಾನಂದತೀರ್ಥಂ ॥ ವಂದೇ ಮಂದಾಕಿನೀ ಸತ್ಸರಿದಮಲ ಜಲಾಸೇಕ ಸಾಧಿಕ್ಯಸಂಗಂ। ವಂದೇಽಹಂ ದೇವ ಭಕ್ತ್ಯಾ ಭವಭಯ ದಹನಂ ಸಜ್ಜನಾನ್ಮೋದಯಂತಂ " ॥೨॥**

(ಶ್ರೀಮದ್ವಾಯುಸ್ತುತಿ ೧೪, ೪೦ ನೇ ಶ್ಲೋಕಗಳು).

**"ಏಕವಿಂಶತಿ ಮತಪ್ರವರ್ತಕ। ಕಾಕುಮಾಯ್ಗಳ ಕುಹಕಯುಕುತಿ ನಿ। ರಾಕರಿಸಿ ಸರ್ವೋತ್ತಮನು ಹರಿಯಂದು ಸ್ಥಾಪಿಸಿದಾ ॥ ಶ್ರೀಕಳತ್ರನಸದನ ದ್ವಿಜಪ ಪಿ। ನಾಕಿಸನ್ನುತ ಮಹಿಮ ಪರಮಕೃ।**

**ಪಾಕಟಾಕ್ಷದಿ ನೋಡು ಮಧ್ವಾಚಾರ್ಯ ಗುರುವರ್ಯಾ ||೩||**

(ಶ್ರೀ ಮದ್ಧರಿಕಥಾಮೃತಸಾರ, ಸಂಧಿ ೨೩-೧.)

**ಅರ್ಥ:**—ನನ್ನನ್ನು (ಪರ್ಯಾಯದಿಂದ ಈ ಜಗತ್ತನ್ನು) ಸಂರಕ್ಷಿಸುವ ಜನನಿಯೂ, ಶಿಕ್ಷಿಸುವ (ನಿಯಮನವಮಾಡುವ) ಜನಕನೂ (ಸಾತ್ವಿಕ ಜೀವರಿಗೆ) ಹಿತೋಪದೇಶಗೈಯುವ ಅಸದೃಶ ಗುರುವೂ, (ಜೀವಸಮೂಹಕ್ಕೆ) ನಿಜ ಪ್ರೇಮದ ಜೇಷ್ಟ ಭ್ರಾತೃವೂ, (ಭಕ್ತರಲ್ಲಿ ಬಹು) ಪ್ರೇಮದೋರುವ ಇಷ್ಟ ಮಿತ್ರನೂ, (ತನ್ನವರಿಗೆ ಸತ್ಸಾಧನವಮಾಡಿಸುವಲ್ಲಿ) ರಹಸ್ಯದ ಆಪ್ತನೂ, (ಮುಮುಕ್ಷುವರ್ಗಕ್ಕೆ) ಅತ್ಯಗತ್ಯದ ಬಂಧುವೂ, (ಚತುರ್ದಶಲೋಕಗಳ) ಸ್ವಾಮಿಯೂ, (ಸಮಸ್ತ ಜಗತ್ತಿನ) ಅಂತರ್ಯಾಮಿಯೂ, ಜರಾದಿ ವಿಕಾರ ವಿರಹಿತನೂ, (ಯಾವಾಗ್ಯೂ ಮೂವತ್ತೇ ವರ್ಷ ಪ್ರಾಯದವರಾದ ತ್ರಿದಶರಿಗೆಲ್ಲ ಉತ್ತಮನಾದುದರಿಂದ ಅಖಣಾತ್ಮಸಮ) ಶರೀರದ ಯುವಕನೂ, ಜನನ, ಮರಣ, ಮತ್ತು ತನು ಮನಗಳ ರೋಗಾದಿಗಳನ್ನು ಕಳೆಯುವವನೂ, ಶಾಶ್ವತ ವಾದ ಹಾಗೂ ಅಖಂಡೈಶ್ವರ್ಯರೂಪದ ವಿಜ್ಞಾನ, ಸದ್ಭಕ್ತಿ, ಸುದೃಢ ವೈರಾಗ್ಯಾದಿ ಸದ್ಗುಣಸಂಪನ್ನನೂ, ವೇದಾದಿಸಚ್ಛಾಸ್ತ್ರಗಳಿಂದ ಪ್ರತಿಪಾದ್ಯನೂ ಆದ ಹೇ, ಭಾವೀಬ್ರಹ್ಮದೇವರೇ! ನನಗೆ (ಈ ವಾಜ್ಯದಿಂದ ಸಕಲ ಮುಮುಕ್ಷು ವರ್ಗಕ್ಕೆ) ನಿಮ್ಮಲ್ಲಿ, ನಿಮ್ಮಂತರ್ಯಾಮಿಯಾದ ಶ್ರೀಮದಿಂದಿರಾಕಾಂತನಾದ ಮುಕುಂದನಲ್ಲಿ, ಪ್ರತಿಕ್ಷಣದಲ್ಲೂ ಅಭಿವೃದ್ಧಿಯನ್ನೈದುವಂಥ ನಿಷ್ಕಾಮಕ ವಾದ, ಅಹಂಮಮಕಾರ ವಿರಹಿತವಾದ, ದೃಢವಾದ, ಹಾಗೂ ಶ್ರೀಹರಿಸರ್ವೋತ್ತಮತ್ವ ಪೂರ್ವಕವಾದ ತಾರತಮ್ಯ, ಪಂಚಭೇದಗಳ ಸಮೀಚೀನ ಜ್ಞಾನಾದಿ ಉತ್ತಮ ಗುಣಗಳಿಂದ ಪೂರ್ಣವಾದ, ಶಾಶ್ವತಸದ್ಭಕ್ತಿಯನ್ನು ಶೀಘ್ರವಾಗಿ ಅನುಗ್ರಹಿಸಿರಿ. ||೧||

"ಸಮಸ್ತ ಚೇತನಸಮೂಹದಲ್ಲಿರುವ ಹೇ ಮುಖ್ಯಪ್ರಾಣಾಖ್ಯ ಪ್ರಧಾನ ವಾಯುದೇವರೇ! ಸರಸ್ವತಿ, ಭಾರತಿ, ಗರುಡ, ಶೇಷ, ರುದ್ರಾದಿ ಸರ್ವದೇವ, ದೇವಿಯರಿಂದ ನಿರಂತರದಲ್ಲೂ ಮಹಾಸೇವೆಯನ್ನು ಸ್ವೀಕರಿಸುವ, ಈ ಬ್ರಹ್ಮಾಂಡದ ಅಶೇಷ ವಿಶೇಷಜ್ಞಾನವುಳ್ಳ, ನಿಮ್ಮ ಪಾದಪದ್ಮಗಳಿಗೆ ಭಕ್ತ್ಯಾತಿಶಯದಿಂದ ದಂಡವತ್ಪ್ರಣಾಮಗೈಯ್ಯುವೆನು. ನಿಮಗೆ ಸರ್ವದಾ ಸರ್ವತ್ರದಲ್ಲೂ ಪ್ರತ್ಯಕ್ಷನಾಗಿದ್ದು, ನಿಮ್ಮ ಸರ್ವಸ್ವಾಮಿಯಾದ ಶ್ರೀಲಕ್ಷ್ಮೀನಾರಾಯಣನಿಗೂ ತರುವಾಯ ಶ್ರೀರಮಾದೇವಿಗೂ, ನೇಮದಿಂದ ನಮಸ್ಕರಿಸುತ್ತಿರುವ ಶ್ರೀಮದಾ

ನಂದತೀರ್ಥಾಖ್ಯರಾದ ನಿಮ್ಮನ್ನು ಸದ್ಭಕ್ತಿಪುರಸ್ಸರವಾಗಿ ಸದಾ ವಂದಿಸುವೆನು. ಶ್ರೀಮಹಾವಿಷ್ಣುವಿನ ಪಾದೋದ್ಭವಿಯಾದ, ಅಂತೆಯೇ, ಪರಮಪಾವನೆಯೂ, ಸುಮಂಗಲೆಯೂ ಆದ ಶ್ರೀಭಾಗೀರಥೀದೇವಿಯ ನಿರ್ಮಲೋದಕದಲ್ಲಿ ನಿತ್ಯಶಃ ಮಾಡಿದ ಮಜ್ಜನದಕಿಂತಲೂ, ನಿಮ್ಮ ಪಾದಸೇವಾ ಎಂಬುದರಿಂದ, ತೀರ್ಥವೆಂದು ಕರೆಸುವ, ನಿಮ್ಮಿಂದ ನಿರ್ಮಿತವಾದ ಸಿದ್ಧಾಂತರೂಪದ ದ್ವೈತಶಾಸ್ತ್ರದ ಶ್ರವಣ, ಪಠಣ, ಹಾಗೆಯೇ ಪರರಿಗೆ ಶ್ರವಣಗೈಸೋಣವೆಂಬ ಕ್ರಿಯಾರೂಪದ ಆಭ್ಯಂಗನದಿಂದ, ಅತ್ಯಧಿಕವಾದ ಪಾವಿತ್ರ್ಯಲಕ್ಷಣದ ಫಲ ( ಮೋಕ್ಷ )ವನ್ನು ಅನುಗ್ರಹಿಸುವ ನಿಮಗೆ, ನಿರ್ಮಲವಾದ ಭಕ್ತ್ಯುದ್ರೇಕವಾಗಿ ಸಾಷ್ಟಾಂಗ ಪ್ರಣಾಮಗೈಯುತ್ತೇನೆ. ದುಸ್ತರವಾದ ಈ ಸಂಸಾರದ ಭಯವನ್ನು ಸುಜ್ಞಾನೋಪದೇಶದಿಂದ ಪರಾಭವ ಗೊಳಿಸುವ ಮತ್ತು ಶ್ರೀಹರಿ, ವಾಯು, ಗುರುಭಕ್ತರನ್ನು ಐಹಿಕ ಪಾರತ್ರಿಕ ಸುಖಗಳಿಂದ ಆನಂದ ಬಡಿಸುವ ನಿಮಗೆ ಸದ್ಭಕ್ತಿ, ವಿಶ್ವಾಸ, ಆದರಗಳಿಂದ ಸಹಸ್ರ ವಂದನೆಗಳನ್ನು ಸಮರ್ಪಿಸುತ್ತೇನೆ ". ॥೨॥

" ಅದ್ವೈತಾದಿ ೨೧ ದುರ್ಮತಗಳನ್ನು ನಿರ್ಮಾಣ ಮಾಡಿದ ಮಾಯಾವಾದಿಗಳ ಕೇವಲ ಆಯೋಗ್ಯವಾದ ಯುಕ್ತಿಗಳನ್ನೆಲ್ಲ ವಾಗ್ವಾದದಲ್ಲಿ ತುಂಡು ತುಂಡಾಗಿ ಖಂಡಿಸಿ, ಈ ಪ್ರಪಂಚವು ಸತ್ಯ ಹಾಗೂ ನಿತ್ಯವಾದದ್ದು; ಜೀವ, ಈಶರಲ್ಲಿ ಯಾವಾಗ್ಯೂ ಅನಂತಾನಂತಾಂಶಗಳ ತಾರತಮ್ಯವಿದ್ದು, ಈಶನೇ ಜಗತ್ತಿಗೆಲ್ಲ ಸರ್ವೋತ್ತಮನು, ಎಂದು ಸಕಲ ಆಗಮಾದಿ ಸಚ್ಛಾಸ್ತ್ರಗಳಿಂದ ಸಿದ್ಧಮಾಡಿ ಸುಸ್ಥಾಪಿಸಿ, ಶ್ರೀರಮಾರಮಣನಾದ ಶ್ರೀಹರಿಗೆ ಸರ್ವತ್ರವಾಸಸ್ಥಾನರಾಗಿ ಗರುಡ, ಶೇಷ, ರುದ್ರಾದಿವಂದ್ಯರೂ, ಮಹಾಮಹಿಮೆಯ ಪರಮಗುರುಗಳೂ ಆದ ಶ್ರೀಮನ್ಮಧ್ವಾಚಾರ್ಯವರ್ಯರೇ ! ನಿಮ್ಮ ಪಾದ ಪದ್ಮಗಳ ದಾಸಾನುದಾಸರಾದ, ನಿಮ್ಮ ಮತವನ್ನು ಹೊಂದಿ ನಿಮ್ಮನ್ನೇ ನಂಬಿರುವ ನಮ್ಮನ್ನು, ಪರಮಾಂತಃಕರಣಪೂರ್ವಕವಾದ ಅನುಗ್ರಹ ದೃಷ್ಟಿಯಿಂದ ನಿರೀಕ್ಷಿಸಿ ಉದ್ಧಾರಗೈಯಿರಿ. ಇದೇ ನಿಮಗೆ ನಮ್ಮ ಕೊನೆಯ ದೈನ್ಯಹೃದಯದ ಪ್ರಾರ್ಥನೆಯು. ॥೩॥

ಇತಿ ಶ್ರೀಮದ್ರಾಘವೇಂದ್ರಗುರ್ವಂತರ್ಗತ ಭಾರತಿರಮಣ ಮುಖ್ಯಪ್ರಾಣಾಂತರ್ಯಾಮಿ ರುಕ್ಮಿಣೀಸತ್ಯಭಾಮಾಸಮೇತ ಶ್ರೀಕೃಷ್ಣಾರ್ಪಣಮಸ್ತು.